ಅಪರಂಜಿ

ಯುಗಾದಿ ವಿಶೇಷಾಂಕ

ಏಪ್ರಿಲ್ 98

ತಿಳಿನಗೆಯ ಕಾರಂಜಿ



ಬಿಡಿ ಪ್ರತಿ: ರೂ. 10

With Best Compliments from:

KARNATAKA INSECTICIDES & FUNGICIDES

Plot No. 27-B, II Phase, Peenya Industrial Area

BANGALORE - 560 058

PRODUCTS formulated and sold

- SVR Carbendazim 50% WP ISI marked
- A Broad Spectrum Systemic Fungicide recommended for Cofee Collar Rot, Black Rot & Brow-eye spot.
- Available in 50gms. 100 gms., 500 gms. and 1 kg. at economical prices.
- SVR BHC 50% WP
- Guaranteed quality, Recommended for swabbing stems for control of Coffee White stem Borer.

BAYLETON 25 WP

- Systemic Fungicide for Effective Coffee Leaf Rust Control. (It has the Registered Trade Name of Bayer AG Leverkusen West Germany). Bayleton Technical is imported from West Germany.

Marketed by:

S.V. Rangaswamy & Co. Ltd.

No. 2, III Cross, Kalasipalyam New Extension

BANGALORE - 560 002



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 15 ಏಪ್ರಿಲ್ '98 ಸಂಚಿಕೆ-7

ಬಹುಧಾನ್ಯ ಸಂವತ್ಸರಾರಂಭದ ಈ ಶುಭ ಸಂದರ್ಭದಲ್ಲಿ ಅಪರಂಜಿಯು ಎಲ್ಲ ಲೇಖಕ, ಲೇಖಕಿಯರಿಗೆ, ಜಾಹಿರಾತು ನೀಡುರುವವರಿಗೆ, ಓದುಗರಿಗೆ, ಹಿತೈಷಿಗಳಿಗೆ ಸಕಲ ಸನ್ಮಂಗಳಗಳನ್ನುಂಟುಮಾಡಲೆಂದು ಅಪರಂಜಿ ಭಗವಂತನಲ್ಲಿ ತಲೆಬಾಗಿ ಪ್ರಾರ್ಥಿಸುತ್ತಾಳೆ. ಆಗಿಹೋದ ಈಶ್ವರ ಸಂವತ್ಸರ ಅಪರಂಜಿಗೆ ಅಷ್ಟೇನು ಸುಗಮವಾಗಿರಲಿಲ್ಲ. ಅಪರಂಜಿಗಷ್ಟೇ ಅಲ್ಲ, ಇಡೀ ದೇಶವೇ ಅನಿಶ್ಚಿತತೆ, ಹಣಕಾಸಿನ ಮುಗ್ಗಟ್ಟಿನಿಂದ ವರ್ಷವೆಲ್ಲಾ ಬಳಲಿದೆ. ಪರಿಸ್ಥಿತಿ ಹೀಗಿದ್ದರೂ ಅಪರಂಜಿ ತನ್ನ ಉತ್ಸಾಹ, ಆಶಾಭಾವನೆಗಳಿಂದ ಭವಿಷ್ಯವನ್ನು ಇದಿರಿಸುವ ಪಣತೊಟ್ಟಿದ್ದಾಳೆ.

ಕಳೆದ ಯುಗಾದಿಯಂದು ನಾವು ಅಪರಂಜಿಯನ್ನು ಇನ್ನೂ ಹೆಚ್ಚು ಜನಪ್ರಿಯಗೊಳಿಸುವ ಉದ್ದೇಶದಿಂದ ಹಲವು ಕಾರ್ಯಕ್ರಮಗಳನ್ನು ಯೋಜಿಸಿಕೊಂಡಿದ್ದೆವು. ಒಟ್ಟಾರೆ ನೋಡಿದರೆ ಆ ನಿಟ್ಟಿನಲ್ಲಿ ಮಿಶ್ರ ಯಶಸ್ಸು ದೊರಕಿದೆಯೆಂದು ಹೇಳಬಹುದು. ಹೊಸ ಲೇಖಕ/ಖಕಿಯರ ಸೇರ್ಪಡೆ ಆರೋಗ್ಯಕರವಾಗಿ ಬೆಳೆದಿರುವುದು ಮುದ ನೀಡುವ ಸಂಗತಿ.ಓದುಗರು ಬರಹಗಳನ್ನು ಮೆಚ್ಚಿ ಬರೆದಿರುವುದನ್ನು ನೋಡಿದರೆ ಲೇಖನಗಳ ಗುಣಮಟ್ಟದ ಬಗ್ಗೆ ಆತಂಕಕ್ಕೆ ಕಾರಣವಿಲ್ಲವೇನೋ ಅನ್ನಿಸುತ್ತದೆ. ಚಂದಾದಾರರ ಸಂಖ್ಯೆಯಲ್ಲಿನ ಬೆಳವಣಿಗೆ ಅಂತಹುದೇನೂ ಆಶಾಜನಕವಾಗಿಲ್ಲ. ಬಹುಧಾನ್ಯದಲ್ಲಿ ಅಪರಂಜಿಗೆ ಬಹುಗ್ರಾಹಕರ ಲಭ್ಯವಾಗಲೆಂದು ನಮ್ಮ ಹಾರೈಕೆ.

ಈ ಸಂಚಿಕೆಯ ತಯಾರಿಯಲ್ಲಿ ನಮ್ಮ ಅಪರಂಜಿ ಟೀಮ್ ಬಹು ಶಿಸ್ತಿನಿಂದ ಕೆಲಸಮಾಡಿ ಪತ್ರಿಕೆಯನ್ನು ನಿಮಗೆ ತಲುಪುವಂತೆ ಮಾಡಿದ್ದಾರೆ. ಜಾಹಿರಾತು ಹೊಂದಿಸಿದ ಎ.ಆರ್. ರಾಜಗೋಪಾಲ್, ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿದ ರವಿ, ಹಾಗೂ ಮುದ್ರಣದ ಭಾರವನ್ನು ಹೊತ್ತ ವಿ.ಆರ್. ನಾಥ್. ಇವರಿಗೆ ಅಪರಂಜಿ ಆಭಾರಿ.

- ಶಿವಕುಮಾರ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)


ಈ ಸಂಚಿಕೆಯಲ್ಲಿ

ಸಂಪುಟ 15 ಏಪ್ರಿಲ್ '98 ಸಂಚಿಕೆ-7

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



ನಿಮ್ಮಪ್ಪ ಕಣ್ಣಿನ ಡಾಕ್ಟರಾದ ಮಾತ್ರಕ್ಕೆ ನೀವು ಹೀಗೆಲ್ಲಾ ಪತ್ರ ಬರೀಬಾರ್ದು ರೀ!



○ ಪ್ರಕಾಶ್

ಭಂಡನಾದ ಅರಿಯು ಯಾವನೋ

ಅವನೇ ಭಂಡಾರಿ!!

★★★

ವೆಂಕಟೇಶ್‌ಗೆ ಸೆಲೆಕ್ಷನ್ ಸಮಿತಿಯ

ಪ್ರಸಾದ ಸಿಕ್ಕಲಿಲ್ಲ!!

★★★

ಕೊಂಕಣ ಮಾರ್ಗದಲ್ಲಿ ನೇತ್ರಾವತಿ ಎಕ್ಸ್‌ಪ್ರೆಸ್ ರೈಲು
- ಸುದ್ದಿ

ಅದು ಮೈಲಾರ ಮುಟ್ಟುವುದಿಲ್ಲ ಎಂಬುದು ಖಚಿತವಂತೆ!!

★★★

'ಅತಿಯಾದ ಕ್ರಿಕೆಟ್'
- ವಾಚಕರ ವಾಣಿ

ಅರಣ್ಯ ರೋದನ!!

★★★

ಇರಾಕ್‌ನಲ್ಲಿ ಶಸ್ತ್ರಾಸ್ತ್ರ ತಪಾಸಣಾ ತಂಡಕ್ಕೆ ಲಂಕಾದ ತಜ್ಞ ಮುಖ್ಯಸ್ಥ
- ಸುದ್ದಿ

ಹುಲಿಗಳ ಜತೆ ಅನುಭವಸ್ಥರು!!

★★★

ಕೊಜೆಂಟ್ರಿಕ್ಸ್; ಮೇಲ್ಮನವಿಗೆ ರಾಜ್ಯ ಸರ್ಕಾರ ನಿರ್ಧಾರ
- ಸುದ್ದಿ

ಕೋರ್ಟಿನಲ್ಲಿ ಅವರ ಟ್ರಿಕ್ಸ್ ನಡೆಯಲಿಲ್ಲ!!

★★★

ವಾರ್ನ್‌ಗೆ ಅತಿಯಾದ ಪ್ರಚಾರ; ಅಜರ್
- ಕ್ರಿಕೆಟ್ ಸುದ್ದಿ

ತೆಂಡೂಲ್ಕರ್ ಅವರು ವಾರ್ನ್ ಮಾಡಲೇಬೇಕು!!

★★★

ಲಕ್ಷಾಂತರ ಮಹಿಳೆಯರು ತಮ್ಮ ಕೂದಲಿಗಾಗಿ ಸಾಧಾರಣ ಕೊಬ್ಬರಿ ಎಣ್ಣೆ ಬಳಸುವುದನ್ನು ನಿಲ್ಲಿಸಿದ್ದಾದರೂ ಏಕೆ?

ಈ ತರಹ ಜಾಹೀರಾತಿಗಾಗಿ!!

★★★

ಅಂಚೆಯಲ್ಲಿ ಪುಷ್ಪಗುಚ್ಛ
- ಪತ್ರಿಕೆ


ಇಲಾಖೆಯ ಈ ಯೋಜನೆ ಬಾಡದಿರಲಿ!!

★★★

ಚುನಾವಣೆಯಲ್ಲಿ ಗೆದ್ದವರಾರು?

ಡಾ|| ಗಿಲ್ ಮತ್ತು ಸಹೋದ್ಯೋಗಿಗಳು!!

★★★



ಸಮುದ್ರ ಸ್ನಾನ

- ಕು.ಗೋ.

ಬೆಳಕು ಹರಿಯುವ ಮುನ್ನವೇ ಬಾಗಿಲು ತಟ್ಟಿದ ಶಬ್ದ ಕೇಳಿ ಎದ್ದು ಬಾಗಿಲು ತೆರೆದಾಗ ಅಚ್ಯುತಾನಂದ ಗೋವಿಂದರ ದರ್ಶನವಾಗಿ 'ಎಲ್ಲಿಂದ ಬತ್ತಾ ಇದೆ ಸವಾರಿ' ಎಂದೆ.

'ಸವಾರಿ ಬರ್ತಾ ಇರುವುದಲ್ಲ. ಸಮುದ್ರ ಸ್ನಾನಕ್ಕೆ ಹೋಗ್ತಾ ಇದೆ. ನಿಮ್ಮ ಸವಾರಿಯೂ ಹೊರಡಲಿ' ಎಂದ ಅಚ್ಯುತ.

'ಮನೆಯಲ್ಲಿ ನೀನು ಒಬ್ಬನೇ ಇದ್ದಿ ಅಂತ ತಿಳಿಯಿತು. ಸೋಮಾರಿಯಾಗಿ ಬಿದ್ದಿರುವುದು ಬೇಡ ಅಂತ ನಿನ್ನನ್ನೂ ಕರೆದುಕೊಂಡು ಹೋಗಲು ಬಂದಿದ್ದೇವೆ' ಎಂದ ಅನಂತ.

'ಹಿ ಹ್ಹಿ ಹ್ಹಿ' ಎಂದ ಗೋವಿಂದ.

'ಬನ್ನಿ ಬನ್ನಿ. ಒಳಗೆ ಬನ್ನಿ. ಕಾಫಿ ಕುಡಿದು ಹೊಗುವ' ಎಂದೆ. ಬ್ರಶ್‌ಗೆ ಟೂತ್‌ಪೇಸ್ಟ್ ಸವರುತ್ತಾ. 'ರಾತ್ರಿ ಎಲ್ಲಿದ್ರಿ? ಏನುಕತೆ' ಎಂದೆ.

'ಒಳ್ಳೆ ಕೂಪ ಮಂಡೂಕ ಮಹಾರಾಯ ನೀನು, ಹೊರಗೆ ಏನು ನಡೀತಾ ಇದೆ ಅಂತಾನೂ ಗೊತ್ತಿಲ್ಲ ನಿನಗೆ' ಹೀಯಾಳಿಸಿದ ಅನಂತ.

'ನಿನ್ನೆ ರಾತ್ರಿ... ಮೇಳದ ಆಟ ಇತ್ತು ಮಾರಾಯಾ ಆದಿ ಉಡುಪಿ ಮೈದಾನದಲ್ಲಿ' ಎಂದ ಅಚ್ಯುತ.

'ಹಿ ಹ್ಹಿ ನಾವು ಅಲ್ಲಿಗೇ ಹೋಗಿದ್ದೆವು. ಆಟ ನೋಡಿ ಸೀದ ಸಮುದ್ರಕ್ಕೆ ಹೋಗುವವರು ನಿನ್ನ ನೆನಪಾಗಿ ಇಲ್ಲಿಗೆ ಬಂದೆವು ಹಿ ಹ್ಹಿ' ಎಂದು ನಕ್ಕ ಗೋವಿಂದ.

'ಇವತ್ತೇನು ವಿಶೇಷ ಸಮುದ್ರದಲ್ಲಿ?' ಬಾಯಲ್ಲಿದ್ದ ನೊರೆಯನ್ನು ಉಗುಳಿ ಬಂದು ಕೇಳಿದೆ.

'ಪ್ರಾರಬ್ಧ ಕರ್ಮ. ನೀನೊಬ್ಬ ಪುರೋಹಿತರ ಮಗ. ಇವತ್ತು ಎಳ್ಳಮವಾಸ್ಯೆ ಅಂಥ ಕೂಡಾ ಗೊತ್ತಿಲ್ಲವಲ್ಲಯ್ಯಾ ನಿನಗೆ' ಎಂದು ಅಚ್ಯುತ ಬೈದ.

'ರಾತ್ರಿಯಿಂದ ಟ್ಯಾಕ್ಸಿ, ರಿಕ್ಷಾ, ಸ್ಪೆಷಲ್ ಬಸ್‌ಗಳೆಲ್ಲಾ ಓಡಾಡ್ತಾ ಇವೆ, ಜನರೆಲ್ಲಾ ಸಾಲು ಸಾಲಾಗಿ ಹೋಗ್ತಾ ಇದ್ದಾರೆ. ವಡಭಾಂಡೇಶ್ವರ ಗಿಜಿಗುಟ್ಟುತ್ತಾ ಇದೆ. ಪಾಪ-ನಿನಗೊಂದೂ ಗೊತ್ತಿಲ್ಲ' ಅನಂತ ಛೇಡಿಸಿದ.

'ಹಿ ಹ್ಹಿ - ನಾರಾಯಣನಿಗೆ ಪಾಪ ಅವಳದೇ ಚಿಂತೆಯೋ ಏನೋ? ಇದು ಒಂದೂ ಗೊತ್ತಿಲ್ಲ ಹಿ ಹ್ಹಿ....' ಗೋವಿಂದ ಹಲ್ಲು ತೋರಿಸಿ ನಕ್ಕ.

'ಹಾಗೇನೂ ಇಲ್ಲ. ರಾತ್ರಿಯಿಂದಲೂ ಜನ ಹೋಗ್ತಾ ಇದ್ದದ್ದು ಗೊತ್ತಿತ್ತು. ಆದರೆ ನೀವು ಹೇಳಿದ ಮೇಲೆಯೇ ಗೊತ್ತಾದದ್ದು ಈವತ್ತು ಎಳ್ಳಮಾವಾಸ್ಯೆ ಅಂತ.

ನಾನು ಈ ವರೆಗೆ ಸಮುದ್ರ ಸ್ನಾನ ಮಾಡಿದವನಲ್ಲ' ಎಂದೆ ನಾನು.

'ಅದಕ್ಕೇ ನಾವು ಬಂದದ್ದು - ನಿನ್ನನ್ನೊಮ್ಮೆ ಸಮುದ್ರದಲ್ಲಿ ಮುಳುಗಿಸೋಣಾ ಅಂತ' ಅನಂತ ಉವಾಚ.

'ಸರಿ ಸರಿ ನೀವು ಕರೆದುಕೊಂಡು ಹೋಗುವುದಾದರೆ ನನಗೇನಾಗಬೇಕು. ನಾನೂ ಬರ್ತೇನೆ' ಎಂದು ಹೇಳಿ ಬಚ್ಚಲು ಮನೆಯತ್ತ ತೆರಳಿದೆ.

ಗೋವಿಂದ ಸ್ಟೌಗೆ ಬೆಂಕಿ ಹೊತ್ತಿಸಿ ಕಾಫಿ ತಯಾರಿಸಿದ. ಡಬ್ಬದಲ್ಲಿದ್ದ ಅವಲಕ್ಕಿ ತೆಗೆದು ಉಪ್ಪುಗರಿ ಮಾಡಿದ. ನಾಲ್ವರೂ ಸೇರಿ ಎಲ್ಲವನ್ನೂ ಖಾಲಿ ಮಾಡಿ ಮನೆಯಿಂದ ಹೊರಬಿದ್ದೆವು.

ಅಬ್ಬಾ ಏನು ಜನ! ತಂಡೋಪತಂಡವಾಗಿ ಆಬಾಲ ವೃದ್ಧರೆಲ್ಲಾ ಪಡಭಾಂಡೇಶ್ವರದತ್ತ ತೆರಳುತ್ತಿದ್ದರು - ನಡಿಗೆಯಲ್ಲಿ, ಗಾಡಿಯಲ್ಲಿ, ಸೈಕಲ್ಲುಗಳಲ್ಲಿ ಟ್ಯಾಕ್ಸಿ ರಿಕ್ಷಾ ಕಾರುಗಳಲ್ಲಿ, ಹೆಚ್ಚಿನವರು ಸ್ಪೆಷಲ್ ಬಸ್ಸುಗಳಲ್ಲಿ. 'ನಾವು ಬಸ್ಸಿನಲ್ಲಿ ಹೋಗುವುದಾ ಅಲ್ಲ....' ಎಂದೆ.

'ಅಲ್ಲವೇ ಸರಿ. ಬಸ್ಸಾ ಮಣ್ಣಾ! ಸೀದಾ ನಡೆದುಕೊಂಡೇ ಹೋಗುವ ಕಾಲೇಶ್ವರ ಟ್ರಾನ್ಸ್‌ಪೋರ್ಟ್‌ಕೀ ಜೈ ಐದು ಕಿಲೋಮೀಟರ್ ಬೆಳಿಗ್ಗೆ ನಡೆಯುವುದೇ ಸರಿ. ನಡೀರಿ ನೋಡುವ ಲೆಫ್ಟ್, ರೈಟ್....' ಆರ್ಡರ್ ಕೊಟ್ಟ ಅಚ್ಯುತ. 'ಹಿ ಹ್ಹಿ' ಎಂದ ಗೋವಿಂದ. ಅನಂತ ಸಿಗರೇಟಿಗೆ ಬೆಂಕಿ ಹಚ್ಚಿ ಮೂಗು, ಬಾಯಿಯಲ್ಲಿ ಹೊಗೆ ಬಿಟ್ಟ.

ಬಸ್ಸು ಟ್ಯಾಕ್ಸಿಗಳು ತುಂಬು ಬಸುರಿಯಾಗಿ ಧೂಳೆಬ್ಬಿಸುತ್ತಾ, ರಸ್ತೆಯ ಹೊಂಡಗಳನ್ನು ಹಾರಿ ಕರ್ಕಶ ಧ್ವನಿಗೈಯುತ್ತಾ ಓಡುತ್ತಿದ್ದವು. ಅನೇಕ ದಾರಿ ಹೋಕರ ಪರಿಚಯ ಅಚ್ಯುತಾನಂದ ಗೋವಿಂದರಿಗಿದ್ದುದರಿಂದ ಮಾತಿಗೇನೂ ಬರವಿರಲಿಲ್ಲ. ಮಳೆ, ಬೆಳೆ, ಆಟ, ನಾಟಕ, ರಾಜಕೀಯ, ಊಟ, ಮುಷ್ಕರ, ಬಂದ್, ಹಗರಣ, ಚುನಾವಣೆ, ಕಾಶ್ಮೀರ, ವೀರಪ್ಪನ್, ವೈಟೂಕೆ (Y2K) ಪ್ರಳಯ, ಪ್ರಣಯ, ದೇವರು, ಧರ್ಮ ಒಂದೇ ಎರಡೇ. ಎಲ್ಲ ವಿಚಾರಗಳೂ ಬಂದವು ಮಾತಿನಲ್ಲಿ. ಅಚ್ಯುತನಿಗೆ ನೆಲದ ಪಸಿರು ನೋಡುವ ಹುಚ್ಚು ಅನಂತನಿಗೆ ಸೌಂದರ್ಯದ ಉಸಿರನ್ನು ಆಸ್ವಾದಿಸುವ ಹುಚ್ಚು, ಗೋವಿಂದನಿಗಾದರೋ ಬಡತನದ ಬಸಿರನ್ನು ಸೀಳುವ ಕೆಚ್ಚು. ಒಟ್ಟಿನಲ್ಲಿ ಗುಂಪಿನಲ್ಲಿ ಒಂದು ರೀತಿಯ ಮನರಂಜನೆ. ಟ್ಯಾಕ್ಸಿಗಳೆಲ್ಲ ಪರ್ಮಿಟ್ ಇಲ್ಲದೆಯೂ ಹತ್ತಿಪ್ಪತ್ತು ಜನರನ್ನು ತುಂಬಿಸಿಕೊಂಡು ಕೈ ಎತ್ತಿದ ಪೋಲೀಸರ ಕೈಗೆ ಕೈ ತಾಕಿಸಿ ಓಡುತ್ತಿದ್ದವು. ಏನೋ ನಾಲ್ಕು ಕಾಸು ಹೀಗೆ ಸಂಪಾದಿಸಿದ್ದೇ ಬಂತು ಪಾಪ. ಹಲ್ಮೆಟ್ ಇಲ್ಲದವರನ್ನು ಹಿಡಿದು ದಂಡ ಹಾಕಿದ್ದೆ ಹಾಕಿದ್ದು. ಹೆಲ್ಮೆಟ್ ಹಾಕಿಕೊಂಡು ನಡೆದುಕೊಂಡು ಹೋದವರನ್ನು ಹಿಡಿದದ್ದೆ- ಸ್ಕೂಟರ್ ಇಲ್ಲವೆಂದು.

'ಕೊಡುವ ಕೈ, ಕೊಳ್ಳುವ ಕೈ ಎರಡನ್ನೂ ಕತ್ತರಿಸಿ ಹಾಕಬೇಕು' ಎಂದ ಅನಂತ.

'ಅನಾದಿಯಿಂದಲೂ ಬೆಳೆದು ಬಂದ ಸಂಪ್ರದಾಯ ಮಹಾರಾಯಾ ಅದು. ತಪ್ಪಿಸಲು ಯಾರಿಂದಲೂ ಸಾಧ್ಯವೇ ಇಲ್ಲ. ಜನರ ರಕ್ತಗತವಾಗಿದೆ ಅದು, ಈ

ಹಬ್ಬಾದಿಗಳನ್ನು ಆಚರಿಸುವಂತೆಯೇ ಅದು ಕೂಡಾ. ಅಚ್ಯುತ ತೀರ್ಮಾನ ಹೇಳಿದ. ಗೋವಿಂದ 'ಹಿ ಹ್ಹಿ ಹೌದು ಹೌದು' ಎಂದ.

'ನಾವು ಹೀಗೆ ಉಂಡಾಡಿಗುಂಡರಂತೆ ತಿರುಗುವುದಕ್ಕಿಂತ ಏನಾದರೂ ವ್ಯಾಪಾರ ಮಾಡಬಹುದಿತ್ತು' ಅನಂತನೆಂದ.

'ಒಂದು ಸಣ್ಣ ಹೋಟೆಲ್ ಇಡಬಹುದಿತ್ತು'

'ಕಷ್ಲೆ ಪುರಿ ಅಂಗಡಿ ಇಡಬಹುದಿತ್ತು'

'ಎಳನೀರು ರಾಶಿ ಹಾಕಿಕೊಂಡು ಕೂತುಕೊಳ್ಳಬಹುದಿತ್ತು'

'ಚುರ್‌ಮುರಿ, ಕಡ್ಲೆಕಾಯಿ ಅಂಗಡಿ ಹಾಕಬಹುದಿತ್ತು'

'ಪುಗ್ಗ, ಪೀಂ ಮಾರಾಟ ಮಾಡಬಹುದಿತ್ತು'

'ತಾಳಿಬೊಂಡ ಕೆತ್ತುತ್ತಾ ಕೂತುಕೊಳ್ಳಬಹುದಿತ್ತು'

'ಕುಂಕುಮ, ಹೂವು, ತೆಂಗಿನಕಾಯಿ, ಊದುಬತ್ತಿ, ಕರ್ಪೂರಗಳ ವ್ಯಾಪಾರ ಮಾಡಬಹುದಿತ್ತು.'

'ಕೈಕಾಲು ಮುದುಡಿಕೊಂಡು ಭಿಕ್ಷೆ ಬೇಡಬಹುದಿತ್ತು'

'ಅದಕ್ಕಿಂತ ಮರಳರಾಶಿಯ ಮೇಲೆ ಹೋಮ ಮಾಡಿ ಸ್ನಾನ ಮಾಡುವವರಿಗೆ ಸಂಕಲ್ಪ ಮಾಡಿಸಿ ತರ್ಪಣ ಬಿಡಿಸಬಹುದಿತ್ತು'

'ಅದ್ಯಾಕೆ ಬ್ಲೇಡ್, ಕತ್ತರಿ ಹಿಡಿದುಕೊಂಡು ಜೇಬು, ಜಡೆ ಕತ್ತರಿಸಬಹುದಿತ್ತು'

ಒಬ್ಬೊಬ್ಬರದು ಒಂದೊಂದು ಸಲಹೆ.

ಗೋವಿಂದ ಹೇಳಿದ 'ಅವೆಲ್ಲಕ್ಕಿಂತಲೂ ಸಮುದ್ರದಲ್ಲಿ ಸ್ನಾನ ಮಾಡುವ ಹೆಂಗಸರ ತೊಡೆ, ಮೊಲೆಗಳನ್ನು ನೋಡುತ್ತಾ ನಿಲ್ಲುವುದೇ ವಾಸಿ ಹಿ ಹ್ಹಿ.'

'ಗೋವಿಂದ ಈಚೀಚೆಗೆ ತುಂಬ ರಸಿಕನಾಗುತ್ತಿದ್ದಾನೆ' ಎಂದ ಅನಂತ, ಬಾಯಲ್ಲಿಳಿಯುತ್ತಿದ್ದ ನೀರನ್ನು ಒರಸಿಕೊಂಡು 'ಹಿ ಹ್ಹಿ ಹಾಗೇನೂ ಇಲ್ಲಪ್ಪಾ' ಎಂದು ನಕ್ಕ ಗೋವಿಂದ.

ನಾವು ವಡಭಾಂಡೇಶ್ವರವನ್ನು ತಲುಪಿದಾಗ ಗಂಟೆ ಇನ್ನೂ ಏಳಾಗಿರಲಿಲ್ಲ. ಜನಗಳ ಜಾತ್ರೆ, ಅಲ್ಲಲ್ಲಿ ವಾಹನಗಳು ನಿಂತಿದ್ದವು ಚಲಿಸುವ ಅಂಗಡಿಗಳು ಬಿಡಾರ ಬಿಟ್ಟಿದ್ದವು. ಒಂದಷ್ಟು ಹೋಟೆಲುಗಳು ಮೇಲೆದ್ದಿದ್ದವು. ಸಂತೆಯ ಸಣ್ಣಪುಟ್ಟ ಅಂಗಡಿಗಳೆಲ್ಲಾ ಅಲ್ಲಿ ಒಟ್ಟಾಗಿದ್ದವು. ವ್ಯಾಪಾರಿಗಳ ಕಿರಿಚಾಟ, ಜನಗಳ ಪರದಾಟ, ಹುಡುಗರ ನುಗ್ಗಾಟ, ಗಲಾಟೆಯೇ ಗಲಾಟೆ. ಮನರಂಜನೆಗೆಂದು ಬಂದವರೇ ಹೆಚ್ಚು. ಧರ್ಮ ಶ್ರದ್ಧೆಯಿಂದ ಬಂದವರೂ ಇದ್ದರೇ?

'ಸೃಷ್ಟಿ ಸೌಂದರ್ಯ ಅಪೂರ್ವವಾದುದು. ಈ ಹೆಂಗಸರಲ್ಲಿ ಎಂಥ ಸೌಂದರ್ಯವನ್ನು ಮೂಡಿಸಿದ್ದಾನೆ ದೇವರು' ಅನಂತ ತನ್ನಲ್ಲೇ ಹೇಳಿಕೊಂಡ.

'ನೇರವಾಗಿ ಹೇಳು ಮಹರಾಯಾ. ನೀನು ಬಂದದ್ದೇ ಈ ಹೆಂಗಸರ ಚೆಂದ,

ಅವರ ತೊಡೆ ಮೊಲೆಗಳನ್ನು ನೋಡಲಿಕ್ಕೆ ಅಂತ. ದಾಕ್ಷಿಣ್ಯ ಬೇಡ. ಹಿ ಹ್ಹಿ' ಗೋವಿಂದ ಹಿಹ್ಹೀಕರಿಸಿದ.

'ಶಾಂತಂ ಪಾಪಂ' ಎಂದೆ ನಾನು ನಗುತ್ತಾ.

'ಹೂಂ, ಶಾಂತಮ್ಮ, ಪಾಪಮ್ಮ, ಇನ್ನೂ ಎಂತೆಂಥದೋ ಅಮ್ಮಗಳೆಲ್ಲಾ ಇದ್ದಾರೆ ನೋಡು. ನೋಡು, ಕಣ್ತುಂಬ ನೋಡು. ಈ ಕಣ್ಣುಗಳಿರುವುದಿನ್ಯಾತಕೆ? ಹಿ ಹ್ಹಿ ಹ್ಹೀ' ಗೋವಿಂದ ನಕ್ಕ. ಎಲ್ಲರೂ ನಗಲೇ ಬೇಕಾಯಿತು.

ವಡಭಾಂಡೇಶ್ವರದ ಕೆರೆಯಲ್ಲಿ ಮುಳುಗಿ ಸಮುದ್ರಕ್ಕೆ ಹೋಗಲು ನಿಶ್ಚಯಿಸಿದೆವು.

'ನಮ್ಮ ಬಟ್ಟೆಗಳನ್ನು ನೋಡಿಕೊಳ್ಳುವುದು ಯಾರು?'

'ನೋಡಿಕೊಳ್ಳುವುದೇನು ಬಂತು ಸುಮ್ಮನೆ ಬಿಸಾಡಿದರೆ ಬಿದ್ದಿರುತ್ತದೆ. ಬಿಸಾಡಿದ್ದು ಬಿದ್ದಿರುತ್ತೆ - ಬಚ್ಚಿಟ್ಟದ್ದು ಕಳವಾಗುತ್ತದೆ. ಏನ್ಹೇಳ್ತೀರಿ?' ಅನಂತ ಹುಬ್ಬೇರಿಸಿ ನುಡಿದ.

ಮೂವರೂ ಬಟ್ಟೆ ಕಳಚಿ ಕೆರೆಗೆ ಹಾರಿದರು ನಾನೂ ಮೆಲ್ಲನೆ ಇಳಿದು ಕೆರೆಯಲ್ಲಿ ಮುಳುಗಿದೆ.

ನಾವು ನೀರಿನಿಂದ ಮೇಲೆ ಬಂದು ತಲೆ ಮೈ ಒರಸಿಕೊಂಡರೂ ಗೋವಿಂದ ನೀರಿನಲ್ಲಿ ನಿಂತು ಮೂಗು ಹಿಡಿದು ಧ್ಯಾನ ಮಾಡುತ್ತಿದ್ದ. 'ಸಾಕೋ ಗೋವಿಂದ. ಸಮುದ್ರ ಸ್ನಾನಕ್ಕೆ ಹೋಗುವ' ಎಂದು ಅಚ್ಯುತ ಹೇಳಿದಾಗ ಗೋವಿಂದ ಕಣ್ಣು ಬಿಟ್ಟು ಮೇಲೆ ಬಂದ.

ಜನರ ನೂಕು ನುಗ್ಗಲು ತುಂಬ ಜೋರಾಗಿತ್ತು. ನಡೆಯಲಾಗದ ಮುದುಕ ಮುದುಕಿಯರು, ಕೂಡದವರು, ಅಳುವ ಮಕ್ಕಳು, ಬೊಬ್ಬೆ ಹೊಡೆಯುವ ಯುವಕರು, ನಾಚಿದ ಯುವತಿಯರು, ಕಿರುಚಾಡುವ ವ್ಯಾಪಾರಿಗಳು, ತಿನ್ನುವ ಕುಡಿಯುವ ಜಗಿಯುವ ಮಂದಿ, ಸಮುದ್ರದಲ್ಲಿ ಮುಳುಗು ಹಾಕುವ ಭಕ್ತರು, ಹಣ್ಣು ಕಾಯಿ ಹಿಡಿದು ಹೋಗುವ ಆಸ್ತಿಕರು ಇವೆಲ್ಲವನ್ನು ನೋಡಿ ಬಹುಶಃ ದೇವರು ಕಿವುಡನಾಗಿ, ಮೂಗನಾಗಿ, ಅಂಗವಿಕಲನಾಗಿ ಗುಡಿಯೊಳಗೆ ಪವಡಿಸಿರಬಹುದೋ ಏನೋ! ಆತನನ್ನು ಎಬ್ಬಿಸಲು ನಾವು ಹೋಗಲಿಲ್ಲ. ದೇವಸ್ಥಾನದಿಂದ ರಸ್ತೆಯ ಮಾರ್ಗವಾಗಿ ಸಮುದ್ರದತ್ತ ತೆರಳಿದೆವು.

ರಸ್ತೆಯ ಇಕ್ಕೆಲದಲ್ಲೂ ಭಿಕ್ಷುಕರ ತಂಡ - ಅಸಹ್ಯ ನೋಟ ಕೊಡುವ ಕೈಗಳಿರುವವರೂ ಕೊಳ್ಳುವ ಕೈ ಬಾಯಿಗಳಿರುತ್ತವೆ, ಊರು ಪರವೂರಿನ ಭಿಕ್ಷುಕರು ತಮ್ಮ ಮುಂದೊಂದು ಕೊಳಕು ಬಟ್ಟೆ ಹಾಸಿ, ತಾವು ಕೂಡಾ ಆದಷ್ಟು ಕೊಳಕಾಗಿ ಕಂಡು, ನಾನಾ ರೋಗಿಗಳ ವೇಷ ಹಾಕಿಕೊಂಡು ಅಸಹ್ಯ ರೀತಿಯಲ್ಲಿ ಕಿರಿಚಾಡುತ್ತಾ ಆಸ್ತಿಕ ಮಹಾಶಯರುಗಳಿಂದ ಪೈಸೆಗಳ ಸಂಪಾದನೆ ಮಾಡುತ್ತಿದ್ದರು.

'ಗೋವಿಂದಾ ಸೀತೂರಿನ ತಿಮ್ಮಣ್ಣ ಇಲ್ಲೇ ಎಲ್ಲೋ ಇರಬೇಕು ನೋಡು' ಎಂದ ಅಚ್ಯುತ.

'ಹೌದು ಹೌದು ನೋಡು. ಮರಳ ರಾಶಿಯಲ್ಲಿ ಹೋಮದ ಹೊಗೆ ಎಬ್ಬಿಸಿ ಸಂಕಲ್ಪ ಮಾಡಿಸಲು ಕೂತಿರಬಹುದು' ಎಂದ ಅನಂತ.

'ಅವ ಬುದ್ಧಿವಂತ. ನಮ್ಮ ಹಾಗಲ್ಲ. ಸಮುದ್ರ ಸ್ನಾನವೂ ಆಯ್ತು, ಸಂಕಲ್ಪ ಮಾಡಿಸಿ ಹಣ ಸಂಪಾದನೆಯೂ ಆಯ್ತು ಅಂತ ಬಂದಿದ್ದಾನೆ. ಕಡಿಮೆಯೆಂದರೂ ಐನೂರು ರೂಪಾಯಿಯಾದರೂ ಗಿಟ್ಟಬಹುದು ಇವತ್ತು' ಎಂದ ಗೋವಿಂದ.

ಮರಳ ರಾಶಿಯ ಮೇಲೆ ಅಲ್ಲಲ್ಲಿ ಹೊಗೆ ಏಳುತ್ತಿತ್ತು. ಕೆರೆಯಲ್ಲಿ ಸ್ನಾನ ಮಾಡಿ ಬಂದವರು ಹೋಮದ ಹೊಗೆಯ, ಬೆಂಕಿಯ ಮುಂದೆ ಕುಳಿತು ಸಂಕಲ್ಪ ಮಾಡಿಸಿ ಸಮುದ್ರದ ಅಲೆಗಳಿಗೆ ತಲೆಯೊಡ್ಡುತ್ತಿದ್ದರು. ನಂಬುಗೆಯ ಕೊಂಡಿಗೆ ಬಲವಾಗಿ ಅಂಟಿಕೊಂಡಿದ್ದು ಸಾಂಪ್ರದಾಯಿಕ ಕಟ್ಟುಕಟ್ಟಲೆಗಳ ಮರೆಹೊಕ್ಕು ಇಹಲೋಕದ ಕರ್ಮಗಳನ್ನು ಪರಿಹರಿಸಿ ಪರಲೋಕದ ಪುಣ್ಯ ಕಟ್ಟಿಕೊಳ್ಳಬೇಕೆಂಬ ಆಸೆಯಿಂದ, ಹಂಬಲದಿಂದ ಪೂರ್ವಿಕರು ಮಾಡಿಟ್ಟ ಸಂಸ್ಕಾರವನ್ನು ಭಯ ಭಕ್ತಿಗಳಿಂದ ಮಾಡಿ ಹೋಗುತ್ತಿದ್ದ ಈ ಜನಸ್ತೋಮ ವರ್ಷೇ ವರ್ಷೇ ಬೆಳೆಯುತ್ತಿದೆಯೇ ಹೊರತು ಕ್ಷೀಣಿಸುತ್ತಿಲ್ಲ. ಮೇಲ್ನೋಟಕ್ಕೆ ದೇವರು ದಿಂಡರು, ಧರ್ಮ, ಕರ್ಮ ಸಂಪ್ರದಾಯ, ಸಂಸ್ಕಾರ ಇವುಗಳಲ್ಲಿ ನಂಬಿಕೆ ಇಲ್ಲವೆಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದರೂ ಆಂತರಿಕವಾಗಿ ಈ ಸಾಂಪ್ರದಾಯಗಳಿಗೆ ತಲೆಬಾಗಿಸಿ ಏನೋ ಸಮಾಧಾನ ಪಡುತ್ತಿದ್ದೇವೆ ಅನ್ನಿಸಿತು.

ವಿಸ್ತೀರ್ಣವಾದ, ವಿಶಾಲವಾದ, ಅಗಾಧವಾದ, ಗಂಭೀರವಾದ ಸಮುದ್ರದ ತೆರೆಗಳಿಗೆ ತಲೆಯೊಡ್ಡಿ, ತೆರೆಗಳೊಡನೆ ಚೆಲ್ಲಾಟವಾಡಿ ಮುಳುಗಿ, ಎದ್ದು ಮೈ ಮಂಡೆಗಳನ್ನು ಒರಸಿಕೊಂಡು ಬೆಳಗಿನ ಬಿಸಿಲಿಗೆ ಮೈಯೊಡ್ಡಿ ತುಸುಕಾಲ ನಿಂತೆವು. ಸಮುದ್ರದ ಬಳಿ ನೆರೆದಿದ್ದ ಜನಸ್ತೋಮ ಆ ಸಮುದ್ರದ ಮುಂದೆ ಕೇವಲ ಒಂದು ಬಿಂದುವಿನಂತೆ ಕಂಡಿತು. ಸಾಗರದ ಮುಂದೆ ನಿಂತು ಸೃಷ್ಟಿಯ ಅದ್ಭುತವನ್ನು ಅಚ್ಚರಿಯಿಂದ ವೀಕ್ಷಿಸುತ್ತಾ ತನ್ಮಯರಾಗಿದ್ದಾಗ ಅಚ್ಯುತ ಎಚ್ಚರಿಸಿದ - 'ಹೊಟ್ಟೆ ಖಾಲಿಯಾಗಿದೆ, ಇನ್ನು ಹೊರಡೋಣ' ಎಂದ.

ಕವಿತಾ ಮೇಡಂ
ಬರೆದ ಕಾದಂ-
ಬರಿಗಳಲ್ಲಿ
ಬರೀ ಮಸಾಲೆ ವಾಸನೆ
ಮತ್ತು ಪುರುಷರ ಶೋಷಣೆ

★★★

ಸಾಹಿತ್ಯ ಕೃಷಿ ಬೆಳೆಸಿ,
ವಿಮರ್ಶಕರಿಗಂಜಿದೊಡೆಂತಯ್ಯ?
ಭಾಷಣವ ಬಿಗಿಯ ಹೊರಟು, ಕೊಳೆತ ಟೊಮೆಟೊ,
ಮೊಟ್ಟೆ, ಚಪ್ಪಲಿಗಳಿಗಂಜಿದೊಡೆಂತಯ್ಯ?

ಶಂಸ

ಅಣಕುವಾಡು

(ಕನಕದಾಸರ ಕ್ಷಮೆ ಕೋರಿ)

- ಬೇಲೂರು ರಾಮಮೂರ್ತಿ

ಹಣ ಹಣ ಹಣವೆಂದು ಹೊಡೆದಾಡದಿರಿ
ನಿಮ್ಮ ಹಣದ ಬೆಲೆಯನೇನಾದರೂ ಬಲ್ಲಿರಾ.... ಬಲ್ಲಿರಾ.....

ಮಾಡದ ಕೆಲಸಗಳಿಲ್ಲ... ಹೂಡದ ಆಟಗಳಿಲ್ಲ
ಆಸೆ ಆಮಿಷ ಬೀರುವುದೆಲ್ಲ
ಹಣವಿದ್ದರೆ ಸಾಕು ನೆಂಟರೇನು.... ಇಷ್ಟರೇನು
ಹಣವೇ ನಮಗಿರುವ ಶತ್ರು ಕಂಡ್ಯ ಮನುಜ.....
ಹಣ ಹಣ ಹಣವೆಂದು ಹೊಡೆದಾಡದಿರಿ...

ಹಣವೇ ಸಕಲ ಕುಲಕ್ಕು ಬೇಕಲ್ಲವೇ
ಹಣದ ಮೂಲವನೇನಾದರೂ ಬಲ್ಲಿರಾ....
ಮಿಂಚಿನ ಬೆಳಕಂತೆ ಸ್ಥಿರವಲ್ಲವೀ ಹಣವು
ಸತ್ಯವನರಿತು ನೀ ನಡೆದಾಡು ಮನುಜಾ....
ಹಣ ಹಣ ಹಣವೆಂದು ಹೊಡೆದಾಡದಿರಿ....

ಹಣವೇ ಉಸಿರಾಟ ಹಣವೇ ತಿಂಡಿಯೂಟ
ಹಣಮಯವೀ ಬದುಕೆಂದು ಭ್ರಮಿಸಿ
ಹಣಕಾಗಿ ಬಡಿದಾಡಿ ಹೊಡೆದಾಡುವುದ
ಮರೆತು ಗುಣವನು ಗೌರವಿಸು ನೀ ಮನುಜ
ಹಣ ಹಣ ಹಣವೆಂದು ಹೊಡೆದಾಡದಿರಿ
ನಿಮ್ಮ ಹಣದ ಮೂಲವನೇನಾನದರೂ ಬಲ್ಲಿರಾ... ಬಲ್ಲಿರಾ....

With Best Compliments From:

M/S. PRAVEEN METAL
CORPORATION

Jain Temple Street,
Visveswarapuram
Bangalore

With Best Compliments From:

LANFIN (BANGALORE) PVT LTD
(DIRECT SETLING AGENTS)
(KOTAK MAHINDRA FINANCE)

307, II FLOOR, SHILLY PLAZA
22/1, KAMARAJ ROAD,
BANGALORE - 560 001.

PHONE: 5594500

ಕಿರ್ಕು, ಥಂಗು, ಒತ್ಲಾ....
ಚಿಂತನೆಗಳು!

- ಎಚ್. ಗೋಪಾಲಕೃಷ್ಣ

ಕೆಲವು ಪರಿಸರಗಳಿಗೆ ತಕ್ಕಹಾಗೆ ಭಾಷೆಯ ಉಪಯೋಗ ಆಗುತ್ತದಂತೆ. ಅಂತಹ ಸಂದರ್ಭಗಳಲ್ಲಿ ಭಾಷೆಗಳೂ ಸಹ ತಮ್ಮ ವೈವಿಧ್ಯತೆಯನ್ನು ಮೆರೆಯುತ್ತವಲ್ಲದೇ ಕೆಲವು ಪಾರಿಭಾಷಿಕ ಪದಗಳು ಅವುಗಳದೇ ಆದ ಅರ್ಥದಲ್ಲಿ ಪರಿಸರದಲ್ಲಿ ಪ್ರಯೋಗವಾಗುತ್ತದೆ. ರೇಷನ್ ಅಂಗಡಿಯಲ್ಲಿ ತೂಕ ಮಾಡುವಾತನಿಗೆ ಬಿಲ್ ಬರೆವಾತ 'ಲೇ ಸರಿಯಾಗಿ ತೂಗೋ' ಎಂಬ ವಾಕ್ಯ ಪ್ರಯೋಗಿಸಿದಾಗ 'ತೂಕದಲ್ಲಿ ಕೊಂಚ ಅಡ್ಜಸ್ಟ್' ಮಾತು ಎಂಬಂತಹ ಒಳ ಅರ್ಥವಿರುತ್ತದೆ. ಅದೇ ರೀತಿ ಆಟೋದಲ್ಲಿ ನೀವು ಪ್ರಯಾಣಿಸಿದ್ದೀರಿ. ಆಟೋ ಮೀಟರು ಇಪ್ಪತ್ತು ರೂಪಾಯಿ ತೋರಿಸುತ್ತಿದೆ ಎಂದಿಟ್ಟುಕೊಳ್ಳಿ, ನೀವು ಐವತ್ತರ ನೋಟು ನೀಡುತ್ತೀರಿ. ಆಟೋದವ ನಿಮಗೆ ಇಪ್ಪತ್ತೈದು ವಾಪಸ್ಸು ತೆತ್ತು 'ಕೊಂಚ ಅಡ್ಜಸ್ಟ್ ಮಾಡಿ ಸಾರ್' ಅನ್ನುತ್ತಾನೆ. ಆಗ ಐದು ರೂಪಾಯಿ ನೀವು ಅವನಿಗೆ ಭಕ್ಷೀಸಿನ ರೂಪದಲ್ಲಿ ದಾನ ಮಾಡಿ ಎಂಬಂತಹ ಒಳ ಅರ್ಥ ಹುದುಗಿರುತ್ತೆ. ಬೆಳಿಗ್ಗೆ ಬೆಳಿಗ್ಗೆ ಈತನ ಹತ್ತಿರ ಅದೇನು ಚೌಕಾಸಿ ಎಂಬ ಒಲ್ಲದ ಮನಸ್ಸಿನಿಂದ ನೀವು ಐದು ರೂಪಾಯಿ ಬಿಡುತ್ತೀರಿ. ಹೀಗೆ ಐದು ರೂಪಾಯಿ ನೀವು ಬಿಟ್ಟದ್ದಾದರೆ ಆಟೋದವನ ಹೃದಯದಲ್ಲಿ ಈತ ಸಭ್ಯ ಪ್ರಾಮಾಣಿಕ ಎಂಬ ಛಾಪು ಒತ್ತಿದ ಹಾಗೆ. ಮಸಲಾ ಮೀಟರ್‌ಗೆ ತಕ್ಕಷ್ಟು ತೆಗೆದುಕೋ ಎಂದು ನೀವು ಹಠ ಹಿಡಿದು ನಿಂತಿದ್ದೇ ಆದಲ್ಲಿ ಅವನ ಲೆಕ್ಕದಲ್ಲಿ ನೀವು 'ಸಾವ್ ಗಿರಾಕಿ' ಎಂಬ ಹೆಸರು ಗಳಿಸುತ್ತೀರಿ. ಈ 'ಸಾವ್' ಪದಕ್ಕೆ ಎಂತಹ ಡಿಕ್ಷನರಿಯಲ್ಲೂ ನಿಮಗೆ ಅರ್ಥ ಸಿಗದು! ಆದರೆ ಸಾವ್ ಎಂಬ ಪದ ಸರಿಸುಮಾರು ಎಲ್ಲರೂ ಪ್ರಯೋಗಿಸುತ್ತಾರೆ.

ಇದೇ ತರಹದ ಕೆಲವು ಪಾರಿಭಾಷಿಕ ಪದಗಳನ್ನು ನಾನು ನನ್ನ ಸರ್ವೀಸಿನಲ್ಲಿ ಕಲಿತಿದ್ದೇನೆ ಮತ್ತು ಅವುಗಳ ಅಪರ ಪ್ರಯೋಗವನ್ನೂ ಸಹ ನಡೆಸಿದ್ದೇನೆ. ನಾನು ಸರ್ವೀಸಿಗೆ ಸೇರಿದ ಹೊಸತರಲ್ಲಿ ನಮ್ಮ ಸೀನಿಯರು ಒಬ್ಬಾತನನ್ನು ತೋರಿಸಿದ. ನೋಡು ಅವನ ಹೆಸರು ಮೀಸೆ ಮೂರ್ತಿ ಅಂತ. ತುಂಬಾ ಕಿರಿಕ್ ಪಾರ್ಟಿ ಅಂದ. 'ಹಾಗಂದರೇನು?' ಅಂತ ಕೇಳಿದೆ. ಕಿರಿಕ್ ಅನ್ನುವ ಪದದ ಅರ್ಥ ತಿಳಿದಿರಲಿಲ್ಲ. ''ಮೀಸೆ ಮೂರ್ತಿ ಅಂದರೆ ಗೊತ್ತಾಗಲಿಲ್ಲವಾ? ಅವನ ಹೆಸರು ಮೂರ್ತಿ ಅಂತ. ಮೂರು ಜನ ಮೂರ್ತಿ ಅಂಬೋ ಹೆಸರಿನವರು ಈ ಸೆಕ್ಷನ್‌ನಲ್ಲಿದ್ದಾರೆ. ಇವನಿಗೆ ಜೋರು ಮೀಸೆ ಇದ್ದದರಿಂದ ಇವನ ಹೆಸರು ಮೀಸೆ ಮೂರ್ತಿ ಅಂತ.....''

ಕಿರಿಕ್ ಶಬ್ಧಕ್ಕೆ ಬದಲು ಈ ಮೀಸೆ ಪುರಾಣ ತೆಗೀತಿದಾನಲ್ಲಾ ಅಂತ ಅನಿಸಿದರೂ

ಅವನ ಮಾತಿನ ಕಡೆಗೆ ಗಮನಕೊಟ್ಟೆ. 'ಊಂ' ಅಂದೆ ಮುಂದುವರೆಸು ಎಂಬೋ ಅರ್ಥದಲ್ಲಿ.

'ಇನ್ನೊಂದು ಮೂರ್ತಿಗೆ ಇವನಷ್ಟು ಜೋರು ಮೀಸೆಯಿಲ್ಲ. ಆದರೆ ಅವನು ಯಾವಾಗ ಮಾತಾಡಿದರೂ ಅವನ ಹೆಂಡತಿ ಸಂಗತಿ ಇಲ್ಲದೇನೇ ಮಾತೇ ಮುಗಿಸುಲ್ಲ. ಅಂದಹಾಗೆ ನನ್ನ ವೈಫು ಅಂತ ಪ್ರತಿ ಪ್ಯಾರಾದ ಕೊನೇಲೂ ಸೇರಿಸೇ ಸೇರಿಸ್ತಾನೆ. ಅದಕ್ಕೇ ಅವನಿಗೆ ವೈಫ್ ಮೂರ್ತಿ ಅಂತ ಹೆಸರು. ಮೂರನೇ ಮೂರ್ತಿಗೆ ಇಲ್ಲಿರೋದು ಬೇರೆ ಹೆಸರು. ಅವನಿಗೆ ಅಮೇರಿಕಾನಾ ಅಂತ ಕರೀತೀವಿ. ಯಾಕೆ ಗೊತ್ತಾ.....'

'ಇಲ್ಲ' ಅಂತ ತಲೆ ಆಡಿಸಿದೆ.

'ಅವನು ಯಾವಾಗಲೂ ಅಮೇರಿಕಾ ವಿಷಯಾನೇ ಜಾಸ್ತಿ ಮಾತಾಡೋದು. ಇವನ ಸೋದರ ಮಾವನ ಷಡ್ಡಕನ ತಂಗಿಯ ಅತ್ತೆಯ ಅಣ್ಣನ ಮಗನ ಸ್ನೇಹಿತ ಅಮೇರಿಕಾದಲ್ಲಿದ್ದಾನಂತೆ. ಆದ್ದರಿಂದ ಅಮೇರಿಕಾ ಅಂದರೆ ಅವನಿಗೆ ಅಂಗೈ ನೆಲ್ಲಿಕಾಯಂತೆ. ಇದರಿಂದ ಅವನಿಗೆ ಅಮೇರಿಕಾನಾ ಅಂತ ಹೆಸರು' ಅಂತ ವಿವರಿಸಿದ.

'ಹೌದಾ ಇವರೇ' ಅಂತ ನಕ್ಕೆ. 'ಅಂದಹಾಗೆ ಕಿರಿಕ್ ಅಂದರೇನು ಸಾರ್?' ಅಂತ ಸೇರಿಸಿದೆ.

ಸೀನಿಯರು ದುರದುರ ನೋಡಿದ. ಎರಡು ದಿನ ಅವನ ಜೊತೆ ಏಗಿ ನಿಮಗೇ ತಿಳಿಯುತ್ತೆ... ಅಂದ. ಅವತ್ತು ಮೀಸೆ ಮೂರ್ತಿ ಸಂಪರ್ಕ ಆಗಲಿಲ್ಲ. ಮನೇಗೆ ಬಂದವನೇ ಕಿರಿಕ್ ಪದವನ್ನು ಮನೇಲಿರೋ ಆರು ಡಿಕ್ಷನರಿಗಳಲ್ಲೂ ಹುಡುಕಿದೆ ಸಿಗಲಿಲ್ಲ. ಹೇಗಿದ್ದರೂ ಜೀವಮಾನ ಪೂರ್ತಿ ಇದೇ ಕೆಲಸದಲ್ಲೇ ಕಳೀತೀನೋ ಏನೋ ಈಗಲೇ ಯಾಕೆ ತಲೆ ಕೆಡಿಸಿಕೊಳ್ಳೋದು ಅಂತ ತೆಪ್ಪಗಾದೆ. ನಿಧಾನಕ್ಕೆ ಮೀಸೆ ಮೂರ್ತಿ ಪರಿಚಯ ಮತ್ತು ಆತನೊಂದಿಗೆ 'ಸಹಬಾಳ್ವೆ' ಆರಂಭ ಆಯಿತು. ಪ್ರತಿಯೊಂದು ವಿಷಯದಲ್ಲೂ ತರಲೆ, ವಿತಂಡವಾದ, ಇಡೀ ಪ್ರಪಂಚವೇ ದೋಷ ಪೂರ್ಣ, ಯಾವುದೂ ಸರಿ ಇಲ್ಲ ಎಂಬಂತಹ ಈತನ ನಂಬಿಕೆ, ಈ ತರಹದ ಆತನ ವೈಶಿಷ್ಯಗಳು ಅರ್ಥವಾಗುತ್ತಾ ಹೋದಹಾಗೆ ಕಿರಿಕ್ ಪದದ ಅರ್ಥ ಕಂಡುಕೊಂಡೆ. ಮುಂದೆ ಇದೇ ಪದವನ್ನು ನಾನು ಕೋಟಿ ಕೋಟಿ ಸಲ ಬಳಸಿರಬಹುದು!

ಇದೇ ತರಹ ಕಲಿತ ಮೊತ್ತೊಂದು ಪದ ಅಂದರೆ ''ಢಂಗ್ ಹೊಡೆಯೋದು!'' ಈ ಢಂಗ್ ಹೊಡೆಯೋ ಪದ ಮೊದಲ ಸಲ ಕೇಳಿದ್ದು ಸಹ ನನ್ನ ಸೀನಿಯರ್‌ನ ಹತ್ತಿರವೇ. ಯಾರದೋ ವಿಷಯ ಹೇಳ್ತಾ 'ಆತ ಬಹಳ ಢಂಗ್ ಹೊಡೀತಾನೆ' ಅಂದ. ಕಿರಿಕ್ ಶಬ್ದದ ಅರ್ಥ ಕೇಳಿ ಅವನನ್ನ ಕೆರಳಿಸಿದ್ದು ಇನ್ನೂ ನೆನಪಿನಲ್ಲಿತ್ತು. ಅದರಿಂದ ಢಂಗ್ ಪದದ ಅರ್ಥ ಕೇಳಲಿಲ್ಲ ಡಿಕ್ಷನರಿ ಹುಡುಕಿದಾಗ ಸಗಣಿ ಅಂಬೋ ಅರ್ಥ ಸಿಕ್ಕಿತು. ಮಾರನೇ ದಿವಸವೇ ಢಂಗ್ ಹೊಡೆಯುತ್ತಾನೆ ಎಂದು ಆರೋಪಿಸಿಕೊಂಡವನ ಸಂಪರ್ಕ ಬೆಳೆಸಿದೆ. ಮೊದಲನೇ ದಿವಸ ಆತನೊಂದಿಗೆ ಮಾತನಾಡಿದ್ದು ಇನ್ನೂ ಕಿವಿಯಲ್ಲಿ ಈಗ ಕೇಳಿದ ಹಾಗಿದೆ. 'ಇಂತಹ ಕಡೆ' ಕೆಲಸಕ್ಕೆ

ಸೇರಿದ ನನ್ನ ಬಗ್ಗೆ ಆತ ಅನುಕಂಪ ತೋರಿದ ಭಾರತದ ಅಂದರೆ ಗವರ್ಮೆಂಟ್ ಆಫ್ ಇಂಡಿಯಾದ ಪ್ರತಿ ಮಿನಿಸ್ಟರು ಈತನಿಗೆ ತೀರಾ ಪರಿಚಿತ ಅಂದ. ಬೇಕಿದ್ದರೆ ಒಂದು ಮಾತು ನನಗೆ ಹೇಳಿ ಬೇರೆ ಕಡೆ ನಿಮಗೆ ಕೆಲಸ ಕೊಡಿಸ್ತೀನಿ ಅಂದ. ಇವನ ಇನ್‌ಫ್ಲೂಯೆನ್ಸ್‌ನಲ್ಲಿ ಯಾರ್‍ಯಾರು ಎಲ್ಲೆಲ್ಲಿ ಕೆಲಸಕ್ಕೆ ಸೇರಿದಾರೆ ಅಂತ ಒಂದು ಪಟ್ಟಿ ನೀಡಿದ. ಪಟ್ಟಿ ಪ್ರಕಾರ ನಮ್ಮ ಆಗಿನ ಪ್ರಧಾನಿಗಳೂ ಸಹ ಈತನನ್ನ ಕೇಳೀ ಅವರ ಮಂತ್ರಿಮಂಡಳದಲ್ಲಿ ಮಂತ್ರಿಗಳನ್ನ ಸೇರಿಸಿಕೊಳ್ಳುತ್ತಿದ್ದರು! ಪ್ರತಿ ದಿವಸ ಸಂಪರ್ಕ ಹೆಚ್ಚಾದ ಹಾಗೆ ಈ ರೀತಿ ಬೊಗಳೆ ಹೊಡೆಯೋದು ಈತನಿಗೆ ಒಂದು ಅಭ್ಯಾಸ ಅಂತ ಅರ್ಥ ಆಯಿತು. ಬೊಗಳೆ ಬಿಡುವವರಿಗೆ 'ಢಂಗ್ ಹೊಡಿಯೋದು' ಅಂತ ಹೇಳುತ್ತಾರೆ ಅಂತ ಅರ್ಥ ಆಯಿತು.

'ಡಂಗ್ ಹೊಡಿಯೋದು' ಈ ಅರ್ಥ ನೀಡಿದರೆ ''ಢಂಗ್ ಆದರು'' ಅದೇನು ಅರ್ಥ ನೀಡುತ್ತೆ ಗೊತ್ತೇ? ಈ ಢಂಗ್ ಹೊಡೆಯೋ ವ್ಯಕ್ತಿ ಒಂದು ಸಲ ಮೇಲಧಿಕಾರಿ ಸಂಗಡ ಮತಾಡ್ತಾ ನಿಂತಿದ್ದನಂತೆ. ಈತ ಮಾತು ಮುಗಿಸಿ ಅತ್ತ ಸರಿದ ಕೂಡಲೇ ಮೇಲಧಿಕಾರಿ ಕರ್ಚೀಫಿನಿಂದ ಮುಖ ಒರೆಸಿಕೊಳ್ಳುತ್ತಾ ತನ್ನ ಗುಹೆ ಸೇರಿತಂತೆ. ಗುಹೆ ಬಾಗಿಲಲ್ಲಿ ಬಗ್ಗಿ ನೋಡಿದವರು ಬಂದು ಹೇಳಿದರು ''ಅದೇನೋ ದಪ್ಪನೆ ಪುಸ್ತಕ ಇಟ್ಟುಕೊಂಡು ಅರ್ಥ ಹುಡುಕ್ತಾ ಇದ್ದರು. ಢಂಗ್ ಹೊಡೆದು ಹೋಗಿದ್ದರು'' ಅಂತ.

ಢಂಗ್ ಹೊಡೆದು ಹೋಗಿದ್ದವರು ಹೇಗಿರ್ತಾರೆ ಅಂತ ಅವರ ಕಛೇರಿಗೆ ನುಗ್ಗಿದೆ. 'ಬನ್ರೀ ಬನ್ರೀ' ಅಂದರು. ಅವರೆದುರು ಕೂತೆ ''ಆ ನಿಮ್ಮ ಅಸಿಸ್ಟೆಂಟು ಇಷ್ಟು ಹೊತ್ತೂ ಅದೇನೋ ಇಂಗ್ಲೀಷ್‌ನಲ್ಲಿ ಹೇಳಿದಾ ರೀ ಬಡಬಡ ಅಂತ. ನೆನಪಿನಲ್ಲಿರೋ ಪದಗಳ ಅರ್ಥ ಹುಡುಕ್ತಾ ಇದೀನಿ'' ಅಂದರು. ಪಾಪ ಈತನಿಗೆ ಕನ್ನಡ ಬರದು, ನನ್ನ ಶಿಷ್ಯ ಅದೇನು ಹೇಳಿದಾನೋ ಅಂತ ಗಾಬರಿಯಿಂದ 'ಏನಂದ ಸಾರ್?' ಅಂದೆ. ಅವರ ತಲೆ ಕೆದರಿ ಹೋಗಿತ್ತು. ಮೇಲೆ ಮೇಲೆ ಉಸಿರು ಬಿಡುತ್ತಿದ್ದರು. ನಮ್ಮಾತ ಮಾತಿನ ಮಧ್ಯೆ ''... ವೆಂಟ್ ಇನ್ ಬಾಯ್ಸ್- ಐ ಕ್ಯಾಕರ್ಸ್ಡ್...'' ಅಂತೇನೋ ಹೇಳಿದ್ದನಂತೆ. ಇವರಿಗೆ ಅದರ ಅರ್ಥ ಸಿಗಲಿಲ್ಲ. ನಗೂನ ತಡೆದುಕೊಂಡು ವೆಂಟ್ ಇನ್ ಬಾಯ್ಸ್ ಅಂದರೆ ಬಾಯೊಳಗೆ ಹೋಯಿತು, ಐ ಕ್ಯಾಕರ್ಸ್ಡ್ ಅಂದರೆ ಕ್ಯಾಕರಿಸಿದೆ ಅಂತ ಅರ್ಥ ಸಾರ್ ಅಂದೆ. ಹಿಂದಿನ ದಿವಸ ರಾತ್ರಿ ಒಂದು ಸೊಳ್ಳೆ ಈತನ ಬಾಯಿ ಹೊಕ್ಕಿದ್ದೂ ಈತ ಕ್ಯಾಕರಿಸಿ ಅದನ್ನ ಆಚೆ ಕಳಿಸಿದ್ದೂ ಈತ ಹೇಳಿದ್ದ ವಿಷಯ ಅಂತ ಅರ್ಥೈಸಿಕೊಂಡಿದ್ದೆ. ಮೇಲಧಿಕಾರಿ ನಿರಾಳವಾಗಿ ನಿಟ್ಟುಸಿರುಬಿಟ್ಟ, 'ಅಬ್ಬಾ' ಅಂದ! ಢಂಗ್ ಆದವನು ಹೇಗಿರ್ತಾನೆ ಅಂತ ಅವತ್ತು ಕಣ್ಣಾರೆ ಕಂಡೆ.

ನೀವು ಎಲ್ಲೇ ಕೆಲಸ ಮಾಡಿ ಒಂದು ಅಂಶ ನಿಮ್ಮ ಗಮನಕ್ಕೆ ಬಂದೇ ಬರುತ್ತೆ. ಅದೆಂದರೆ ಕೆಲವರು ತಲೆ ಮೇಲೆ ತಲೆ ಹೋಗುವ ಸಂದರ್ಭಗಳೇ ಬಂದರೂ ಕ್ಯಾರೇ ಅನ್ನದೇ ತಮ್ಮ ಪಾಡಿಗೆ ತಮ್ಮ ಪ್ರೈವೇಟ್ ಕೆಲಸ ನಡೆಸುತ್ತಾರೆ. ಪ್ರೈವೇಟ್ ಕೆಲಸ ಅಂದರೆ ಹಣಕಾಸಿನ ವ್ಯವಹಾರ, ಬಟ್ಟೆ ಮಾರಾಟ, ಸೈಟು ಬಿಸಿನೆಸ್ಸು, ಮನೆ ಕಂಟ್ರಾಕ್ಟ್

ವ್ಯವಹಾರ ಇತ್ಯಾದಿ. ಅಂದರೆ ತಮ್ಮ ಸಂಬಳದ ಕೆಲಸದ ವ್ಯಾಪ್ತಿಯಿಂದ ಸಂಪೂರ್ಣ ಭಿನ್ನವಾದವು ಮತ್ತು ವ್ಯಾಪ್ತಿಯ ಹೊರಗಡೆಯ ಆಯಾಮಗಳು ಇವರ ಆಸಕ್ತಿಗಳು. ಇವರು ತಮ್ಮ ಸ್ವಂತ ಅಂದರೆ ಸಂಬಳ ಪಡೆಯುವ ಕೆಲಸ ಮಾಡುವುದೇ ಕಮ್ಮಿ. ಯಾವಾಗಲೂ ಇಂತಹ ಕೆಲಸಗಳಲ್ಲೇ ಇವರು ಮುಳುಗಿರುವುದುಂಟು. ಇಂತಹವರಿಗೆ ಈ ಸಂಬಳ ಪಡೆಯುವ ಕೆಲಸಗಳು ಬೇಕೇ ಎಂದು ಹಲವಾರು ಬಾರಿ ಚಿಂತಿಸಿದ್ದೇನೆ. ಇಂತಹ ಕಡೆ ಕೆಲಸ ಅಂತ ಇರೋದರಿಂದ ಆತನಿಗೊಂದು 'ಸೋಷಿಯಲ್ ರಿಲೆವೆನ್ಸ್ ಮತ್ತು ಬೇಸ್ ಸಿಕ್ಕಿದೆ ಕಾಣ್ರೀ' ಎಂದು ಗೆಳೆಯರು ಹೇಳುತ್ತಾರೆ. ಆತ ಇಲ್ಲಿಗೆ ಬರೋದರಿಂದ ಆತನಿಗೆ ಕಾಂಟಾಂಕ್ಟ್ಸ್ ಜಾಸ್ತಿ ಆಗುತ್ತೇರೀ ಎಂದು ನಮ್ಮ ಆಫೀಸಿನಲ್ಲಿ ಸಂಬಳ ಪಡೆಯುವ ಕಾಂಟ್ರಾಕ್ಟರ್ ಒಬ್ಬರ ಬಗೆಗೆ ಮತ್ತೊಬ್ಬರು ಹೇಳಿದ್ದುಂಟು. ಈ ರೀತಿ ಬಿಸಿನೆಸ್ ಪೀಪಲ್ಲುಗಳನ್ನು ಅದ್ಯಾಕೋ ಯಾರೂ ಕೆಲಸದ ಬಗ್ಗೆ ಕೇಳುವುದೇ ಇಲ್ಲ. ಒಮ್ಮೆ ಹಿರಿಯ ಅಧಿಕಾರಿ ಒಬ್ಬರ ಸಂಗಡ ಮಾತಿಗೆ ಮಾತು ಬೆಳೆದಾಗ ಇಂತಹ ಒಬ್ಬರನ್ನು ತೋರಿಸಿದೆ. ''ಅವರಾ? ಅವರು ಬಿಡ್ರೀ ಓತ್ಲಾ....'' ಅಂದರು.

ಸರಿ ಎಂದಿನ ಹಾಗೆ ಅಂದು ಸಂಜೆಯೇ ಎಂಟು ಡಿಕ್ಷನರಿ - ಕೆಲಸಕ್ಕೆ ಸೇರಿದ ನಂತರ ಮತ್ತೆರೆಡು ಡಿಕ್ಷನರಿ ನನ್ನ ಕಪಾಟಿನಲ್ಲಿ ಅಂಗಡಿಯಿಂದ ಬಂದು ಸೇರಿತ್ತು - ಹರಡಿ ಕೂತೆ. ಒಂದೂವರೆ ಘಂಟೆ ಹುಡುಕಿದರೂ ಓತ್ಲಾ ಪದದ ಅರ್ಥ ಸಿಕ್ಕಿದ್ದರೆ ಕೇಳಿ. ಪಳಗಿದ ಹಾಗೆ ತಗೊಳ್ಳೋ ಸಂಬಳಕ್ಕೆ ನ್ಯಾಯ ಒದಗಿಸದೇ ಇರುವವರು ಓತ್ಲಾಗಳು ಎಂದು ನಾನೇ ಅರ್ಥೈಸಿದ್ದೇನೆ.

ಆರಡಿ ಮೀರಿದ ಎತ್ತರದ ಒಂದೂವರೆ ಕೇಜಿಯಷ್ಟು ತೂಗುವ ಮೀಸೆ ಹೊತ್ತ ಮೂವತ್ತು ನಲವತ್ತು ಮಂದಿಯ ಗುಂಪು ಸುಮ್ಮನೇ ಸುತ್ತಾಡುವುದನ್ನೂ ಫ್ಯಾಕ್ಟರಿಗೆ ಸೇರಿದ ಹೊಸದರಲ್ಲಿ ಗಮನಿಸಿದ್ದೆ. ''ಯಾರ್ರೀ ಅದು?' ಅಂತ ಸಹೋದ್ಯೋಗಿಯನ್ನು ಕೇಳಿದೆ.

'ಅವರಾ? ಲೀಡ್ರುಗಳು ಸರ್' ಅಂದರು.

''ಲೀಡ್ರುಗಳು ಅಂದರೆ? ಅವರ ಕೆಲಸ ಏನು?''

'ಅವರಿಗೆ ಕೆಲಸವಾ? ಕೆಲಸ ಹೇಳಿ ಜೈಸಿಕೊಂಡವನು ಯಾವನವ್ನೆ?' ಅಂತ ಉತ್ತರ ಬಂತು.

ಈ ಗುಂಪು ಇಡೀ ಫ್ಯಾಕ್ಟರಿಯನ್ನು ದಿವಸಕ್ಕೆ ಏಳೆಂಟು ಸರ್ತಿ ಸುತ್ತು ಹಾಕೋದೂ, ಕೆಲಸ ಮಾಡ್ತಿರೋರ ಹತ್ತಿರ ಹೋಗಿ ಮಾತಿಗೆ ನಿಂತು ಕೆಲಸ ನಿದಾನ ಮಾಡೋದು ಗಮನಿಸಿದೆ; ಹೀಗೆ ಹೀಗೆ ಆಗ್ತಿದೆ ಅಂತ ಮೇಲಧಿಕಾರಿಗೆ ತಿಳಿಸಿದೆ. 'ಸುಮ್ಮಗಿರ್ರೀ ಅವರ ತಂಟೇಗೆ ಹೋಗಬೇಡಿ' ಅಂದರು.

'ಅಲ್ಲಾ ಸಾರ್ ಸುಮ್ಮನೆ ಸುತ್ತೋಕೆ ಅವರಿಗೆ ಸಂಬಳ ಕೊಡಬೇಕಾ?'

'ಹಾಗೇನಾದರೂ ಗಟ್ಟಿಯಾಗಿ ಹೇಳೀರಿ ನಾಳೇನೇ ಸ್ಟ್ರೈಕ್ ಆಗಿಬಿಡುತ್ತೆ...'

ಅಂದರು.

ಆರಾಮವಾಗಿ ಹೀಗೆ ಸುತ್ತಾಡಿಕೊಂಡು ಇರೋದು ಅಂದರೆ ಯಾರಿಗೆ ಇಷ್ಟ ಆಗುಲ್ಲ? ಹಿರಿ ಅಧಿಕಾರಿಗೆ ಒಂದು ಸಲ ಹೇಳಿದೆ. 'ನಾನೂ ಲೀಡ್ರು ಆಗ್ತೀನಿ...' ಆತ ನಕ್ಕರು 'ಅದು ಎಲ್ರಿಗೂ ಸಾಧ್ಯ ಇಲ್ರೀ. ನಿಮ್ಮಂತೋರಿಗಂತೂ ಅದು ಸಾಧ್ಯವೇ ಇಲ್ಲ.'

'ಯಾಕೆ ಸಾರ್ ಹಾಗಂತೀರಿ?' ಅಂತ ಕೇಳಿದೆ.

''ಫ್ಯಾಕ್ಟರೀಗೆ ಸೇರಿಸ್ಕೋಬೇಕಾದರೇನೇ ಇಂತಹವರು ಕೆಲಸಕ್ಕೆ 'ಇಂತಹವರು ಲೀಡ್ರುಗೆ' ಇಂತಹವರು ಓತ್ಲಾಕ್ಕೆ ಅಂತ ಡಿಮಾರ್ಕ್ಸ್ ಆಗಿರುತ್ತೆ...'' ಅಂದರು. ಒಂದು ಹೊಸಾ ಸಂಗತಿ ಕಲಿತೆ ಅಂತ ಖುಷಿ ಪಟ್ಟೆ.

ಎಲ್ಲರೂ ಓತ್ಲಾಗಳೇ ಲೀಡರುಗಳೇ ಆದರೆ ಈ ಫ್ಯಾಕ್ಟರಿ ಗತಿ ಹೇಗೆ, ನಮ್ಮನ್ನೇ ನಂಬಿರೋ ನಮ್ಮ ಹೆಂಡತಿ ಮಕ್ಕಳ ಗತಿ ಏನು ಅಂತ ಒಂದು ಸಲ ಮೈ ಜುಂ ಅಂತ ಅಂದುಬಿಟ್ಟಿತು. ಅವತ್ತಿನಿಂದ ಓತ್ಲಾಗಳು ಮತ್ತು ಲೀಡ್ರುಗಳು ಆಗೋ ಆಸೆ ಬಿಟ್ಟುಬಿಟ್ಟಿದ್ದೀನಿ. ನಮ್ಮ ದೇಶವನ್ನ ಉಳಿಸಿದ್ದೇನೆ.

ಒಂದೇ ಒಂದು ಮಾನವೀಯ ಘಟನೆ ನೆನಪಿಗೆ ಬರ್‍ತಿದೆ. ನಮ್ಮ ಸಹೋದ್ಯೋಗಿ ಒಬ್ಬ ಶ್ವಾಸಕೋಶದ ತೊಂದರೆಗೆ ಸಿಕ್ಕಿಕೊಂಡು ಎಂಟು ತಿಂಗಳು ರಜಾ ಹಾಕಿದ. ರಜಾ ಮುಗಿಸಿಕೊಂಡು ಕೆಲಸಕ್ಕೆ ಬಂದರೆ ನಮ್ಮ ಕಾರ್ಖಾನೆ ವೈದ್ಯರು ಆತ ಕೆಲಸಕ್ಕೆ ಹಾಜರಾಗಲು ಇನ್ನೂ ಆರೋಗ್ಯ ತಕ್ಕಷ್ಟು ಸುಧಾರಿಸಿಲ್ಲ ಅಂತ ಅವನಿಗೆ 'ಫಿಟ್‌ನೆಸ್' ಪತ್ರ ಕೊಡಲಿಲ್ಲ. ಸಹೋದ್ಯೋಗಿಯ ರಜಗಳೂ ಮುಗಿದು ಆರು ತಿಂಗಳು ಸಂಬಳ ಇಲ್ಲದೇ ರಜ ಉಪಯೋಗಿಸಿದ್ದ. ಆತನ ಸೇವಿಂಗ್ಸ್ ಎನ್ನಬಹುದಾದ ಹಣ ಖರ್ಚಾಗಿ ಹೋಗಿತ್ತು. ಫ್ರಾವಿಡೆಂಟ್ ಫಂಡು, ಬ್ಯಾಂಕು ಇತ್ಯಾದಿಗಳೆಡೆಗಳಲ್ಲಿ ಸಿಗುವ ಹಣ ಆಗಲೇ ಖರ್ಚಾಗಿ ಹೋಗಿತ್ತು. ಒಂದು ರೀತಿಯ ಅಸಹಾಯಕ ಪರಿಸ್ಥಿತಿಯಲ್ಲಿದ್ದ ಈತ ನಾಳೆ ಏನು ಎಂಬ ಪರಿಸ್ಥಿತಿ ತಲುಪಿದ್ದ. ಈ ಸುದ್ದಿ ಅದು ಹೇಗೋ ನಮ್ಮ ಸಿ.ಎಂ.ಡಿ. ಅವರ ಕಿವಿ ಮುಟ್ಟಿತು. ಆತನ ಪರ್ಸನಲ್ ಫೈಲ್ ತರಿಸಿ ತಮ್ಮ ಅಧಿಕಾರ ಚಲಾಯಿಸಿ ಆತ ಕೆಲಸಕ್ಕೆ ಹಾಜರಾಗಬಹುದು ಎಂದು ಸೂಚಿಸಿದರು. ಅವರ ಆಪ್ತರೊಬ್ಬರು ''ಅಲ್ಲಾಸಾರ್ ಪ್ಲಾಂಟ್ ಮೆಡಿಕಲ್ ಆಫೀಸರು ಎಂಪ್ಲಾಯೀ ಕೆಲಸಕ್ಕೆ ಅನ್‌ಫಿಟ್ಟು ಅಂತ ಬರೆದಿದ್ದಾರಲ್ಲಾ'' ಅಂತ ಕೇಳಿದರು. 'ಅಲ್ರೀ ಈಗಾಗಲೇ ಮುನ್ನೂರ ಐವತ್ತು ಜನ ಸುಮ್ಮನೆ ಅಲ್ಲಿ ಇಲ್ಲಿ ಸುತ್ತಾಡಿಕೊಂಡು ಸಂಬಳ ತಗೊಂಡು ತಿಂತಿದ್ದಾರೆ. ಈತ ಒಬ್ಬ ನಮಗೆ ದೊಡ್ಡ ಹೊರೆ ಆಗ್ತಾನೇನ್ರೀ?'

ಇಂತಹ ಆರ್ಗ್ಯುಮೆಂಟು, ಲಾಜಿಕ್ಕುಗಳನ್ನ ಆಗಾಗ ಸಾರ್ವತ್ರೀಕರಣಗೊಳಿಸಿ ಚಿಂತಿಸುವ ಗೆಳೆಯನೊಬ್ಬ ಹೇಳಿದ ''ಇಡೀ ಕಾರ್ಖಾನೇಲಿ ಎಲ್ಲರೂ ಬರೀ ಸಂಬಳ ತಗೊಂಡು ಸುತ್ತಾಡಿಕೊಂಡು ಹೋಗೋರೇ ಆದರೆ ಹೇಗೆ?''

ಮಾನವೀಯತೆ ಮೊದಲು ಬರುತ್ತೋ ಅಥವಾ ಪ್ರತಿ ಸಮಸ್ಯೆಯ ಸಾರ್ವತ್ರೀಕರಣ ಮೊದಲು ಬರುತ್ತೋ? ಆದ್ರೂ, ಕೆಲವು ಕೆಲಸಕ್ಕೆ ಕೆಲವು ಜನರೇ ಲಾಯಖ್ಖು, ಅಂದರೆ ಓತ್ಲಾಗಳು, ಕಿರಿಕ್‌ಗಳು, ಥಂಗ್‌ಗಳು ಲೀಡ್ರುಗಳು ಇವೆಲ್ಲಾ ಅವರವರಿಗೇ ನೂರಕ್ಕೆ ನೂರು ಲಾಯಖ್ಖಾದಂತಹ ಹುದ್ದೆಗಳು - ಖಂಡಿತ ನಮಗೆ

ನಿಮಗೆ ಹೇಳಿ ಮಾಡಿಸಿದವುಗಳಲ್ಲ. ಕಿರಿಕ್ಕು, ಧಂಗು, ಓತ್ಲಾಗಳು ತಾವು ಎಂದು ಯಾರೂ ನಂಬುವುದಿಲ್ಲ.

ಪಾರಿಭಾಷಿಕ ಪದಗಳೂ ಸಹ ಮಾನವೀಯ ಗುಣಗಳಿಂದಲೇ ಹುಟ್ಟುತ್ತವಂತೆ ಅಲ್ಲವೇ.

ಇದಕ್ಕೆ ವ್ಯತಿರಿಕ್ತವಾದ ಮತ್ತೊಂದು ವಾದ ಮೊನ್ನೆ ನಮ್ಮ ವಕೀಲ ಗೆಳೆಯ ಹೂಡಿದ. ಅದನ್ನ ಕೊಂಚ ಕೇಳಿ. ಇಡೀ ಬೆಂಗಳೂರಿನಲ್ಲಿ ಒಂದೂಕಾಲ ಲಕ್ಷಜನ ನನ್ನಂತಹ ಕಾರ್ಮಿಕರು ಅಂದರೆ ಫ್ಯಾಕ್ಟರೀಲಿ ಅದೂ ಸರ್ಕಾರಿ ಫ್ಯಾಕ್ಟರೀಲಿ ಕೆಲಸ ಮಾಡುವವರು ಇದಾರಂತೆ. ನೆಹರೂ ಆಗ ನಿರುದ್ಯೋಗ ನಿವಾರಣೆಗೆ ಅಂತ ಸರ್ಕಾರೀ ಕಾರ್ಖಾನೆಗಳನ್ನು ತೆರೆದದ್ದು ಅಂತ ನನ್ನ ವಾದ. ಸುಮಾರು ಹೊತ್ತು ಆತ ನನ್ನ ವಾದ ಆಲಿಸಿದ. ನಂತರ ನಿಧಾನಕ್ಕೆ ಹೇಳಿದ ''ಹೌದು ನೆಹರೂ ಆಗ ಮಾಡಿದ್ದೇ ನಿರುದ್ಯೋಗ ನಿವಾರಣೆಗೆ ಅಂತ. ಬಹುಶಃ ಈ ಸರ್ಕಾರೀ ಕಾರ್ಖಾನೆಗಳು ಇಲ್ಲದಿದ್ದರೆ, ಇಡೀ ಬೆಂಗಳೂರಿನ ತುಂಬಾ ಒಂದೂ ಕಾಲು ಲಕ್ಷ ಜನ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸು ಸೇರಿಕೊಂಡು ಈ ಬೆಂಗಳೂರನ್ನ ಎಷ್ಟು ಹಾಳುಮಾಡುತ್ತಿದ್ದವು ಅಂತ ನೆನಸಿಕೋ. ಈಗ ಕನಿಷ್ಠ ಹತ್ತು ಘಂಟೆ ಅಷ್ಟು ಸಮಯ ಆದರೂ ಫ್ಯಾಕ್ಟರಿ ಒಳಗೆ ಇರ್ತೀರಿ, ಮಿಕ್ಕ ಸಮಯ ನಿಮ್ಮ ನಿಮ್ಮ ಏರಿಯಾದಲ್ಲಿ ಅದೇನೋ ತರಲೆ ಪರಲೇಲಿ ಸಮಯ ಕಳೀತೀರಿ.....''

ಈ ದಿಕ್ಕಿನಲ್ಲಿ ಈ ತನಕ ನಾನು ಯೋಚಿಸಿರಲೇ ಇಲ್ಲ. ಹೌದಲ್ಲ ಅನಿಸಿತು. ಪಾರಿಭಾಷಿಕ ಪದಗಳ ಸಂಗಡ ಪಾರಿಭಾಷಿಕ ಚಿಂತೆನೆಗಳೂ ಸಹ ಪರಿಸರದಲ್ಲಿ ದೊರಕುತ್ತವೆ ಎಂಬ ನೂತನ ಥಿಯರಿ ಕಂಡುಹಿಡಿದ ಹಾಗಾಯಿತು!

ಇದೇ ಥಿಯರಿಯನ್ನು ನಮ್ಮ ರಾಜಕೀಯಕ್ಕೂ ಅನ್ವಯಿಸಿದರೆ ನಮ್ಮ ಅಷ್ಟೊಂದು ಜನ 'ನೇತಾ'ಗಳಿಗೆ ಕೆಲಸವಹಿಸಿ ಅದರಿಂದ ಜನತೆಗೆ ಆಗುತ್ತಿರುವ ತೊಂದರೆಗಳು ಮತ್ತು ಕೆಲಸ ವಹಿಸದಿದ್ದರೆ ಆಗುತ್ತಿದ್ದಂತಹ ತೊಂದರೆಗಳನ್ನು ನೆನಸಿಕೊಂಡರೆ ಈಗಿನ ವ್ಯವಸ್ಥೆ ಅದೆಷ್ಟು ಚಲೋ ವ್ಯವಸ್ಥೆ ಅನಿಸುವುದಿಲ್ಲವೇ?

ಚಿತೆಯ ಮೇಲಿಟ್ಟ ನನ್ನ ದೇಹಕ್ಕೆ
ಅವಳು ಮುತ್ತೊಂದನ್ನಿತ್ತಾಗ-
'ಆಹಾ! ಎಂಥ ಅದೃಷ್ಟಶಾಲಿ ಹೆಣ ನನ್ನದು!'
ಎನಿಸಿತು.

ಶಂಸ

ಕದ್ದಾಲಿಕೆಗಳು

- ಎಂ.ಎಸ್.ಕೆ.

ಕದ್ದು ಬೇರೆಯವರ ಸಂಭಾಷಣೆಯನ್ನು ಕೇಳೋಕ್ಕೆ ಬರೀ ಟೆಲೀಫೋನ್ ಒಂದನ್ನೇ ನಂಬ್ಕೋಬೇಕಾಗಿಲ್ಲ. ಬೇಕಾದಷ್ಟು ಬೇರೇ ಸಾಧನಗಳೂ ಇವೆ. ಈ ಟೆಲಿಫೋನ್ ನಂಬ್ಕೊಂಡು ಕದ್ದಾಲಿಸಿದ ಮು.ಮ.ಗಳೆಲ್ಲಾ ನೆಲ ಕಚ್ಚಿರಬಹುದು. ಈ ಟೆಲೀಫೋನ್ ಕದ್ದಾಲಿಕೆಯಿಂದ ಪಾಪ ನಮ್ಮ ಕ್ಲಿಂಟನ್ ಸಾಹೇಬರ ಬುಡ ಅಲ್ಲಾಡುತ್ತಿರಬಹುದು. ಅದಕ್ಕೇ ನಾನು ಹೇಳ್ತಿರೋದು, ಬರೀ ಟೆಲಿಫೋನ್ ಒಂದನ್ನೇ ನಂಬಿಕೊ ಬೇಡೀಂತ. ಬೇಕಾದಷ್ಟು ಬೇರೆ ಬೇರೆ ಮೆಥಡ್ಸ್ ಇವೆ. ನನ್ನ ಮೆಥಡ್ ಸ್ವಲ್ಪ ಕೇಳಿ.

ನಾವೆಲ್ಲಾ ವಾಕಿಂಗ್ ಹೋಗೋದು ವ್ಯಾಯಾಮಕ್ಕೆ, ತಿಂದದ್ದು ಜೀರ್ಣಿಸೋಕ್ಕೆ ಮತ್ತು ಬೇಜಾರು ಕಳಿಯೋಕ್ಕೆ ಅಂದ್ಕೊಂಡಿದ್ದೀವಿ. ಇದರ ಜೊತೆಗೆ ಇನ್ನೂ ಒಂದು ಭಾರೀ ಉಪಯೋಗಾ ಇದೆ. ಅದೇ ನಮ್ಮ ನಮ್ಮ ಮನೇ ರಾಜಕೀಯ ಮಾತಾಡೋದು. ಯಾವ ವಿಷಯಗಳನ್ನು ಫ್ರೀ ಆಗಿ ತುಂಬಿದ ಜಾಯಿಂಟ್ ಕುಟುಂಬಗಳಲ್ಲಿ ಎಲ್ಲಾರ ಮುಂದೆ ಮನೇಲಿ ಮಾತಾಡಕ್ಕಾಗಲ್ವೋ ಅದನ್ನ ವಾಕಿಂಗ್ ನೆಪ ಇಟ್ಕೊಂಡು ಬೀದೀಲಿ ಮಾತಾಡಬಹುದು. ''ನಾವು ವಾಕಿಂಗ್ ಹೋಗಿ ಬರ್ತೀವಿ'' ಅಂತ ಕೂಗಿ ಹೊರಟರೆ ಬೇಡಾಂತ ಯಾರೂ ಹೇಳೋಹಾಗಿಲ್ಲ. ಯಾಕಂದರೆ ಡಾಕ್ಟರ್ ಹೇಳಿದ್ದಾರೆ ''ನೀವು ಹೀಗೆ ಸುಮ್ಮನೆ ಮನೇಲಿ ಕೂತಿದ್ರೆ ಆಗುಲ್ಲಮ್ಮ, ನಿಮ್ಮ ಕಾಲು ನೋವು ಇನ್ನೂ ಜಾಸ್ತಿ ಆಗುತ್ತೆ. ದಿನಕ್ಕೆ ಒಂದು ಘಂಟೆಯಾದ್ರೂ ವಾಕಿಂಗ್ ಮಾಡಿ. ಜೊತೆಗೆ ಕರಿದ ತಿಂಡಿ ಕಾಫೀ ಸ್ವಲ್ಪಾದ್ರೂ ಕಮ್ಮಿ ಮಾಡಿ'' ಅಂತ.

ರಸ್ತೇಗೆ ಇಳಿದ ಮೇಲೆ ಏನ ಬೇಕಾದ್ರೂ ಮಾತಾಡಿಕೋಬಹುದು ಯಾರ ಮುಲಾಜೂ ಇಲ್ಲದೆ. ಧೈರ್ಯವಾಗಿ.

ನಾನು ಬೆಳಗಾಗೆದ್ದು ತಲೆಗೆ ಮಂಕೀ ಕ್ಯಾಪ್ ಹಾಕಿ ಮಫ್ಲರ್ ಸುತ್ತಿ ವಾಕಿಂಗ್ ಹೊರಟರೆ ನನ್ನ ಐಡೆಂಟಿಟಿ ಯಾರಿಗೂ ಗೊತ್ತಾಗೊಲ್ಲ. ಗೊತ್ತಾದರೂ ಯಾರೂ ಕೇರ್ ಮಾಡಲ್ಲ. ಅದು ಬೇರೆ ವಿಚಾರ ಬಿಡಿ. ನಾನು ಹೀಗೆ ಮಾಸ್ಕ್ ಮಾಡಿಕೊಂಡು ಹೋಗೋದು ಬೇರೇಯವರು ಏನೇನು ಮಾತಾಡಿಕೋತಾರೇಂತ ಕದ್ದು ಕೇಳೋಕೆ. ''ಅನುಗಾಲವೂ ಚಿಂತೆ'' ಅಂತ ಚಿಂತಿಸಿದರು ದಾಸವರೇಣ್ಯರು. ನನ್ನ ಚಿಂತೆ ವಾಕಿಂಗ್ ಅಲ್ಲಿ ದಂಪತಿಗಳಿಗೆ ಮಾತಾಡೋಕ್ಕೆ ಏನೇನಿರುತ್ತೆ ಅನ್ನೋದೇ. ಇದು ಒಂದು ದುರಭ್ಯಾಸಾಂತಾನೇ ಇಟ್ಕೊಳ್ಳಿ ಯಾರು ಬೇಡಾಂತಾರೆ.

ವಯಸ್ಸಾದ ದಂಪತಿಗಳು. ನಿಧಾನವಾಗಿ ಹೋಗುತ್ತಿದ್ದರು. ನಾನು ಅವರ

ಪಿಂಡೇನೇ ಇದ್ವೆ. ಆ ಮನುಷ್ಯ ಇದ್ದಕ್ಕೆ ಇದ್ದಹಾಗೇ ನಿಂತು ತನ್ನ ಭಾರ್ಯೇನ ನೋಡುತ್ತಾ ಹೇಳಿದರು ''ಇನ್ನೇನು. ಎಲ್ಲಾ ಖರ್ಚೂ ಇವಂದೇ ತಾನೆ. ಶುದ್ಧ ಮಂಕುಮುಂಡೇದು. ಇವನಿಗೆ ಯಾವತ್ತು ಬುದ್ಧಿ ಬರುತ್ತೋ ದೇವರೇ ಬಲ್ಲ.''

ಶುರು ಆಯಿತು ನನ್ನ ಚಿಂತೆ. ಯಾರು ಈ ''ಮಂಕು ಮುಂಡೇದು''. ಇವರಿಗೂ ಅವನಿಗೂ ಏನು ಸಂಬಂಧ. ಇವರಿಗೆ ಯಾಕೆ ಇಷ್ಟು ಕೋಪ ಅವನಮೇಲೆ. ಯೋಚಿಸೀ ಯೋಚಿಸೀ ಎರಡು ಪಾಸಿಬಿಲಿಟೀಸ್‌ಗೆ ಇಳಿಸಿದೆ ಈ ಪ್ರಾಬ್ಲಂನ.

1. ಆ ಮಂಕು ಮುಂಡೇದು ಇವರ ಪುತ್ರ ಶಿರೋಮಣಿ. ಅವನ ಅತ್ತೆ-ಮಾವಾ-ನಾದಿನಿ-ಮೈದುನ ಎಲ್ಲಾ ಬಂದಿದ್ದಾರೆ ಊರಿಂದ. ಅವರೆಲ್ಲಾ ದೊಡ್ಡ ಟೂರ್ ಪ್ರೋಗ್ರಾಂ ಹಾಕಿದ್ದಾರೆ. ಟೂರ್ ಹೋಗೋರ ಲಿಸ್ಟ್ ಅಲ್ಲಿ ಈ ದಂಪತಿಗಳ ಹೆಸರು ಎಲಿಮಿನೇಟ್ ಮಾಡಿದ್ದಾರೆ. ಮತ್ತೆ ಮನೇ ಕಡೇ ನೋಡಿಕೊಳ್ಳಲು ಯಾರಾದರೂ ಬೇಕಲ್ಲ! ಇದು ಇವರಿಗೆ ಉರಿಯೋ ಗಾಯಕ್ಕೆ ಉಪ್ಪು ಹಾಕಿದಂತಾಗಿದೆ. ಜೊತೆಗೆ ಬಿಸೀ ತುಪ್ಪ ಬೇರೆ. ಅನ್ನೋ ಹಾಗಿಲ್ಲ. ಅನ್ನಿಸಿಕೊಳ್ಳೊ ಹಾಗಿಲ್ಲ. ಮನೇಲಿ ಪಿಸಿ ಪಿಸಿ ಮಾತಾಡಿಕೊಳ್ಳೊ ಹಾಗೂ ಇಲ್ಲ. ಸೊಸೆಗೆ ಹದ್ದಿನ ಕಿವಿ. ಮನೇಲಿ ಮೈ ಪರಚಿಕೊಳ್ಳೋಹಾಗಾಗಿ ಬೀದಿಗೆ ಬಂದಿದ್ದಾರೆ. ಇಲ್ಲಿ ಮಗ, ಸೊಸೆ, ತಮ್ಮ ಬೀಗರು ಎಲ್ಲಾರನ್ನೂ ಬಾಯಿ ತುಂಬ ಅನ್ನಿಕೋ ಬಹುದಲ್ಲಾ, ಫ್ರೀ ಆಗಿ. ಅದೇ ತಾವು ತಮ್ಮ ಮಗಳ ಮನೇಗೆ ಹೋಗಿದ್ದಾಗ ತಮ್ಮ ಅಳಿಯ ಉಪಚಾರಕ್ಕಾದರೂ ಈ ಥರ ಟೂರ್ ಸಜೆಸ್ಟ್ ಮಾಡಲಿಲ್ಲ. ತಾವೇ ಬಾಯಿ ಬಿಟ್ಟು ಕೇಳಿದಾಗ ''ಆಫೀಸಿನಲ್ಲಿ ತುಂಬಾ ಕೆಲಸ ಬಿಡುವಿಲ್ಲ'' ಅಂತ ನುಣಿಚಿಕೊಂಡ. ತಾವು ವಾಪಸ್ ಬರುವಾಗ ಆತ ತಮ್ಮನ್ನ ರೈಲಿಗೂ ಬಿಡಲಿಲ್ಲ. ಇಲ್ಲಿ ನೋಡಿದರೆ ತಮ್ಮ ಸ್ವಂತ ಮಗ ಒಂದು ವಾರ ರಜ ಹಾಕಿ ತಾನೇ ನಿಂತು ತನ್ನ ಖರ್ಚಿನಲ್ಲೇ ಟೂರ್ ಅರೇಂಜ್ ಮಾಡ್ತಿದ್ದಾನೆ. ಹೇಗೆ ತಾನೇ ತಡೆದಾತು ಆ ಮುದಿ ಜೀವಿಗಳು ಈ ಅನಾಮಲೀನ?

2. ಅಥವಾ ಆ ''ಮಂಕು ಮುಂಡೇದು'' ಇವರ ಅಳಿಯನೇ ಇರಬಹುದು. ಅವನ ತಂಗಿ ಮದುವೆ ಸೆಟಲ್ ಆಗಿದೆ. ಇವನು ಒಂದು ತಿಂಗಳು ಪೂರಾ ರಜಾ ಹಾಕಿ ಓಡಾಡುತ್ತಿದ್ದಾನೆ. ತನ್ನ ಪ್ರಾವಿಡೆಂಟ್ ಫಂಡಲ್ಲೂ ಭಾರೀ ಸಾಲ ಮಾಡಿದ್ದಾನೆ ಮದುವೆಗೆ. ತಮ್ಮ ಮಗಳ ಸೀರೇ ವಡವೇ ಇತ್ಯಾದಿಗಳಿಗೆ ಮೀಸಲಾದ ದುಡ್ಡು ಇವನು ಹೀಗೆ ತನ್ನ ತಂಗೀ ಮದುವೆಗೆ ಖರ್ಚು ಮಾಡಿದರೆ ಈ ವೃದ್ಧ ಜೀವ ಹೇಗೆ ತಡೆದೀತು. ಇದನ್ನೂ ತಮ್ಮ ಮನೇಲೇ ಮಾತಾಡೂ ಹಾಗಿಲ್ಲ ತಮ್ಮ ಸೊಸೆ ಮುಂದೆ. ಅವಳಿಗೆ ಇವರ ಮನಸ್ಸು ಗೊತ್ತಾದರೆ ತನ್ನ ಗಂಡನ ಕಿವಿ ಚುಚ್ಚಿ ಅವನು ತಮ್ಮ ಮಗಳಿಗೆ ಕೊಡುವ ಗೌರೀ ಬಾಗಿನಾನೂ ಕಟ್ ಮಾಡಿಸಿಬಿಡಬಹುದು. ಅದಕ್ಕೇ ಈಗ ಬೀದಿಲೇ ಮಾತಾಡಬೇಕು. ವಿಧಿ ಇಲ್ಲ. ಅದೂ ಗುಟ್ಟಾಗಿ.

''ಅಹುದಾದರೆ ಅಹುದೆನ್ನಿ, ಅಲ್ಲವಾದರೆ ಅಲ್ಲವೆನ್ನಿ... ನೀವು ಸಜ್ಜನರೂ'' ಎಂದು ರಾಗವಾಗಿ ಹಾಡಿದರು ದಾಸ ಕನಕರು.

ನೀವೂ ಅಷ್ಟೆ. ನನ್ನ ಊಹೆ ಹೌದಾದರೆ ಹೌದೆನ್ನಿ. ತಪ್ಪಾದರೆ ತಪ್ಪೆನ್ನಿ.

ಅಡಿಗರ ಕಾವ್ಯ

ಶಿವು

ನಾಲ್ಕೈದು ವರುಷಗಳ ಹಿಂದೆ ಎಂದು ಕಾಣುತ್ತದೆ. ನಾನು ಮೊಟ್ಟಮೊದಲಿಗೆ ಮಣಿಪಾಲಕ್ಕೆ ಹೋಗಿದ್ದೆ. ನನ್ನ ಮಗಳು ಆರತಿಯ ಕಾಲೇಜ್ ಸೇರ್ಪಡೆಗೆ ಸೂಲಗಿತ್ತಿ ಕೆಲಸ ಮಾಡುವ ಮಹತ್ಕಾರ್ಯ ಕೈಮೇಲಿತ್ತು. ರಾತ್ರಿ ಬೆಂಗಳೂರಿನಿಂದ ಬಸ್ಸಿನಲ್ಲಿ ಹೊರಟು ಉಡುಪಿ ಸೇರಿದಾಗ ಬೆಳಗಿನ ಜಾವ ಐದು ಘಂಟೆ. ಬಸ್ ಸ್ಟಾಂಡಿನ ಹತ್ತಿರವೇ ಇದ್ದ ಮಲ್ಲಿಕಾ ಹೋಟೆಲಿನಲ್ಲಿ ರೂಮು ಹಿಡಿದು ಒಂದೆರಡು ತಾಸುಗಳಾದರೂ ನಿದ್ದೆ ತೆಗೆಯುವ ಹಟದಿಂದ ಮಂಚದ ಮೇಲೆ ಉರುಳಿಕೊಂಡೆ ಎಚ್ಚರವಾದಾಗ ಏಳೂವರೆ. ರೂಮಿನ ಮಾಣಿಗೆ ಕಾಫಿ ಹೇಳಿದಾಗ ಅವ ಕಾಫಿಯೊಂದಿಗೆ ಉದಯವಾಣಿ ತಂದ. ಕಾಫಿ ಹೀರುತ್ತಾ ಪತ್ರಿಕೆಯ ಪುಟ ತಿರುವಿದೆ. ಮೂರನೆಯ ಪುಟದ ಬಲತುದಿಯಲ್ಲಿ ಒಂದು ಜಾಹಿರಾತು ಕಣ್ಣಿಗೆ ಬಿತ್ತು. ಜಾಹಿರಾತು ಎನ್ನುವುದಕ್ಕಿಂತ ಹಣಕೊಟ್ಟು ಅಚ್ಚಿಸಿದ ಶೋಕಸಂದೇಶ ಎನ್ನಬಹುದೇನೋ. ತಲೆಕಟ್ಟಿನಲ್ಲಿ ''ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು'' ಎಂಬ ಸಾಲು. ಅದರ ಕೆಳಗೆ ಒಂದು ಭಾವಚಿತ್ರ. ತೀರ ಕೆಳಗಿನ ಸಾಲಿನಲ್ಲಿ ''ಶೋಕತಪ್ತರಾದ ಉಷಾ ನಾವಡ ಮತ್ತು ಮಕ್ಕಳು'' ಎಂದಿತ್ತು. ಅದನ್ನು ಓದಿ ''ಯಾರೋ ಈಕೆ, ಅಂತಹ ದುಃಖದಲ್ಲೂ ಎಷ್ಟು ಚೆನ್ನಾಗಿ ಕವನ ಬರೆದಿದ್ದಾರೆ'' ಅಂದುಕೊಂಡಿದ್ದೆ. ಇದು ಅಡಿಗರೊಂದಿಗೆ ನನ್ನ ಪ್ರಥಮ ಸಮಾಗಮ.

ಕಳೆದ ಮಾರ್ಚ್ ತಿಂಗಳಲ್ಲಿ ನಾನು ಅ.ರಾ. ಮಿತ್ರರೊಡಗೂಡಿ ಚಿಕ್ಕಮಗಳೂರಿಗೆ ಹೋಗಬೇಕಾಯಿತು. ಅಲ್ಲಿಂದ ಮುಂದೆ ನಾನು ಮೂಡಿಗೆರೆಗೆ ತೇಜಸ್ವಿಯವರನ್ನು ನೋಡಲು ಹೋಗುವ ಕಾರ್ಯಕ್ರಮವಿದ್ದುದರಿಂದ ಆರತಿ ತಾನೂ ಬರುತ್ತೇನೆಂದಳು. ಬೆಂಗಳೂರಿನಿಂದ ಬೆಳಗ್ಗೆ ಏಳು ಘಂಟೆಗೇ ಕಾರಿನಲ್ಲಿ ಹೊರಟೆವು. ಕುಣಿಗಲ್ ಹತ್ತಿರ ಟೀ ಸ್ಟಾಪ್. ಮಿತ್ರರಿಗೆ ಅದು ಸಿಗರೇಟ್ ಸ್ಟಾಪ್ ಕೂಡ. ಧೂಮಸೇವೆಯ (ಅಥವಾ ಧೂಮ್ರ ಸೇವೆ ಎನ್ನಬೇಕೋ! ವೆಂಕಟಸುಬ್ಬಯ್ಯನವರನ್ನೇ ಕೇಳಬೇಕು) ನಂತರ ಪ್ರಯಾಣ ಮುಂದುವರಿದಾಗ ನಾನು ಮಿತ್ರರಿಗೆ ಉಷಾ ನಾವಡ ಪ್ರಸಂಗ ಹೇಳಿದೆ. ''ಹಾಗಾದರೆ ನೀವು ಭೂಮಿಗೀತ ಓದಿಲ್ಲವೆಂದು ಕಾಣುತ್ತದೆ'' ಅಂದರು ಮಿತ್ರ. ''ಓದಲು ಯತ್ನಿಸಿದೆ ಸಾರ್. ಯಾಕೋ ಎಳೆಹರಯದಲ್ಲೇ ಎಡವಿಬಿದ್ದೆ. ಮೊದಲ ಹತ್ತು ಸಾಲುಗಳ ನಂತರ ಅರ್ಥವಾಗಲಿಲ್ಲ'' ಅಂತ ನಿಜ ಹೇಳಿದೆ. ಮಿತ್ರರು ''ಭೂಮಿಗೀತ. is not just a poem, it is an experiance'' ಎಂದು ಪ್ರಾರಂಭಿಸಿ ಆ ಕವನದ ಸಾಲುಗಳನ್ನು ವಿವರಿಸತೊಡಗಿದರು.

ಅಬ್ಬ! ಎಂತಹ ವಿವರಣೆ! ಆ ಸುಧೀರ್ಘ ಕವನದ ಪ್ರತಿಯೊಂದು ಸಾಲನ್ನೂ

ತಮ್ಮ ನೆನಪಿನ ಸುರುಳಿಯಿಂದ ಬಿಡಿಸಿ, ಒಂದೊಂದು ಸಾಲಿಗೂ, ಹಲವೊಮ್ಮೆ ಒಂದೊಂದು ಪದಕ್ಕೂ ಇದ್ದ, ಇರಬಹುದಾದ ಹಿನ್ನೆಲೆ, ಕವಿಯ ಭಾವೋನ್ಮಾದ ರಹಿತವಾದ ದಿಟ್ಟ ನಿಲುವು ಇವುಗಳನ್ನೆಲ್ಲಾ ಮಿತ್ರರು ಹೇಳುತ್ತಿದ್ದಾಗ ಕವನ ರಚನೆಯಲ್ಲಿ ಅಡಿಗರು ಬಳಸಿದ್ದ stupendously wide canvas ನ ಅರಿವು ನಮಗೆ ನಿಧಾನವಾಗಿ ಮೂಡಿತು. ಆರತಿಗಂತೂ ಇದೊಂದು ಮರೆಯಲಾಗದ ಅನುಭವ. ಲೆ ಕಾಂಮ್ಟೆ ಡು ನಾಯ್ ಎಂಬ ದಾರ್ಶನಿಕ ತನ್ನ ''ದ ಹ್ಯೂಮನ್ ಡೆಸ್ಟಿನಿ'' ಎಂಬ ಪುಸ್ತಕದಲ್ಲಿ ನಾವೇಕೆ ಇಲ್ಲಿದ್ದೇವೆ? ನಮ್ಮ ಬಾಳುವೆಯೆಲ್ಲಾ ಅರ್ಥವಿಲ್ಲದ ಆಟವೇ? ಅಥವಾ ನಾವು ಮಾಡಬೇಕಾದದ್ದು ಏನಾದರೂ ಇದೆಯೇ? ಮುಂತಾದ ಅನೇಕ ಅನಾದಿ ಒಗಟುಗಳನ್ನು ನಮ್ಮ ಮುಂದಿಟ್ಟು ಅವುಗಳನ್ನು ಸವಿವರವಾಗಿ ಆಸಕ್ತಿ ಮೂಡುವಂತೆ ಚರ್ಚಿಸುತ್ತಾನೆ. ಭೂಮಿಗೀತದ ಹಲವು ಸಾಲುಗಳಲ್ಲಿ ಇವೇ ಪ್ರಶ್ನೆಗಳು ಕಾವ್ಯಸಹಜವಾದ ಸಂಕ್ಷಿಪ್ತತೆ, ಲಾಲಿತ್ಯ ಇವುಗಳೊಂದಿಗೆ ಮೂಡಿಬಂದಿವೆ. ಮಾನವ ಚೇತನದ ಚಟುವಟಿಕೆ, ಅದರ ಚೈತನ್ಯದ ಸೆಲೆ, ಪಂಚಭೂತಗಳಿಂದ ಕೂಡಿದ ದೇಹದ ಅರಿವಿಗೆ ಮೀರಿದ್ದು ಎಂಬುದರ ಕುರಿತು ಕವಿ ಹೀಗೆ ಹಾಡುತ್ತಾನೆ.

ಇದು ನೋಡು, ಇದು ಕಷ್ಟ: ಧೂಳು ಧೂಳಿಗೆ ಸೇರಿ
ಗಾಳಿ ಗಾಳಿಗೆ ಕೂಡಿ,
ಬೆಂಕಿ ಬೆಂಕಿಯ ಕೂಡಿ,
ಗಾಳಿಯಲ್ಲುಲುಹು, ಆಕಾಶದಲ್ಲಾಕಾಶ ಬೆರೆತು ಹೋದರೆ ಇದಕ್ಕೇನು ಧಾಡಿ?
ಏನೋ ಉಳಿವುದು ಮತ್ತೆ:
ಒಂದು ವಿದ್ಯುತ್ತಂತಿ-
ತಾರೆ ನೀಹಾರಿಕೆಗಳಾಚೆಯ ಸಮಾಚಾರ;
ಪಾತಾಳದಾಳದಿಂದೆದ್ದು ಬರುವ ವಿಕಾರ;
ಒಂದನೊಂದಕೆ ಕೂಡಿಸಾಡಿಸುವ, ಕುಣಿಸುವ ಚಮತ್ಕಾರ
ಕೆಲರು ಹೇಳುವರು ಸ್ವಿಚ್ಚೆಲ್ಲೋ ತಿಳಿಯದೆಂದು;
ಮೂಲದ ಕಛೇರಿಯ ವಿಳಾಸ ಮರೆತಿದೆ ಎಂದು;
ಇಲ್ಲೆ ಎಲ್ಲೋ ಇರುವುದೆನ್ನುವರು ಉಳಿದವರು.
ಕತ್ತಲಲ್ಲಿ, ಕಣ್ಣು ಕಾಣದ ಬೀದಿಯಿಕ್ಕಟ್ಟಿನಲಿ
ಗೋಡೆ ತಡಕುತ ಇನ್ನು ತೆವಳಬೇಕು.......

ಅಡಿಗರ ಪ್ರಪಂಚಕ್ಕೆ ಮಿತ್ರರು ಇಟ್ಟ ಕಿಟಕಿಯಲ್ಲಿ ಇಣುಕಿ ನೋಡಿ ಹೊರಬರುವಷ್ಟರಲ್ಲಿ ನಾವು ಚಿಕ್ಕಮಗಳೂರು ಸೇರಿದ್ದೆವು.

ಮುಂದೊಮ್ಮೆ ಶೀನು ''ಸಂವಾದ''ದ ಕಾರ್ಯಕ್ರಮಗಳ ಬಗ್ಗೆ

ಮಾತನಾಡುತ್ತಿದ್ದಾಗ, ನಾನು ಅಡಿಗರ ಕಾವ್ಯದಲ್ಲಿ ಮಿತ್ರರಿಗಿರುವ ಅಸಾಧಾರಣ ಪಾಂಡಿತ್ಯದ ಬಗ್ಗೆ ಪ್ರಸ್ತಾಪ ಮಾಡಿದೆ. ಶೀನು ವಿಳಂಬ ಮಾಡದೇ ಮಿತ್ರರಿಂದ ಒಂದು ಉಪನ್ಯಾಸ ಏರ್ಪಡಿಸಿಯೇಬಿಟ್ಟ. ಕಾರ್ಯಕ್ರಮವಿದ್ದದ್ದು ಭಾನುವಾರ ಬೆಳಿಗ್ಗೆ ಹತ್ತು ಘಂಟೆಗೆ. ಅದರ ಹಿಂದಿನ ರಾತ್ರಿ ನಾನು ಕೃಷ್ಣನೊಂದಿಗೆ ಮಾತನಾಡುತ್ತಿದ್ದಾಗ ಅವ ''ನಾನೂ ಬರ್ತೀನಿ ಸಾರ್. ಬೆಳಿಗ್ಗೆ ಒಟ್ಟಿಗೇ ಹೋಗೋಣ'' ಎಂದ. ಮಾರನೆಯ ಬೆಳಗ್ಗೆ ಉಪನ್ಯಾಸಕ್ಕೆ ಹೋಗುತ್ತಿದ್ದಾಗ ''ಅಡಿಗರ ಕವನಗಳಲ್ಲಿ ಯಾವುದಾದರೂ ಓದಿದ್ದೀಯಾ ಕೃಷ್ಣ?'' ಅಂತ ಕೇಳಿದೆ. ''ಯಾವುದೋ ಒಂದೆರಡು ಭಾವಗೀತೆಗಳನ್ನು ಓದಿರಬಹುದು, ಸರಿಯಾಗಿ ನೆನಪಿಲ್ಲ'' ಅಂತ ಹೇಳಿ ನುಣುಚಿಕೊಳ್ಳಲು ನೋಡಿದ. ನಾನು ಉಷಾ ನಾವಡ ಪ್ರಸಂಗ ಹೇಳಿದೆ. ಅದನ್ನು ಕೇಳಿ ಅವನಿಗೆ ಧೈರ್ಯ ಬಂತೆಂದು ಕಾಣುತ್ತದೆ. ''ಸಾರ್, ಅಡಿಗರ ಕವನಗಳ ಕುರಿತು ನನಗಿದ್ದ ಅರಿವು ನಿನ್ನೆ ಹೊತ್ತಿಗೆ ಇಮ್ಮಡಿಯಾಯಿತು'' ಅಂದ. ನನಗೆ ಹೊಟ್ಟೆ ಉರಿಯಲು ಶುರುವಾಯಿತು. ''ರಾತ್ರಿಯೆಲ್ಲಾ ಕೂತು ಸಮಗ್ರ ಕಾವ್ಯ ಓದಿದೆಯೇನು?'' ಎಂದು ಕೇಳಿದೆ. ಅವ ''ಹಾಗೇನಿಲ್ಲ, ಸಂವಾದದ ಆಹ್ವಾನ ಪತ್ರಿಕೆಯಲ್ಲಿ 'ಹೆಳವನ ಹೆಗಲಿನ ಮೇಲೆ ಕುರುಡ ಕೂತಿದ್ದಾನೆ, ದಾರಿ ಸಾಗುವುದೆಂತೊ ನೋಡಬೇಕು' ಎಂಬ ಎರಡು ಸಾಲುಗಳಿದ್ದವು. ಅದಕ್ಕೆ ಮುಂಚೆ ನನಗೆ ಗೊತ್ತಿದ್ದದ್ದು ಎರಡು ನಾವಡ ಸಾಲುಗಳು ಮಾತ್ರ. ಈಗ ನಾಲ್ಕು ಸಾಲುಗಳ ಮೇಲೆ ಪ್ರಭುತ್ವ ಗಳಿಸಿದ್ದೇನೆ'' ಎಂದು ಹೇಳಿ ನಕ್ಕ. 'ಅಡಿಗರ ಕಾವ್ಯ ರಚನೆ ಸಾರ್ಥಕವಾಯಿತು' ಎಂದುಕೊಳ್ಳುತ್ತಾ ನಾವು ಸಭಾಂಗಣ ಸೇರಿದಾಗ ಘಂಟೆ ಹತ್ತಾಗಿತ್ತು.

ಮಿತ್ರರು ಆ ದಿನ ಉಪನ್ಯಾಸಕ್ಕೆ ಆರಿಸಿಕೊಂಡ ಹಲವು ಕವನಗಳಲ್ಲಿ 'ಪ್ರಾರ್ಥನೆ' ಮತ್ತು 'ಕೂಪ ಮಂಡೂಕ' ಸೇರಿದ್ದವು. ಅಡಿಗರು ಕವನಗಳನ್ನು ಬರೆದದ್ದು ಐವತ್ತರ ದಶಕದಲ್ಲಿ. ಆಗಲೇ ಅವುಗಳನ್ನು ಓದಿ, ಬಹುವಾಗಿ ಮೆಚ್ಚಿಕೊಂಡಿದ್ದೇ ಅಲ್ಲದೇ, ಕವಿಯೊಡನೆ ಅವುಗಳ ಬಗ್ಗೆ ಚರ್ಚಿಸುವ ಅವಕಾಶವೂ ಮಿತ್ರರಿಗಿತ್ತು. ಮೇಲಾಗಿ ವೃತ್ತಿಯಲ್ಲಿ ಉಪನ್ಯಾಸಕರಾಗಿರುವುದರಿಂದ ಅವರ ದೈವದತ್ತವಾದ ಸಂವಹನ ಕಲೆಗೆ ಕಸುಬುಗಾರಿಕೆಯ ಮೆರಗೂ ಸೇರಿತ್ತು ಅನ್ನಿ. ಜಿ.ಪಿ. ರಾಜರತ್ನಂರವರ ಉಪನ್ಯಾಸಗಳನ್ನು ನೆನಪಿಗೆ ತರುತ್ತಿದ್ದ ಮಿತ್ರರ ಕಂಚಿನ ಕಂಠ, ಸ್ಪಷ್ಟ ಉಚ್ಚಾರಣೆ, ಇವುಗಳನ್ನು ಕೇಳಿಸಿಕೊಳ್ಳುವುದು ಒಂದು ಮೋಜು. ಮಿತ್ರರು ಅಂದು ಸಭಿಕರನ್ನು ಬಹು ಸುಲಭವಾಗಿ ಅಡಿಗರು ಸೃಷ್ಟಿಸಿದ ನಿಷ್ಠುರ, ಭಯಾನಕ ಜಗತ್ತಿನಲ್ಲಿ ಅತ್ಯಂತ ಸಂವೇದನಾಶೀಲತೆಯಿಂದ, ಅತ್ಯಂತ ಕುಶಲತೆಯಿಂದ ಓಡಾಡಿಸಿ ಅಡಿಗರ ಕಾವ್ಯಧಾರೆಯಲ್ಲಿ ಮೀಯುವಂತೆ ಮಾಡಿದರು.

ಅಡಿಗರು ಸೃಷ್ಟಿಸಿದ ಜಗತ್ತು ಭಯಾನಕ ಅಂದೆ. ಇದಕ್ಕೊಂದು ದೃಷ್ಟಾಂತವನ್ನು 'ಕೂಪಮಂಡೂಕ'ದಲ್ಲಿ ನೋಡಬಹುದು. ಮಾನವನಿಗೆ ತನ್ನ ಇರವಿನ ಬಗ್ಗೆ ಅರಿವು ಮೂಡುತ್ತಿದ್ದಂತೆ, ಪ್ರಕೃತಿಯ ಎಲ್ಲ ಸೃಷ್ಟಿಗಳಿಗಿಂತ ತಾನು ಬೇರೆ ಎಂಬ

ಒಬ್ಬೊಂಟಿಗತನದ ಭಯ ಮೂಡುತ್ತದೆ. ಬಹುಶಃ ಈ ಭಯದಿಂದ ಬಿಡುಗಡೆ ಹೊಂದಲು ಅವನು ಭಗವಂತನೆಂಬ ಒಬ್ಬ ಜೊತೆಗಾರನನ್ನು ಕಲ್ಪಿಸಿಕೊಂಡಾಗ, ಅವನ ಮನದಲ್ಲಿ ಸುಳಿಯುವ ಭಾವನೆಗಳ ಚಿತ್ರಣ ಈ ಕವನದಲ್ಲಿ ಬಹು ತೀಕ್ಷ್ಣವಾಗಿ ಮೂಡಿಬಂದಿದೆ.

ನೀನೆಲ್ಲಿ ಈಗ ಎಂಬ ಪ್ರಶ್ನೆಯೊಂದಿಗೆ ಪ್ರಾರಂಭಿಸಿ,

ನಟ್ಟ ನಡುದಾರಿ ತೇಗುವ ತೋಟದೊಳಗೆ
ಮೂಗುಮಟ ಕುಡಿದ ತಂಗೊಳದತಡಿಗೆ
ಟಾಂಗುಕೊಟ್ಟು ಕಮಂಗಿ ಕಣ್ಣುಬಿಡುವಷ್ಟಕ್ಕೆ
ಕಂಬಿಕಿತ್ತೆ ವಿಶಾಲ ನೀಲದೆಡೆಗೆ

ಎಂದು ಈ ನಾಲ್ಕು ಪುಟ್ಟ ಸಾಲುಗಳಲ್ಲಿ ಕವಿ ಮುಕ್ಕಾಲು ಭಾಗ ನೀರಿನಿಂದ ತುಂಬಿದ (ಮೂಗುಮಟ ಕುಡಿದ) ಈ ಭೂಮಿಯ ಮೇಲೆ ಮಾನವನಿಗೆ ತಾನೇ ಕಲ್ಪಿಸಿಕೊಂಡ ಭಗವಂತನೂ ಕೇವಲ ಭ್ರಮೆಯಾಗಿರಬಹುದೇನೋ ಎಂಬ ಸಂಶಯ ಕಾಡಿದಾಗ ಕಂಬಿಕಿತ್ತೆ ನನ್ನನ್ನು ಬಿಟ್ಟು ಎಂದು ಅವನನ್ನು ಅಳಿಯುತ್ತಾನೆ. ಪ್ರಕೃತಿಯಲ್ಲಿನ ಇತರ ಜೀವರಾಶಿಗೆ ಇಂತಹ ತಳಮಳ ಇಲ್ಲ. ಅವೆಲ್ಲ ಪ್ರಕೃತಿಯೊಡನೆ ಒಂದಾಗಿ ಈ ತಬ್ಬಲಿಯನ್ನು ನೋಡಿ ಕಿಲಕಿಲ ನಗುತ್ತವಂತೆ.

ಮೈಹೇರಿ ಇಲ್ಲಿ ಬಿದ್ದಿದ್ದೇನೆ ತಬ್ಬಲಿ ಹಾಗೆ;
ಹೂವು, ಗಿಡ, ಬಳ್ಳಿ, ಮರ, ಪೊದೆ, ಪೊಟ್ಟರೆ
ಮುಖ ತಿರುಗಿಸುತ್ತ ಕಿಲಕಿಲ ನಗುತ್ತವೆ; ಸುತ್ತು
ಮುತ್ತಲು ಕಿರಾತ ಲೇವಡಿಯ ಪಹರೆ.

ಹೂವು-ಗಿಡ, ಬಳ್ಳಿ-ಮರ, ಪೊದೆ-ಪೊಟ್ಟರೆ, ಎಲ್ಲ ಜೋಡಿಗಳ ಮಧ್ಯೆ ಮೈಹೇರಿ ಬಿದ್ದ ಈ ತಬ್ಬಲಿ ಮಾತ್ರ ಒಬ್ಬೊಂಟಿ. ಪ್ರಕೃತಿಯ ಸೌಂದರ್ಯ ಹೆಚ್ಚಿದಷ್ಟೂ ಇವನಿಗೆ ತನ್ನ ಬೇರೆತನದ ಅರಿವು ತೀಕ್ಷ್ಣವಾಗುತ್ತಾ ಹೋಗಿ ಪ್ರಕೃತಿಯ ನಗುಮುಖ ಕಿರಾತ ಲೇವಡಿಯಂತೆ ಭಾಸವಾಗುತ್ತದೆ.

ಈ ಹತಾಶ ಭಾವನೆ ಎಂದಿಗೂ ಇದ್ದದ್ದಲ್ಲ. ವಿಶಾಲ ನೀಲದ ಗೆಳೆಯನೊಂದಿಗೆ ಚಿಕ್ಕಂದಿನಲ್ಲಿ ಚಕ್ಕಂದವಾಡಿದ್ದುಂಟು. ಆಟದ ಮೈದಾನದಲ್ಲಿ ಒಂದು ಹಲಗೆಯ ಎರಡು ತುದಿಗಳಲ್ಲಿ ಕುಳಿತು ಮೇಲೆ ಕೆಳಗೆ ಜೋಕಾಲಿಯಾಡುವ ಟಕ್ಕಾಟಿಕ್ಕಿಯಲ್ಲಿ ಗೆಳೆಯನಿಗೆ ಸರಿಸಮವಾಗಿ ತೂಕ ಜೋಡಿಸಿ ಆಡುತ್ತಿದ್ದಾಗ ಅನೇಕ ಬಾರಿ ಇವನಿಗೆ ಅವನ ಅಂತರಂಗ ತಿಳಿಯುತ್ತಿತ್ತು.

ಕುಳಿತಿದ್ದೆವಾಗ ಟಕ್ಕಾಟಿಕ್ಕಿಯೆರಡು ಕಡೆ;
ನಿನ್ನ ಕಡೆಯೇ ಕೊನೆಗು ಕೊಂಚ ಹಗುರ;

ಆದರೂ ಆಗಾಗ್ಗೆ ಮೈಗೂಡಿ ಸಮತೂಕ
ಒಜ್ಜೆ ಎನಿಸಿರಲಿಲ್ಲ ಇಟ್ಟ ಹೆಜ್ಜೆ.

ಆದರೆ ಈಗಿನ ಪರಿಸ್ಥಿತಿಯೇ ಬೇರೆ.

ತೂಕ ಹೆಚ್ಚುತಿದೆ ದಿನದಿನಕ್ಕೆ; ಏತದ ನನ್ನ
ತುದಿ ಮಣ್ಣುತಿನ್ನುತಿದೆ, ಅತ್ತಕಡೆಗೆ
ನೀ ಹತ್ತಿ ಕುಳಿತಿದ್ದ ತುದಿ ಅಂತರಾಳಕ್ಕೆ;
ಚಾಳೇಶ; ಕಾಣಿಸದು ನಿನ್ನ ಚಹರೆ.

'ಪ್ರಾರ್ಥನೆ' ಕವನದಲ್ಲಿ ಕವಿ ಭಗವಂತನಲ್ಲಿ ಬೇಡಿಕೊಳ್ಳಲು ಅರ್ಹವಾಗಿರುವ ಸಂಗತಿಗಳನ್ನು ಗುರುತಿಸಿರುವ ರೀತಿಯನ್ನು ಸ್ವಲ್ಪ ನೋಡಿ....

ತಿಂದದ್ದು ಸರಿಯಾಗಿ ರಕ್ತವಾಗುವ ಹಾಗೆ
ಅನುಗ್ರಹಿಸು;.....
ಒಂದು ತುತ್ತನು ಮೂವತ್ತೆರಡುಸಲ ಜಗಿದು, ನುರಿಸಿ
ಜೊಲ್ಲಿಗೆ ಮಿಲಾಯಿಸುವಷ್ಟು ಆರೋಗ್ಯ
ಶಾಸ್ತ್ರದ ಮೊದಲ ಪಾಠ ಕಲಿಸು. ಕಲಿಸದಿದ್ದರು ಕೂಡ
ಕಲಿತಿಲ್ಲ ಎಂಬ ನೆನಪುಳಿಸು. ಉಳ್ಳಾಗೆಡ್ಡೆ
ತಿಂದು ಕೊರಳೆಲ್ಲ ಕಸ್ತೂರಿಯಾಗುವುದೆಂಬ
ಭ್ರಮೆಯ ಕಳೆ.....

ಸಹಜವಾಗಿಯೇ ಇವೆಲ್ಲಾ ಜ್ಞಾನಾರ್ಜನೆಗೆ ಉಪಮೆಗಳೆಂದು ಯಾರಾದರೂ ತಿಳಿಯಬಹುದು. ಹಾಗಿದ್ದರೂ ಮುಂದಿನ ಸಾಲುಗಳಲ್ಲಿ ಸೃಜನಶೀಲ ಕ್ರಿಯೆಯ ಬಗ್ಗೆ ಅಡಿಗರು ನೀಡಿರುವ ಲೈಂಗಿಕ ಉಪಮೆಗಳ ಬಗ್ಗೆ ಐವತ್ತರ ದಶಕದಲ್ಲಿ ದೊಡ್ಡ ಗಲಾಟೆ ಆಯಿತಂತೆ. ಈಗ ತೊಂಬತ್ತೆಂಟರಲ್ಲಿ ನಾನು ಮೊದಲಬಾರಿಗೆ ಈ ಸಾಲುಗಳನ್ನು ಓದಿದಾಗ, ಅವು ಸಾಕಷ್ಟು explicit, bold ಮತ್ತು erotic ಅನ್ನಿಸಿತು. ಲೈಂಗಿಕ ಪ್ರವೃತ್ತಿಗೂ ಸೃಜನಶೀಲ ಕ್ರಿಯೆಗೂ ಇರುವ ಹತ್ತಿರದ ನಂಟು ಎಲ್ಲರಿಗೂ ತಿಳಿದ ವಿಷಯವೇ. ಹಾಗಾಗಿ ಈ ಉಪಮೆಗಳ ಆಯ್ಕೆ ಕೇವಲ ಪ್ರಚೋದನಾತ್ಮಕ ಎನ್ನಲಾಗುವುದಿಲ್ಲ. ಅಲ್ಲದೇ A bit of eroticism never killed anybody ಎನ್ನುವ ವಾದವೂ ಇದೆಯಲ್ಲಾ. ಅಂದು ಸಂವಾದದ ಸಭೆಯಲ್ಲಿ ಈ ಬಗ್ಗೆ ಸ್ವಲ್ಪ ಚರ್ಚೆ ನಡೆಯಿತು. ಶ್ರೀಮತಿ ವಿಜಯಾರವರು ಸ್ತ್ರೀ ಸ್ವಾತಂತ್ರ್ಯದ ದೃಷ್ಟಿಯಿಂದ ಅಡಿಗರ ಕಾವ್ಯದ ಭಾಷೆ, ಒಬ್ಬ ವ್ಯಕ್ತಿಯಾಗಿ ಅಡಿಗರು ತಳೆದ conservative ನಿಲುವು ಇವುಗಳನ್ನು ಪ್ರಸ್ತಾಪಿಸಿದರು. ಸೌಜನ್ಯಕ್ಕಾಗಿ ಅವರು conservative ಪದ ಉಪಯೋಗಿಸಿದ್ದರೆಂದು ನನಗನ್ನಿಸಿತು. ಅವರು ಮುಕ್ತ

ಮನಸ್ಸಿನಿಂದ ಮಾತನಾಡಿದ್ದರೆ ಅಡಿಗರೊಬ್ಬ MCP (Male Chuvanistic Pig) ಅನ್ನುತ್ತಿದ್ದರೇನೋ. ವಿಜಯಾರವರ ಸಂಶಯಗಳಿಗೆ ಉತ್ತರಿಸಲು ಯತ್ನಿಸಿದ ಎಲ್ಲರೂ ಕಾವ್ಯಸ್ಫೂರ್ತಿಯ ಕ್ಷಣಗಳಲ್ಲಿ ಕವಿಯ ವ್ಯಕ್ತಿತ್ವವೇ ಬೇರೆ ಎಂಬ ವಿಚಿತ್ರ (ಹಾರಿಕೆಯ?) ಉತ್ತರವನ್ನು ನೀಡಿದ್ದರು. ನನ್ನ ನಮ್ರ ಅಭಿಪ್ರಾಯದಲ್ಲಿ Every man is an MCP at heart. Some are clever enough to conceal it ಅಷ್ಟೆ.

ಅಡಿಗರ ಪರವಾಗಿ ಹೇಳಬಹುದಾದ ಒಂದು ಮಾತೆಂದರೆhe has truly bared his soul in his poems. If the reader finds it has a touch of bacon in it, ನಮ್ಮ ಅಮೇರಿಕನ್ ಗೆಳೆಯರು ಹೇಳುವ ಹಾಗೆ tough luck. ವಿಜಯಾರವರ ಅಭಿಪ್ರಾಯಗಳನ್ನು ಮತ್ತೆ ಮತ್ತೆ ಮೆಲಕು ಹಾಕುತ್ತಿದ್ದಂತೆ ಒಮ್ಮೆಲೇ ಒಂದು ಪ್ರಶ್ನೆ ನನಗೆ ಇದಿರಾಯಿತು. ಯಾವುದಾದರೊಬ್ಬ ಕನ್ನಡ ಕವಯಿತ್ರಿ ನನ್ನ ಕವನಗಳಲ್ಲಿ ಅಡಿಗರಷ್ಟೇ ಧಾರಾಳವಾಗಿ ಪುರುಷರ ಲೈಂಗಿಕತೆ, ಪುರುಷಾಂಗ ಇವುಗಳನ್ನು ಕುರಿತು ಹಾಡಿದ್ದರೆ, ಆಕೆಯ ಸಾಹಿತ್ಯಕ್ಕೆ ವಸ್ತು ನಿಷ್ಠ ಪುರಸ್ಕಾರ ದೊರಕುತ್ತಿತ್ತೇ? ಸಾಹಿತ್ಯಾಸಕ್ತರೆಲ್ಲರೂ ಮನನ ಮಾಡಬೇಕಾದ ವಿಷಯ.

'ಪ್ರಾರ್ಥನೆ' ಯಲ್ಲಿ ಮುಂದೆ ಬರುವ ಈ ಸಾಲುಗಳು ಕವಿಯ ಧೀರೋದಾತ್ತ ನಿಲುವಿಗೆ ಒಂದು ನಿದರ್ಶನ.

ಕಲಿಸು ಬಾಗದೆ ಸೆಟೆವುದನ್ನು, ಬಾಗುವುದನ್ನು;
ಹೊತ್ತಿನ ಮುಖಕೆ ಶಿಖೆ ತಿವಿವುದನ್ನೂ ಹಾಗೆ
ಗಾಳಿಗಲ್ಲಾಡಿ ಬಳುಕಾಡಿ ತಾಳುವುದನ್ನು....

ಅಡಿಗರ ಕಾವ್ಯಸುಧೆಯ ಅನನ್ಯ ಅನುಭವ ನೀಡಿದ ಮಿತ್ರರಿಗೆ ಮತ್ತು ಸಂವಾದಕ್ಕೆ A big and grateful Thanks.

ಹನಿ ಮಿನಿ ಕವನಗಳು
ಸಾಮಾನ್ಯರ ನೋಟಕ್ಕೆ ಸಿಗುವ
ಚಿಕ್ಕಪುಟ್ಟ ಮೀನುಗಳಂತೆ;
ಮಹಾಕಾವ್ಯ ಮಹಾ ಕಾದಂಬರಿಗಳು
ತಿಮಿಂಗಿಲಗಳಂತೆ-
ದೂರವಿರಿಸಿದರೇನೇ ನಿಶ್ಚಿಂತೆ.

ಶಂಸ

With Best Compliments From:

M/s.Vita Pumps (P) Ltd.

Saint Anthony Industrial Estate
Kanakapura Road,
Bangalore - 560 078

With Best Compliments From:

Naveen Rubbers
Ancillary to K.S.R.T.C.

Manufacturers of:
Automobile & Industrial Rubber Components

C-281, Ist Stage, 7th Cross,
Peenya Industrial Estate, Bangalore - 560 058
Phone: 8395281 Res: 3304876

With Best Compliments From:

A
Well
Wisher

With Best Compliments From:

M/S. NATARAJ METAL STORES
(Dealer in all kinds of Non Ferrous Scrap)

4-P.V.R. ROAD
RANASINGH PET
BANGALORE - 560 053

ಪಾಪಮ್ಮನಿಗೆ ಬಂದ ಪತ್ರ

- ಕಂ.ಭಂ. ಕೃಷ್ಣಮೂರ್ತಿ

ಸರ್ಕಾರಿ ನಿಯಂತ್ರಣದ ಯಾವುದೇ ಉದ್ಯಮವಾಗಿರಲಿ ಸಾರ್ವಜನಿಕರು ಮೂಗು ಮುರಿಯುವುದನ್ನು ಒಂದು ರೂಢಿಯನ್ನಾಗಿ ಮಾಡಿಕೊಂಡಿರುತ್ತಾರೆ. ಸರ್ಕಾರಿ ಸ್ವಾಮ್ಯದ ಏರ್‌ಲೈನ್ಸ್‌ನಿಂದ ಹಿಡಿದು ಮೃಗಾಲಯದವರೆಗೆ ಅವರ ಸಿಡಿಪಿಡಿ ಇದ್ದೇ ಇರುತ್ತದೆ. ಪಬ್ಲಿಕ್ ಸೆಕ್ಟರಿನ ಕಾರ್ಖಾನೆಗಳೇ ಆಗಲಿ ಅಥವಾ ಕಛೇರಿಗಳೇ ಆಗಲಿ, ಎಲ್ಲವನ್ನೂ ಸಬ್ ಲುಂಡವಾಗಿ ಟೀಕಿಸುವುದು ಜನರಿಗೆ ಅಭ್ಯಾಸವಾಗಿ ಹೋಗಿದೆ. ಸಾರಿಗೆ ಸಂಸ್ಥೆಗಳ ಅವ್ಯವಸ್ಥೆ, ಈ ಕಛೇರಿಗಳಲ್ಲಿನ ಬ್ಯೂರೋಕ್ರಸಿ, ಕಾರ್ಖಾನೆಗಳ ಅಧ್ವಾನ, ಹೀಗೆ ಪಟ್ಟಿ ಮಾಡುತ್ತಾ ಹೋದರೆ ಮುಗಿಯುವಂತೆಯೇ ಕಾಣುವುದಿಲ್ಲ. ಆದರೆ ಎಲ್ಲಾ ಸರ್ಕಾರಿ ಕಛೇರಿಗಳಲ್ಲೂ ಸಿಬ್ಬಂದಿ ವರ್ಗ, ಕುರ್ಚಿಗೆ ಕೋಟು ತಗುಲಿಸಿ, ಕಾಫಿ ತಿಂಡಿ ಸಮಾರಾಧನೆಯಲ್ಲೇ ತೊಡಗಿ ಕರ್ತವ್ಯವನ್ನು ಅಲಕ್ಷಿಸಿದೆಯೆ? ಸರ್ಕಾರಿ ಸ್ವಾಮ್ಯದ ಎಲ್ಲಾ ಕಾರ್ಖಾನೆಗಳೂ ಆದಾಯದ ಮುಖವನ್ನೇ ಕಾಣದೆ ನಷ್ಟ ಮಾಡಿಕೊಂಡು, ರೋಗದಿಂದ ಬಳಲುತ್ತಿದೆಯೆ? ಖಂಡಿತ ಇಲ್ಲ. ಆದರೆ ಜನತೆಯ ಕ್ಯಾಟರಾಕ್ಟ್ ಕಣ್ಣುಗಳಿಗೆ ಇರುವೆ ಆನೆಯಾಗಿ ಕಾಣುವುದರಿಂದ ಸಿನಿಕತನ ಪರಮಾವಧಿಯನ್ನು ಮುಟ್ಟಿದೆ. ಪೋಲೀಸು ಖಾತೆಯೆಂದರೆ ಎಲ್ಲರನ್ನೂ ಬಡಿಯುವ ರಕ್ಕಸ ಖಾತೆಯೆಂದೇ ಮಂದಿ ತಿಳಿದಿದ್ದಾರೆ. ಅಲ್ಲೊಂದು ಇಲ್ಲೊಂದು ರೈಲುಗಳು ವಿಳಂಬವಾಗಿ ನಿಲ್ದಾಣವನ್ನು ತಲುಪಿದರೆ ''ಏನು ರೈಲಿನಲ್ಲಿ ಬಂದಿರಾ. ನಡೆದುಕೊಂಡು ಬಂದಿದ್ದರೆ ಇನ್ನೂ ಬೇಗ ಬರಬಹುದಾಗಿತ್ತಲ್ಲಾ'' ಎಂದು ರೈಲ್ವೆ ಖಾತೆಯನ್ನು ವ್ಯಂಗೋಕ್ತಿಗಳಿಂದ ಚುಚ್ಚುತ್ತಾರೆ. ಅಂಚೆ ಖಾತೆಯನ್ನಂತೂ ಉಗಿದು ಉಪ್ಪು ಹಾಕೋದ್ರಲ್ಲಿ ಜನರಿಗೆ ಏನೋ ಒಂದು ವಿಧವಾದ ಖುಷಿಯಿರುವಂತೆಯೇ ತೋರುತ್ತದೆ. ವಿಳಂಬವಾಗಿ ತಲಪುವ ಟೆಲಿಗ್ರಾಂಗಳು, ಸತ್ತಮೇಲೆ ತಲುಪುವ ಮನಿಯಾರ್ಡರ್‌ಗಳು, ಮಟಾಮಾಯವಾಗುವ ಬುಕ್‌ಪೋಸ್ಟುಗಳು, ಅಲ್ಲದೆ ಪತ್ರಗಳನ್ನು ಬೀದಿಯಿಂದಲೇ ಎಸೆದು ಹೋಗುವ ಅಂಚೆ ಪೇದೆಗಳ ನಡವಳಿಕೆ ಮುಂತಾದವುಗಳ ಬಗ್ಗೆ ಸಾರ್ವಜನಿಕರು ಕಟುವಾಗಿ ಟೀಕಿಸುತ್ತಲೇ ಇರುತ್ತಾರೆ. ಆದರೆ ಎಲ್ಲಾ ಅಂಚೆ ಪೇದೆಗಳು ಈ ರೀತಿ ಅಲಕ್ಷ ಮಾಡುತ್ತಾರೆಯೆ ಎಂಬ ಪ್ರಶ್ನೆಗೆ ನಕಾರವೆ ಉತ್ತರ. ಇದಕ್ಕೆ ಸಾಕ್ಷೀಭೂತವಾಗಿ ಅಂಚೆಯಾಳು ಮೂಲಿಮನಿಯೇ ಇಲ್ಲವೆ?

ಪೋಸ್ಟ್‌ಮ್ಯಾನ್ ಮೂಲಿಮನಿಗೆ ಕರ್ತವ್ಯವೇ ದೇವರು. ಕಾಯಕವೇ ಕೈಲಾಸ. ಅವನು ಇದುವರೆಗಿನ ಅವನ ಸರ್ವೀಸಿನಲ್ಲಿ, ಒಂದೇ ಒಂದು ಪತ್ರವನ್ನೂ ಸಹ ಡೆಲಿವರಿ ಮಾಡದೆ, ಡೆಡ್‌ಲೆಟರ್ ಕಛೇರಿಗೆ ರವಾನಿಸಿದವನಲ್ಲ. ವಿಳಾಸ ಪೂರ್ಣವಾಗಿಲ್ಲದಿದ್ರೂ, ವಿಳಾಸದಾರರನ್ನು ಪತ್ತೆಹಚ್ಚಿ, ಪತ್ರವನ್ನು ಆತನ ಕೈಗೆ

ಹಾಕುವವರೆಗೂ ಮೂಲಿಮನಿಗೆ ಊಟನಿದ್ರೆ, ಯಾವುದೂ ಬೇಕಾಗುವುದಿಲ್ಲ. ವ್ಯಕ್ತಿಯ ಹೆಸರು, ರಸ್ತೆಯ ನಂಬರು ಎರಡಿದ್ರೆ ಸಾಕು ಮೂಲಿಮನಿಯ ಕೈಗೆ ಬಂದ ಆ ಪತ್ರ ಡೆಲಿವರಿ ಆಗಿಯೇ ಹೋಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ''ಪೋಲೀಸು ಖಾತೇಲಿ ನೀ ಇರಲಿಕ್ಕೆ ಬೇಕಿತ್ತಪ್ಪ ಮೂಲಿಮನಿ. ಅದು ಹೋಗಿ ಈ ಅಂಚೆ ಖಾತೆ ಹಿಡಿದು ಮೂಲಿಗೆ ಬಿದ್ದಂಗಾತು ನಿನ್ನ ಬಾಳು'' ಎಂದು ಅವನ ವೈನಿ ದುರುಗವ್ವ ಅಲವತ್ತುಕೊಳ್ಳುತ್ತಿದ್ದಳು. ಅವನು ಬಾಗಿಲು ತಟ್ಟಿ ಮನೆಯವರನ್ನು ಎಬ್ಬಿಸಿಯಾದರೂ ಪತ್ರಪ್ರಧಾನ ಮಾಡುತ್ತಿದ್ದನೇ ವಿನಹ ಅದನ್ನು ಬೀದಿಯಿಂದಲೇ ಎಸೆದು ಹೋಗುವ ಉದ್ಧಟತನವನ್ನು ಎಂದೂ ತೋರಿರಲಿಲ್ಲ. ಸದಾ ಅವನ ಚೀಲದಲ್ಲಿ ಬಿಸ್ಕತ್ತಿನ ಪ್ಯಾಕೆಟ್ಟೊಂದು ರೆಡಿಯಾಗಿರುತ್ತಿತ್ತು. ''ನಾಯಿಯಿದೆ ಎಚ್ಚರಿಕೆ'' ಎಂಬ ಬೋರ್ಡಿರುವ ಮನೆಗಳಲ್ಲಿ ಮೊದಲು ಗೇಟಿನ ಹತ್ತಿರ ಎರಡು ಬಿಸ್ಕತ್ತನ್ನು ಹಾಕಿ, ಶುನಕ ಬಾಲ ಗುಂಡಾಡಿಸಿಕೊಂಡು ಅದನ್ನು ತಿನ್ನುತ್ತಿರುವಂತೆಯೆ, ಮೂಲಿಮನಿ ಮನೆಯವರ ಕೈಗೆ ಪತ್ರ ರವಾನಿಸಿ ಹೋಗುತ್ತಿದ್ದ. ಅವನ ಸದ್ಗುಣ ಮನೆಮಾತಾಗಿತ್ತು. ಮುವತ್ತು ವರ್ಷಗಳ ಅನ್‌ಸ್ಟಿಂಟಿಡ್ ಸರ್ವೀಸಿನಲ್ಲಿ ಅದೊಂದು ದಿನ ಕಾರ್ಮೋಡ ಕವಿದಂತಾಗಿತ್ತು. ಮೂಲಿಮನಿ ಕರ್ತವ್ಯ ಪರಾಯಣತೆಗೆ ದೊಡ್ಡ ಸವಾಲಾಗಿ ಅವನ ಭೇಟಿಗೆ ಪತ್ರವೊಂದು ಬಂದಿತ್ತು.

ಕವರಿನ ಮೇಲಿದ್ದ ವಿಳಾಸವನ್ನು ಕಂಡೇ ಮೂಲಿಮನಿಗೆ ಮೂರ್ಛೆ ಬರುವಂತಾಯ್ತು. ವಿಳಾಸದಲ್ಲಿ, ಪೈಪ್‌ಹೌಸ್ ಪಾಪಮ್ಮ, ಶಂಕರಶೆಟ್ಟರ ಬಂಗಲೆಯ ಎದುರು, ಅಪ್ಪಿಕೊಳದ ಹತ್ತಿರ, ಎಡದಲ್ಲಿ ಸಾಮಿಲ್ಲು, ಬಲದಲ್ಲಿ ಹಿಟ್ಟಿನ ಗಿರಣಿ'' ಎಂದು ನಮೂದಿಸಿತ್ತು. ಪತ್ರ ಬರೆದವನ ವಿಳಾಸ ಲಕೋಟೆಯ ಮೇಲಿರಲಿಲ್ಲ. ''ಇದೇನು ಅಡ್ರಸ್ಸೋ ಅಥವಾ ಮನೆ ಸೈಟಿನ ಚೌತರ್ಫೋ'' ಎಂದು ಮೂಲಿಮನಿ ಮೂಗಿನ ಮೇಲೆ ಬೆರಳಿಟ್ಟುಕೊಂಡ. ಈ ಚೌತರ್ಫಿನ ವಿಳಾಸದಿಂದ ಪೈಪ್‌ಹೌಸ್ ಪಾಪಮ್ಮನನ್ನು ಪತ್ತೆ ಹಚ್ಚುವುದು ಹೇಗೆಂದು ಅವನು ಚಿಂತಾಕ್ರಾಂತನಾದ. ಆದರೆ ಚಿಂತೆ ಮಾಡುತ್ತಾ ತೆಪ್ಪಗೆ ಕೂಡಲು ಸಾಧ್ಯವೆ? ಕರ್ತವ್ಯವೇ ದೇವರೂಂತ ನಂಬಿದ್ದ ಮೂಲಿಮನಿ ಪತ್ರವನ್ನು ಷರಾ ಬರೆದು ಹಾಗೆಲ್ಲಾ ಡೆಡ್‌ಲೆಟರ್ ಕಛೇರಿಗೆ ರವಾನಿಸುತ್ತಾನೆಯೆ? ಅವನ ಕಲೀಗುಗಳ ಮಾತಿಗೆ ಕಿವಿಗೊಡದೆ ಕರ್ತವ್ಯ ಪರಾಯಣನಾದ ಅವನು ಕಾರ್ಯತತ್ಪರನಾದ.

ತನ್ನ ಬೀಟಿಗೆ ಸೇರದ ಕಡೆಗಳಲ್ಲೆಲ್ಲಾ ವಿಚಾರಿಸಿದ. ''ಪೈಪ್‌ಹೌಸ್ ಅಂತಿಲ್ಲ ಕಣ್ರಿ. 'ಪೆಗ್‌ಹೌಸ್' ಅಂತ ಹದಿನಾರನೇ ಕ್ರಾಸಿನಲ್ಲಿದೆ. ಅಲ್ಲಿ ಬೆಳಗಿಂದ್ಲೇ ಎಣ್ಣೆ ಹಾಕ್ತಾಕೂಡೋ ಮಂದಿ ಇದಾರೆ. ಅಲ್ಲಿ ವಿಚಾರ್ಸಿ'' ಎಂದು ಯಾರೋ ನಿರ್ದೇಶಿಸಿದರು. ''ಪ್ಲೇ ಹೌಸ್ ಅಂತ ಟ್ವೆಲ್ತ್ ಕ್ರಾಸಿನಲ್ಲಿದೆ. ಅಲ್ಲಿ ಮೂರೆಲೆ ಆಟಾನೂ ಆಡ್ತಾರಂತೆ. ಅದೇ ಇರಬಹುದೇನೋ ನೋಡಿ'' ಎಂದು ಮತ್ಯಾರೋ ಮೂಲಿಮನಿಗೆ ಹೇಳಿದರು. ಪೋಸ್ಟ್‌ಮ್ಯಾನಾಗಿ, ತಾನೇ ನಿರ್ದೇಶಿಸಬೇಕಾದವನು

ಬೇರೆಯವರಿಂದ ವಿಳಾಸವನ್ನು ಕೇಳಿ ತಿಳಿಯಬೇಕಾದ ಪರಿಸ್ಥಿತಿ ಒದಗಿದ್ದಕ್ಕೆ ಅವನು ಬಹಳ ಸಂಕಟಪಟ್ಟ. ''ಪೈಪ್ ಹೌಸೆಂದರೆ ಪೈಪಿನಾಕಾರದಲ್ಲಿ ಕಟ್ಟಿರುವ ಮನೆಯಿರಬಹುದೆ'' ಎಂದು ತರ್ಕಿಸಿ, ಆ ರೀತಿಯಲ್ಲಿರುವ ಕಟ್ಟಡಕ್ಕಾಗಿ ತಡಕಾಡಿದ ಮೂಲಿಮನಿ; ಯಾವುದೂ ಕಣ್ಣಿಗೆ ಬೀಳದೆ ನಿರಾಶೆಯಿಂದ ಖತಿಗೊಂಡ.

ಅವನು ವಿಳಾಸವನ್ನು ಪತ್ತೆ ಹಚ್ಚಲಿಕ್ಕೆ ಸಾಧ್ಯವಾಗದೆ ಹತಾಶನಾಗಿ ಮನೆಗೆ ಬಂದು, ತನ್ನ ಮಡದಿಗೆ ವಿಷಯವನ್ನು ವಿವರಿಸುತ್ತಿದ್ದಾಗ, ಅದನ್ನು ಕೇಳುತ್ತಿದ್ದ ಅವನ ಕುಮಾರ ಕಂಠೀರವ ಒಮ್ಮೆಲೇ ಹೇಳಿದ. ''ಪೈಪ್ ಅಂದ್ರೆ ಕೊಳವಿ. ಹೌಸ್ ಅಂದ್ರೆ ಮನಿ. ಕೊಳವಿನಾಗೆ ಮನೀಂತ ಆಗೂಲ್ದೇನ್ರಿ ಅಪ್ಪಾಜಿ. ಅಪ್ಪಿ ಕೊಳದ ಹಿಂಬದಿಗೆ ಪೈಪು ಹಾಕ್ಯಾರಲ್ಲ ಅಪ್ಪಾಜಿ, ಅಲ್ಲಿ ಕೇಳ್ಲಿಕ್ಕೆ ಹತ್ತಿಲ್ಲೇನು?'' ಎಂದು ಮಗರಾಯ ಹೇಳಿದಾಗ ಮೂಲಿಮನಿಗೆ ಮಹದಾನಂದವಾಯ್ತು. ಇಷ್ಟು ಚುರುಕುಮತಿಯಾದ ತನ್ನ ವಂಶೋದ್ಧಾರಕ ಪೋಸ್ಟ್‌ಮ್ಯಾನ್ ಆದರೆ, ತನ್ನ ವಂಶಕ್ಕೆ ಅಪಾರ ಕೀರ್ತಿ ತರುವುದರಲ್ಲಿ ಸಂಶಯವಿಲ್ಲವೆಂದು ಅವನು ಸಂತಸಪಟ್ಟ. ತಾನು ಪೋಸ್ಟ್‌ಮ್ಯಾನ್, ತನ್ನ ಮಗನೂ ಪೋಸ್ಟ್ ಮ್ಯಾನ್ ಆಗಬೇಕೆಂದು ತಂದೆಯಾದ ಅವನು ಆಶೆಪಡುವುದರಲ್ಲಿ ತಪ್ಪೇನಿದೆ? ಪ್ರಧಾನಿಯಾದವನು ತನ್ನ ಕುಮಾರನೂ ಪ್ರಧಾನಿಯಾಗಲೆಂದು ಆಶೆ ಪಡುವುದಿಲ್ಲವೆ?


ಒಂದು ತಿಂಗಳಿಂದ ಪಾಪಮ್ಮನ ಪತ್ರವನ್ನು ಹಿಡಿದುಕೊಂಡು, ನಾಯಿಯಂತೆ ಬೀದಿ ಬೀದಿಗಳಲ್ಲಿ ಅಲೆದಾಡಿದ್ದ ಮೂಲಿಮನಿ, ಆದಿನ ಕಛೇರಿಗೆ ರಜಾ ಹಾಕಿ ಅಪ್ಪಿ ಕೊಳದ ಹಾದಿ ಹಿಡಿದ. ದೂರದಲ್ಲಿ ಸಾಮಿಲ್ಲು ಮತ್ತು ಹಿಟ್ಟಿನ ಗಿರಣಿಗಳು ಕಂಡು ಬಂದವು. ವಿಶಾಲದವಾದ ಬಯಲಿನಲ್ಲಿ ಮೂವತ್ತು ಕಿಲೋಮೀಟರ್ ದೂರವಿದ್ದ ಕಾವೇರಿಯನ್ನು, ಐವತ್ತು ಕಿಲೋಮೀಟರ್ ದೂರದಲ್ಲಿದ ಕಪಿಲೆಯನ್ನು ಒಟ್ಟುಗೂಡಿಸಿ ನೀರಾವರಿ ವ್ಯವಸಾಯಕ್ಕೆ ನೀರು ಒದಗಿಸಲು, ಸರ್ಕಾರ ಯೋಜನೆಯೊಂದನ್ನು ಹಾಕಿಕೊಂಡು ಖಾಸಗಿ ಕಂಟ್ರಾಕ್ಟುದಾರನಿಗೆ ಈ ವ್ಯವಹಾರವನ್ನು ಒಪ್ಪಿಸಿತ್ತು. ಆತ ಭಾರಿ ಗಾತ್ರದ ಕಾಂಕ್ರೀಟ್ ಪೈಪುಗಳನ್ನು ಅಪ್ಪಿಕೊಳದ ಹಿಂಭಾಗದಲ್ಲಿ ಹಾಕಿ ಅದರ ಬಿಲ್ಲನ್ನು ಪಾಸುಮಾಡಿಸಿಕೊಳ್ಳಲು ಒಂದು ಸಂವತ್ಸರದಿಂದ ಅಲೆದಾಡುತ್ತಿದ್ದುದರಿಂದ, ಪೈಪುಗಳು ಬಿಸಿಲು, ಮಳೆಗೆ ಮೈಯೊಡ್ಡಿ ಹದಗೆಟ್ಟು ಮೈದಾನದಲ್ಲಿ ಹರಡಿ ಹೋಗಿದ್ದವು. ಅನಾಥವಾಗಿ ಮಲಗಿದ್ದ ಪೈಪುಗಳನ್ನೇ ವಸತಿಯನ್ನಾಗಿ ಮಾಡಿಕೊಂಡು, ರದ್ದಿ ಆರಿಸುವ ಕುಟುಂಬಗಳು ಠಿಕಾಣಿ ಹೂಡಿದ್ದವು.

ಮೂಲಿಮನಿ ಅಲ್ಲಿಗೆ ಬಂದು ಪಾಪಮ್ಮನ ಬಗ್ಗೆ ವಿಚಾರಿಸಿದಾಗ, ''ಆ ನಾಕನೇ ನಂಬರ ಪೈಪಿನಾಗೆ ಅವ್ಳೆ'' ಎಂದು ಮುದುಕಿಯೊಂದು ಮಾರ್ಗದರ್ಶನ ಮಾಡಿತು. ಆಫೀಸುಗಳಿಗೆ ಹೋಗುವವರು ಅವಸರದಿಂದ ರೆಡಿಯಾಗುವ ಹಾಗೆ, ಪಾಪಮ್ಮ ರದ್ದಿ ಆರಿಸಲು ಗೋಣಿಚೀಲವನ್ನು ಹಿಡಿದು ಸಿದ್ಧವಾಗಿದ್ದಳು. ಮೂಲಿಮನಿ ಪತ್ರವನ್ನು ಅವಳ ಕೈಯಲ್ಲಿಟ್ಟಾಗ ಅವನನ್ನೇ ಓದುವಂತೆ ಕೇಳಿಕೊಂಡಳು. ಪತ್ರದಲ್ಲೂ

ವಿಳಾಸವಿರಲಿಲ್ಲ. ಕೇವಲ ಕೋತಿ ಬಂಡೆ ದೇವಸ್ಥಾನ. ಬೆಂಗಳೂರು ಎಂದಷ್ಟೇ ಬರದಿತ್ತು. ಪತ್ರದ ಒಕ್ಕಣೆಯನ್ನು ಘಟ್ಟಿಯಾಗಿಯೇ ಓದಿದ ಮೂಲಿಮನಿ.

''ಫೈವ್ ಹೌಸ್ ಪಾಪಮ್ಮನಿಗೆ ಕುಷ್ಟದ ತಿಮ್ಮಪ್ಪನ ನಮಸ್ಕಾರಗಳು. ನಿನ್ನೆ ದಿನ ನಿಮ್ಮ ಪತಿ ಕೋತಿ ಬಂಡೆ ದೇವಸ್ಥಾನದ ಹತ್ತಿರ ಭಿಕ್ಷೆ ಬೇಡುತ್ತಿದ್ದವರು, ಯಾರೋ ನೂರು ರೂ ನೋಟನ್ನು ಭಿಕ್ಷೆಯಾಗಿ ಹಾಕಿದ್ದು ಕಂಡು ಎದೆಯೊಡೆದು ಸತ್ತರು. ನಾವೆಲ್ಲಾ ಸೇರಿ, ಹಣವನ್ನು ಬೀದಿಯಲ್ಲಿಟ್ಟುಕೊಂಡು, ಕಲಕ್ಷನ್ ಮಾಡಿ ಬಂದ ಹಣದಿಂದ ಅವರನ್ನು ದಫನ್ ಮಾಡಿದೆವು. ನೀವು ಇಲ್ಲಿಗೇ ಬಂದು ಅವರ ಕಸುಬನ್ನೇ ಮಾಡುವುದಾದರೆ, ಅವರು ಭಿಕ್ಷೆ ಬೇಡಲು ಕೊಡುತ್ತಿದ್ದ ಜಾಗವನ್ನು ನಿಮಗಾಗಿ ಕಾದಿರಿಸುತ್ತೇವೆ. ಯಾವುದಕ್ಕೂ ಪತ್ರ ಬರೆಯಿರಿ. ಇತಿ, ಕುಷ್ಟದ ತಿಮ್ಮಪ್ಪ.....'

ಯಾರಿಂದಲೋ ಭಿಕ್ಷುಕ ತಿಮ್ಮಪ್ಪ ಈ ಕಾಗದವನ್ನು ಬರಸಿ ಹಾಕಿದ್ದ. ಮೂಲಿಮನಿಯ ಕರ್ತವ್ಯನಿಷ್ಠೆಯಿಂದಾಗಿ ಪಾಪಮ್ಮನಿಗೆ ಪತ್ರ ತಲುಪಿತು. ಆದರೆ ಕೊಂಚ ಲೇಟಾಗಿ ತಲುಪಿತು. ಪಾಪಮ್ಮನ ವೈಧವ್ಯದ ವಾರ್ತೆ ಸಾವಕಾಶವಾಗಿ ತಲುಪಿದ್ದರಿಂದ ಆಕೆಗಾದ ನಷ್ಟವಾದರೂ ಏನು? ಈ ರೀತಿಯ ವಿಳಂಬಕ್ಕೆ ನಾವು ಅಂಚೆ ಖಾತೆಯನ್ನು ಟೀಕಿಸುವುದು ಸಾಧುವೆ?



ಬೆಳದಿಂಗಳ ಬಾಲೆ

- ಬಿ.ಆರ್. ಲಕ್ಷ್ಮಣರಾವ್

ಬರೆಯುತ್ತ ಕೂತಿದ್ದೆ ಪ್ರೇಮಕವಿತೆಯೊಂದನ್ನು
ಧ್ಯಾನಸ್ಥನಾಗಿ ನಾನು.
ನನ್ನ ಕಾವ್ಯಕನ್ನಿಕೆಯ ಕಾಲ್ಗೆಜ್ಜೆ ಸದ್ದಂತೆ
ಕಿಂಕಿಣಿಗುಟ್ಟಿತು ಫೋನು.

ಎಂದಿನಂತೆ ಫೋನನ್ನು ಎತ್ತಿಕೊಂಡಳು ಮಡದಿ,
ಅಂದಳು: 'ಯಾವುದೋ ಹೆಂಗಸು,
ನಿಮ್ಮೊಂದಿಗೇ ಏನೋ ಮಾತಾಡಬೇಕಂತೆ
ಖಾಸಗಿ ಗುಸುಗುಸು.'

ಹೆಂಗಸರಿಂದ ನನಗೆ ಫೋನ್ ಬಂದರೆ ಇಂದಿಗೂ
ನನ್ನಾಕೆ ಆಡುವುದೇ ಹೀಗೆ
ಸಿಡಿಮಿಡಿಗುಟ್ಟುತ್ತ ಫೋನ್ ಕೊಟ್ಟಳು ಕೈಗೆ
ದುರ್ದಾನ ಕೊಟ್ಟಹಾಗೆ

'ಹಲೋ' ಎಂದೆ. ಕೇಳಿತು ಆ ಬದಿಯ ಇನಿದನಿ
'ಯಾರು? ಕವಿ ಪುಂಗವರೆ ತಾನೆ?'
ಹಿಗ್ಗಿತು ನನ್ನೆದೆ ಧನ್ಯತಾಭಾವದಿಂದ
ಅಂದೆ: 'ಹೌದು, ನಾನೇ'

'ಸ್ವಾಮಿ ಕವಿಗಳೇ, ನಿಮಗೆ ಕಿಂಚಿತ್ತಾದರೂ
ಮಾನ ಮರ್ಯಾದೆ ಇದೆಯೆ?'
ರಪ್ಪೆಂದು ಕಪಾಳಕ್ಕೆ ತಾಟಿದಂತಾಯ್ತು,
'ಯಾಕೆ? ಏನು ವಿಷಯ?'

ವಿಷಯವಂತೆ ವಿಷಯ! ಆಹಾ, ನಾಟಕ ಆಡಬೇಡಿ
ಏನೂ ಗೊತ್ತಿಲ್ಲದ ರೀತಿ.'
ಇದೀಗ ನಾನು ನಿಜಕ್ಕೂ ಹೌಹಾರಿದೆ,
ದೇವರೇ, ಏನೀ ಫಜೀತಿ?

ಪಕ್ಕದಲ್ಲೇ ಹೆಂಡತಿ ನಿಂತಿದ್ದಾಳೆ ದುರುಗುಟ್ಟುತ್ತ,
ಕೇಳಿದೆ: 'ತಾವ್ಯಾರು, ತಾಯಿ?'
'ತಾಯಿಯಂತೆ ತಾಯಿ! ಆ ಪದವನ್ನು ನುಡಿಯಲು
ಹೇಗೆ ತಾನೆ ಬಂತು ನಿಮಗೆ ಬಾಯಿ?

ಸದ್ಗೃಹಿಣಿ, ಸದಚಾರ ಸಂಪನ್ನೆ, ಜೊತೆಗೆ
ಎರಡು ಮಕ್ಕಳಿಗಮ್ಮ ನಾನು
ಇನ್ಯಾರೂ ತೋರಲಿಲ್ಲವೆ ನಿಮ್ಮ ಮನೋವಿಕಾರಕ್ಕೆ
ಮಾಡಲು ಅನಾಮಿಕ ಫೋನು?

ಬೆಳದಿಂಗಳ ಬಾಲೆಯೆ? ಮಧುಮಾಲೆಯೆ ನಾ ನಿಮಗೆ?
ಪ್ರೇಮಲೋಲೆಯೆ? ರಾಮರಾಮ!
ಭೆಟ್ಟಿಯಾಗಬೇಕೆ ಕೆರೆಕಟ್ಟೆಯ ಬಳಿ ನಿಮ್ಮನ್ನು
ಧಿಕ್ಕರಿಸಿ ನೀತಿನೇಮ?

ಹೊತ್ತಿಲ್ಲ ಗೊತ್ತಿಲ್ಲ, ಕರ್ಣಪಿಶಾಚಿಯ ಹಾಗೆ
ಕಾಡುತ್ತಿರುವ ಪ್ರೇಮಧಾರೆ
ನಿಮ್ಮದೇ ಎಂದು ಟೆಲಿಫೋನ್ ಎಕ್ಸ್‌ಚೇಂಜಿನವರು
ಪತ್ತೆ ಹಚ್ಚಿ ಹೇಳಿದ್ದಾರೆ.

'ಛೇ, ಛೇ, ನಾನು ಖಂಡಿತ ಅಂಥವನಲ್ಲ,
ಯಾರದ್ದೋ ಕುಚೇಷ್ಟೆಯಿದು, ಮೇಡಂ.'

'ನಿನ್ನೆ ಇದೇ ಧ್ವನಿ, ಇದೇ ವರಸೆಯಲ್ಲಿ ನೀವಂದದ್ದು,
ನೀನೇ ಈವು, ನಾನು ಆ್ಯಡಂ'

'ಶಾಂತಂ ಪಾಪಂ! ನನ್ನ ಪಕ್ಕದಲ್ಲೇ ನಿಂತಿರುವ
ಧರ್ಮಪತ್ನಿಯ ಮೇಲೆ ಆಣೆ,
ನೀವ್ಯಾರು? ಹೆಸರೇನು? ಫೋನ್ ನಂಬರೆಷ್ಟು?
ಯಾವುದೊಂದೂ ನಾನು ಕಾಣೆ.'

'ಆದದ್ದಾಯಿತು, ಪಾಪ, ಬಡಪಾಯಿ ಕವಿಯೆಂದು
ತೋರಿದ್ದೇನೆ ಈ ಬಾರಿ ಮುಲಾಜು
ಇನ್ನೊಮ್ಮೆ ಈ ರೀತಿ ಕರೆ ಬಂದಿತೆಂದರೆ
ಹಾಕುತ್ತೇನೆ ಮಾನ ಹರಾಜು.'

ಇಟ್ಟೇ ಬಿಟ್ಟಳು ಫೋನು ಯಾರೋ ಆ ನಾರೀಮಣಿ
ಕೊನೆಗೂ ತಿಳಿಸದೆ ತನ್ನ ಹೆಸರು.
ಮೊಸರನ್ನ ತಿಂದಿತ್ತು ಯಾವುದೋ ಕೋತಿ,
ಮೇಕೆ ಮೂತಿಗೆ ಬಳಿದು ಮೊಸರು.

ಮುಂದೆ ನಡೆದದ್ದೆಲ್ಲ ನೀವೇ ಊಹಿಸಬಹುದು:
ನನ್ನಾಕೆಯಿಂದ ನಾಮಾರ್ಚನೆ;
ನಿರಪರಾಧಿ ನನ್ನಿಂದ ವ್ಯರ್ಥ ಸಮಜಾಯಿಷಿ;
ಇಡೀ ರಾತ್ರಿ ಜಾಗರಣೆ.

ನನಗೆ ಒಳಗೊಳಗೇ ಅನುಮಾನ ಶುರುವಾಗಿತ್ತು,
ನನಗೇ ಗೊತ್ತಿಲ್ಲದೆ ನಾನು,
ನಿದ್ದೆಯಲ್ಲೋ, ಮಂಪರಲ್ಲೋ ಅಥವಾ ಹಗಲುಗನಸಿನಲ್ಲೋ
ಮಾಡಿರಬಹುದೆ ಆಕೆಗೆ ಫೋನು?

ಬೆಳಗ್ಗೆ ಹೆಂಡತಿ ಕಡ್ಡಿ ಮುರಿದಂತೆ ಹೇಳಿದಳು:
'ಇದು ಕೊನೆಯ ಎಚ್ಚರಿಕೆ ನಿಮಗೆ,
ಮಂಗಳ ಹಾಡಲು ನಿಮ್ಮ ಪ್ರಣಯ ಸಾಹಸಗಳಿಗೆ,
ಹಾಗೆಯೇ ಪ್ರೇಮ ಕವಿತೆಗೆ.'

ಮತ್ತೊಮ್ಮೆ ಕಿಣಿಕಿಣೀ ಎಂದಿತು ಫೋನು
ಬೆಚ್ಚಿಬಿದ್ದೆ ಆ ಸದ್ದು ಕೇಳಿ.
ಫೋನೆತ್ತಿ, ಆಲಿಸಿ, ನನ್ನಾಕೆ ಅಂದಳು:
'ಮತ್ತದೇ ಮೂಳಿ, ಮನೆ ಹಾಳಿ'

'ಹಲೋ, ಮತ್ತೇನು?' ಎಂದೆ ಗೊಗ್ಗರು ದನಿಯಲ್ಲಿ
ಅಂದಳಾಕೆ: 'ತಪ್ಪಾಗಿದೆ, ಕ್ಷಮಿಸಿ,
ನಿಜವಾದ ಅಪರಾಧಿ ಸಿಕ್ಕಿಬಿದ್ದಿದ್ದಾನೆ;
ತಮ್ಮನ್ನು ಅಮಮಾನಿಸಿಬಿಟ್ಟೆ, ದುಡುಕಿ.

ದಯವಿಟ್ಟು ಒಮ್ಮೆ ತಮ್ಮ ಬಾಯಾರೆ ಹೇಳಿಬಿಡಿ,
ನನ್ನನ್ನು ಕ್ಷಮಿಸಿದ್ದೇನೆಂದು.
'ಆಯ್ತು, ತಾಯಿ' ನಾನೆಂದೆ, 'ತಾವೂನು ಹೇಳಿಬಿಡಿ,
ತಾವ್ಯಾರು, ಏನು ಹೆಸರೆಂದು.'

'ಅಯ್ಯೋ ಬಿಡಿ' ಎಂದಳಾಕೆ, 'ಅದನ್ನೆಲ್ಲ ಕಟ್ಟಿಕೊಂಡು
ಈಗ ಆಗಬೇಕಾದ್ದೇನಿದೆ?'
'ಹೌದು, ತಾಯಿ' ನಾನೆಂದೆ, 'ಸರಿಯಾಗಿ ಹೇಳಿದಿರಿ,
ಆಗಬೇಕಾದ್ದೆಲ್ಲ ಆಗಿದೆ.'

ಯುಗಾದಿಯ ಶುಭಾಶಯಗಳೊಂದಿಗೆ

ಸಾ.ನಾ. ಅನಂತ ಶ್ರೀನಿವಾಸ

With Best Compliments From:

ASHRYA CONSTRUCTIONS
(ENGINEERS & CONTRACTORS)

566, 43rd Cross, 8th Block
Jayanagar
Bangalore - 560 082

With Best Compliments From:

ADITYA ASSOCIATES

208, UPSTAIRS
5TH CROSS
SIDDAGANGA EXTENTION
TUMKUR

"GOSSIP" (SHIRTS OF TROUSERS)

Manufactured By : Novelty Dress MFG Co.,
29, Nagarath Pet, Bangalore - 560 002.
Tel: 2220156

Retailed At:
* Safina Plaza - Infantry Road
* I Cross - Gandhi nagar,
* Nettakallappa Circle - D.V.G. Road,
* 27th Cross Jayanagar, III Block
* 8th Cross, I Temple Road Malleswaram.
* I Block (Opp to Canara Bank) Rajajinagar

ಕ್ರಿಸ್‌ಮಸ್ ಮರದ ಕೆಳಗೆ ಬುದ್ಧ

– ನಂದಿನಿ ಕಾಪಡಿ

ಡಿಸೆಂಬರ್ ತಿಂಗಳ ಮೂರನೆಯ ವಾರ. ನ್ಯೂಯಾರ್ಕಿನ ಮ್ಯಾನ್‌ಹಾಟನ್‌ನಲ್ಲಿರುವ ರಾಕ್‌ಫೆಲರ್ ಸೆಂಟರ್‌ನಲ್ಲಿ ಮಾಮೂಲಿನಂತೆ ದೊಡ್ಡ ಕ್ರಿಸ್‌ಮರ ಸಜ್ಜಾಗಿ ನಿಂತಿತ್ತು. ಕೆಟ್ಟ ಛಳಿಯಿದ್ದರೂ, ಕೋಟು, ಟೋಪಿ, ಬೂಟುಗಳಿಂದ ಅಲಂಕೃತಗಳಾಗಿ ಮನೆ ಮಂದಿಯೊಡನೆ ನಾನೂ ಹೊರಟೆ ಕ್ರಿಸ್‌ಮಸ್ ಮರ ನೋಡಲು! ಬೇರೆ ಬೇರೆ ಇಂಗ್ಲೀಷ್ ಚಿತ್ರಗಳಲ್ಲಿ ಆ ಮರ ನೋಡಾಗಿತ್ತು. ನ್ಯೂಯಾರ್ಕಿನ ಟಿ.ವಿ.ಯಲ್ಲಂತೂ ಆ ಮರ ಕತ್ತರಿಸಿ ತಂದ ದೃಶ್ಯದಿಂದ ಹಿಡಿದು ಸಜ್ಜು ಮಾಡಿರುವುದನ್ನು ತೋರಿಸಿದ್ದರು. ನ್ಯುಯಾರ್ಕಿನ ಜನರಿಗೆ ಆ ಮರ ಅಮೂಲ್ಯ. ಅದರ ಕೆಳಗೆ ನಿಂತುಬಿಟ್ಟರೆ ಜೀವನ ಸಾರ್ಥಕವಂತೆ! ನಾನೂ ಈಗ ನ್ಯೂಯಾರ್ಕಿನವಳಾಗಿಬಿಟ್ಟಿದ್ದೇನಲ್ಲವೆ! ನನ್ನ ಜೀವನವೂ ಸಾರ್ಥಕವಾಗಲು ರಾಕಫೆಲರ್ ಸೆಂಟರಿನ ಕ್ರಿಸ್ ಮರಕ್ಕೆ ನಮಿಸಿ ಬಂದೇಬಿಡೋಣವೆಂಬ ಹುಮ್ಮಸ್ಸು ಸೇರಿ ಮಂಡಿ ನೋವುತ್ತಿದ್ದರೂ, ಬೇಗ ಬೇಗನೇ ನಡೆದೇ ಬಿಟ್ಟೆ!

ನಾಲ್ಕು ಬದಿಯಲ್ಲೂ ಗಗನ ಚುಂಬಿ ಕಟ್ಟಡಗಳ ನಡುವೆ ನಿಂತಿದ್ದ ಆ ದೊಡ್ಡ ಮರ ಕುಬ್ಜವಾಗಿಯೇ ಕಂಡಿತು. ಕೆಂಪು ಹಸುರು ದೀಪಗಳು ಮತ್ತು ಕೆಂಪು ರಿಬ್ಬನ್ನುಗಳಿಂದ ಸಜ್ಜಾಗಿದ್ದ ಆ ಮರ ನೋಡಿ ಸ್ವಲ್ಪವೂ ಮನ ಹುಚ್ಚೇರಲಿಲ್ಲ. ನಮ್ಮ ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್‌ನಲ್ಲಿ ಇದಕ್ಕಿಂತ ದೊಡ್ಡ ಮರ ನೋಡಿದ್ದರ ನೆನಪು ಮಸುಕಾಗಿ ಬರತೊಡಗಿತು! ಅಷ್ಟೇ ಅಲ್ಲ ನನ್ನ ಸರ್ವೀಸಿನ ಟ್ರೈನಿಂಗ್ ಅಕಾಡೆಮಿಯಿರುವ ಸಿಮ್ಲಾದಲ್ಲಿ ಇಂತಹ ಮರಗಳನ್ನು ಪ್ರತಿದಿನ ನೋಡುತ್ತಾ, ಅವುಗಳ ಸುತ್ತ ತಿರುಗುತ್ತಾ, ಹಾಡುತ್ತಿರುವ ಹಿಂದೀ ಸಿನಿಮಾ ನಟನಟಿಯರ ಶೂಟಿಂಗ್‌ನ ದೃಶ್ಯವೂ ಕಣ್ಣಮುಂದೆ ಬರುತ್ತಾ ಒಂದು ನಿಮಿಷ ನ್ಯೂಯಾರ್ಕನ್ನು ಮರೆತೇ ಬಿಟ್ಟೆ.

''ಕೀಪ್ ಮೂವಿಂಗ್ ಲೇಡಿ'' ಎಂದು ಕರ್ಕಶ ದನಿ ಬಂದಿತು! ಹಿಂದೆ ನೋಡಿದರೆ ಸುಂದರ ಸಮವಸ್ತ್ರ ಹಾಕಿಕೊಂಡು, ಟಿಪ್‌ಟಾಪಾಗಿ ನಿಂತ ನ್ಯೂಯಾರ್ಕ್ ಪೋಲೀಸ್ ಅಧಿಕಾರಿ, ನನ್ನ ಅಣ್ಣನ ನೆನಪು ಮಾಡಿಕೊಳ್ಳುತ್ತಾ ''ಹಾಯ್, ಹ್ಯಾಪಿ ಹಾಲಿಡೇಸ್'' ಎಂದೆ ನಗುತ್ತಾ! ಆತನೂ ಒಂದು ನಿಮಿಷ ಮುಖದಲ್ಲಿ ನಗೆ ಬರಿಸಿಕೊಂಡು ''ಯೂ, ಎನ್‌ಜಾಯಿಂಗ್ ದೇರ್'' ಅಂದ! ಈ ಅಮೇರಿಕಾದಲ್ಲಿ ಇಂಗ್ಲೀಷ್ ಭಾಷೆಗೆ ವ್ಯಾಕರಣವಿಲ್ಲ ನೋಡಿ. ನಮ್ಮ ತಾತ ತಲೆ ಚಚ್ಚಿಕೊಂಡು ನನಗೆ ಹೇಳಿಕೊಡುತ್ತಿದ್ದ ರೆನ್ ಎಂಡ್ ಮಾರ್ಟಿನ್ ವ್ಯಾಕರಣ ನನಗೆ ಇನ್ನೂ ಮರೆತಿಲ್ಲವಾದರೂ, ನಾನು ಸ್ಟೈಲಾಗಿಯೇ ''ಮೀ ಡೂಯಿಂಗ್ ಓಕೆ. ಬಾಯ್'' ಎಂದವಳೇ ಮುಂದೆ ಸರಿದು ಹೋದೆ. ಆತನೂ ನಕ್ಕು ಮುಂದೆ ಹೋದ.

ಕ್ರಿಸ್ ಮರದ ಸುತ್ತಲೂ ಹುಚ್ಚು ಗುಂಪು ಜನಗಳು, ಬಿಳಿಯರು, ಕರಿಯರು, ಕಂದು ಬಣ್ಣದವರು, ಇವುಗಳೆಲ್ಲದರ ಮಿಶ್ರಣದವರು ಒಟ್ಟಿಗೇ ಸೇರಿಬಿಟ್ಟಿದ್ದರು. ಅರ್ಥವಾಗದ ಭಾಷೆಗಳ ನಡುವೆ ಎಲ್ಲಿಂದಲೋ ''ಕ್ಯೋ, ಜೀ, ಠಹರಿಯೇ ಜೀ'' ಎಂಬ ಹಿಂದಿ ಭಾಷೆ ಕೇಳಿ ಬೇಗ ಬೇಗ ಹಿಂದೆ ನೋಡಿದೆ. ''ಪಾಪ ಮೊದಲನೇ ಸಲ ಇಲ್ಲಿಗೆ ಬಂದಿರಬೇಕು ಅವರ ಮುಖ ನೋಡಿದರೇನೆ ಗೊತ್ತಾಗುತ್ತದೆ'' ಎಂದು ಮಾತೃಭಾಷೆಯಾದ ಕನ್ನಡದ ಉದ್ಗಾರ ಕೇಳಿಬಂದಿತು. ನನ್ನ ಬಗ್ಗೆಯೇ ಮಾತನಾಡಿಕೊಂಡರೋ ಹೇಗೆ ಎಂಬ ಪ್ರಶ್ನೆಗೆ ಉತ್ತರ ದೊರೆಯುವ ಮೊದಲೇ ಆ ಧ್ವನಿ ಗುಂಪಿನೊಳಗೆ ಮಾಯವಾಗಿಬಿಟ್ಟಿತ್ತು!

ಎಲ್ಲರಿಗೂ ಕ್ರಿಸ್ ಮರದ ಹಿನ್ನೆಲೆಯಲ್ಲಿ ಚಿತ್ರ ತೆಗೆಸಿಕೊಳ್ಳುವ ಹುಚ್ಚು. ಸಾವಿರಾರು ಕ್ಯಾಮರಾಗಳಿಂದ ಒಂದಾದ ಮೇಲೊಂದು ಫ್ಲಾಷುಗಳನ್ನು ನೋಡುತ್ತಾ ನನಗೂ ನಮ್ಮೆಜಮಾನರ ಚಿತ್ರ ತೆಗೆದುಬಿಡುವ ಆಸೆಯಾಯಿತು. ''ರೀ ಒಂದು ನಿಮಿಷ ಈ ಕಡೆ ತಿರುಗಿ'' ಎನ್ನುತ್ತಾ ನನ್ನ ಕ್ಯಾಮರಾಕ್ಕೆ ಕೈ ಹಾಕಿದೆ. ''ಈ ದೊಂಬಿಯಲ್ಲಿ ಫೋಟೋ ತೆಗೆಯುವ ಚಲಪ ಬೇಡ'' ಎಂದು ಪತಿದೇವರು ಖಡಾಖಂಡಿತವಾಗಿ ಹೇಳಿಬಿಟ್ಟರೂ ನನ್ನ ಹಟವೇ ಗೆದ್ದಿತು. ಕ್ಯಾಮರಾ ಸರಿಯಾಗಿ ಹಿಡಿದುಕೊಂಡು ಫೋಕಸ್ ಮಾಡುವ ಮೊದಲೇ ಗುಂಪು ನನ್ನ ತಳ್ಳಿಬಿಟ್ಟು, ಅದೇ ಕ್ಷಣದಲ್ಲಿ ನನ್ನ ಕೈಯಿನ ಉಲ್ಲನ್ ಕೈಚೀಲ ಕೆಳಗೆ ಬಿದ್ದುಹೋಯಿತು! ಯಜಮಾನರು ಹಲ್ಲು ಕಡಿಯುತ್ತಲೇ ''ನಿನ್ನ ಕೈ ತಣ್ಣಗಾದರೂ ಪರವಾಗಿಲ್ಲ. ಈ ಗುಂಪಿನಲ್ಲಿ ಹುಡುಕಲು ಹೋಗಬೇಡ'' ಎಂದುಬಿಟ್ಟರು. ಪೆಚ್ಚಾಗಿಯೇ ಅವರ ಹಿಂದೆ ಹೋದೆ.

ಸ್ಕೇಟಿಂಗ್ ರಿಂಕಿನಲ್ಲಿ ದೊಡ್ಡವರು, ಮಕ್ಕಳು, ಮಧ್ಯದವರು ಮಂಜಿನ ಮೇಲೆ ಲೀಲಾ ಜಾಲವಾಗಿ ಸ್ಕೇಟ್ ಮಾಡುತ್ತಿದ್ದರು. ನಮಗೆ ಸ್ವಲ್ಪ ಜಾಗ ಸಿಕ್ಕಿ ನಾವು ಅಲ್ಲೇ ನಿಂತೆವು. ಒಂದು ಕಡೆ ಕ್ರಿಸ್‌ಮಸ್ ಮರ, ಅದರ ಸುತ್ತ ಜನಸ್ತೋಮ, ಎಲ್ಲೆಲ್ಲೂ ಬಣ್ಣ ಬಣ್ಣದ ದೀಪಗಳು, ಕೊರೆಯುವ ಛಳಿ ಬಾಯಿಂದ ಹೊಗೆಯಂತೆ ಬರುತ್ತಿರುವ ಬಿಸಿಯುಸಿರು. ಈ ಎಲ್ಲವೂ ನನ್ನನ್ನು ಬೇರೆ ಒಂದು ವಾತಾವರಣಕ್ಕೆ ಕರೆದೊಯ್ದವು. ನಾನು ನಿಂತಲ್ಲೇ ಕನಸು ಕಾಣತೊಡಗಿದೆ.

ಕನಸು ಏನು ಅಂತೀರಾ? ಈ ಕ್ರಿಸ್‌ಮರದ ಕೆಳಗೆ ಒಂದು ವೇಳೆ ನಮ್ಮ ಗೌತಮ ಬುದ್ಧ ಕೂತಿದ್ದರೆ, ಆತನಿಗೆ ಜ್ಞಾನೋದಯವಾಗುತ್ತಿತ್ತೆ? ಎಂಬ ಜಟಿಲ ಪ್ರಶ್ನೆ ನನ್ನನ್ನು ಬಾಧಿಸುತ್ತಿದೆ..... ದೊಡ್ಡ ತತ್ವ ಜ್ಞಾನಿಯಂತೆ ನಾನು ಆ ಪ್ರಶ್ನೆಯನ್ನು ಕುರಿತು ಆಲೋಚಿಸುತ್ತಿದ್ದೇನೆ..... ದೊಡ್ಡ ದೊಡ್ಡವರ ಜೊತೆ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ.... ನನ್ನ ಸಮಯವನ್ನೆಲ್ಲಾ ಈ ಆಲೋಚನೆಯಲ್ಲಿಯೇ ಉಪಯೋಗಿಸುತ್ತೇನೆ.... ಆಹಾ....ಇನ್ನೇನು ನನ್ನ ಪ್ರಶ್ನೆಗೆ ಉತ್ತರ ಹತ್ತಿರವಾಗುತ್ತಿದೆ.... ಅಷ್ಟರಲ್ಲಿ ಹಿಂದಿನಿಂದ ಮಹಿಳೆಯೊಬ್ಬಳು ತಳ್ಳಿಕೊಂಡು ಬರುತ್ತಿರುವ ಪ್ರಾಮಿನ ಚಕ್ರ ನನ್ನ ಕಾಲಿಗೆ ತಾಕಬೇಕೆ? ನನ್ನ ಸ್ವಪ್ನ ಭಂಗವಾಗಿ

ಹೋಯಿತು. ಆದರೆ ಪ್ರಶ್ನೆ ಮಾತ್ರ ಮರೆಯಲಿಲ್ಲ.....

ಕೈಚೀಲ ಕಳೆದುಕೊಂಡ ಕೈ ಕೊರೆದುಹೋಗುತ್ತಿತ್ತು! ನನ್ನ ಜ್ಯಾಕೆಟ್ಟಿನ ಜೋಬಿನೊಳಗೆ ಕೈ ತೂರಿಸಿ ಆಲೋಚನೆ ಮಾಡಲು ಪ್ರಾರಂಭಿಸಿದೆ. ನಮ್ಮ ದೇಶದಲ್ಲಾದರೆ ಇಂತಹ ಛಳಿಯ ವಾತಾವರಣದಲ್ಲಿ ಬಿಸಿ ಬಿಸಿ ಕಾಫಿಯೋ, ಚಾಯೋ, ಈರುಳ್ಳಿ ಪಕೋಡಾದೊಂದಿಗೆ ಸಿಗುತ್ತಿದ್ದವು! ಇಲ್ಲೋ ಒಂದು ಕಾಫಿಯ ಅಂಗಡಿಯೂ ಕಾಣುತ್ತಿಲ್ಲ. ಬಿಸಿ ಕಾಫಿ ಕುಡಿದಿದ್ದರೆ ನನ್ನ ಪ್ರಶ್ನೆಗೆ ಉತ್ತರ ಸಿಗುತ್ತಿತ್ತು ಎಂದೆನಿಸಿತು.

ನಿಧಾನವಾಗಿ ನನ್ನ ದೃಷ್ಟಿ ಮತ್ತೆ ಕ್ರಿಸ್‌ಮಸ್ ಮರದ ಹತ್ತಿರ ಹೋಯಿತು. ಯುವಕ ಯುವತಿ ಜೋಡಿ ಕ್ರಿಸ್ ಮರದ ಎದುರಿಗೇ ಒಬ್ಬರನ್ನೊಬ್ಬರು ಚುಂಬಿಸುತ್ತಿದ್ದರು. ಹತ್ತು ನಿಮಿಷಗಳಾದರು ಇಬ್ಬರಿಗೂ ಪರಿಸರದ ಅರಿವಾಗಿರಲಿಲ್ಲ. ಪರಿಸರದ ಜನರಿಗೂ ಇವರ ಬಗ್ಗೆ ಕಾಳಜಿಯಿರಲಿಲ್ಲ! ಈ ಜೋಡಿ ಕ್ರಿಸ್‌ಮಸ್ ಹಬ್ಬವಾಗಿ ಹೊಸವರ್ಷ ಬರುವ ಹೊತ್ತಿಗೆ ಮದುವೆಯಾಗಬಹುದೆ? ಮುಂದಿನ ಕ್ರಿಸ್‌ಮಸ್ ಹೊತ್ತಿಗೆ ತಮ್ಮ ಸಂತಾನವನ್ನು ಪ್ರಾಮಿನಲ್ಲಿ ತಳ್ಳುತ್ತಾ ಇಲ್ಲಿಗೆ ಬಂದು ಈ ಮಧುರ ಕ್ಷಣದ ನೆನಪು ಮಾಡಿಕೊಳ್ಳುವರೆ? ಅಥವಾ ಈತ, ಈಕೆ, ಬೇರೆಯಾಗಿಬಿಟ್ಟಿರಬಹುದೆ? ಹೀಗೆ ಏನೇನೋ ಪ್ರಶ್ನೆಗಳು ಹೊಳೆದು ಹೋದವು.

ಇತ್ತ ಸ್ಕೇಟಿಂಗ್ ರಿಂಕಿನಲ್ಲಿ ಯುವತಿಯೊಬ್ಬಳು ಸ್ಟೈಲಾಗಿ ಒಲಂಪಿಕ್ ಮಾದರಿ ಒಂದು ಸುತ್ತು ತಿರುಗುವಾಗ ಜಾರಿ ಬಿದ್ದುಬಿಟ್ಟಳು. ಈ ಬೀಳುವಿಕೆಯಿಂದ ಅವಳ ಆಸೆಗಳು ಕಮರಿ ಹೋಗುವವೆ? ಅಥವಾ ಆಕೆ ನಿಜವಾಗಿಯೂ ಒಲಂಪಿಕ್‌ನಲ್ಲಿ ಸುವರ್ಣ ಪದಕ ತೆಗೆದುಕೊಳ್ಳುವಳೆ? ಪ್ರಶ್ನೆಗಳು..... ಪ್ರಶ್ನೆಗಳು.

''ನಮ್ಮ ದೇಶದಲ್ಲಿ ಇಂತಹ ವ್ಯರ್ಥ ಕಾರ್ಯಗಳಿಗೆ ಮನ್ನಣೆಯಿಲ್ಲ. ನಮ್ಮ ದೇಶದಲ್ಲಿ ಜನತೆಯೇ ದೊಡ್ಡದು. ಕಾಮ್ರೇಡ್, ನಿಮ್ಮದು ಬಂಡವಾಳಶಾಹಿ ದೇಶ'' ಎಂದು ಚಿಕ್ಕ ಕಣ್ಣಿನ ಯುವಕನೊಬ್ಬನು, ಬಿಳಿಯನೊಬ್ಬನಿಗೆ ಹೇಳುತ್ತಿದ್ದ! ರಷಿಯಾದಂತಹ ಮಹಾನ್ ದೇಶವೇ ಚೂರು ಚೂರಾಗಿ ಹೋಯಿತಲ್ಲವೆ? ಎಲ್ಲಿಯ ಬಂಡವಾಳಶಾಹಿ? ಎಲ್ಲಿಯ ಆಡಳಿತ ಶಾಹಿ? ಎಲ್ಲಿಯ ಜನತಾಶಾಹಿ? ಯಾವುದು ಸತ್ಯ? ಯಾವುದು ನಿತ್ಯ? ಯಾವುದು ಮಿಥ್ಯ? ಪ್ರಶ್ನೆಗಳು.... ಪ್ರಶ್ನೆಗಳು!

ನನ್ನ ಚಿಕ್ಕ ಮಗಳಿಗೆ ಹಸಿವಾಗಿ ಹೋಗಿತ್ತು. ಇಲ್ಲಿ ಸಿಗುವ ತಿಂಡಿ ಪ್ರೆಟ್‌ಜೆಲ್ ನೋಡಿ ನಮ್ಮ ದೇಶದ ಜಾತ್ರೆಗಳಲ್ಲಿ ಸಿಗುವ ಮೆಣಸಿನಕಾಯಿ ಬೋಂಡಾ, ಪಾಕಂಪೊಪ್ಪು, ಎಳ್ಳುಂಡೆಗಳ ಜ್ಞಾಪಕ ಬಂದಿತು. ಆದರೆ ಇಲ್ಲಿರುವಾಗ ಇಲ್ಲಿನವರ ತರಹವೇ ಇರಬೇಕಲ್ಲವೆ! ಕೆಟ್ಟಮುಖದ ಪ್ರೆಟ್‌ಜೆಲ್ ತಿನ್ನುತ್ತಾ, ಕೋಕ್ ಕುಡಿಯುತ್ತಾ, ಸಬ್‌ವೇ ಸ್ಟೇಷನ್ನಿನ ಹತ್ತಿರ ಬರುವಾಗ ಇದ್ದಕ್ಕಿದ್ದಂತೆ ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿಬಿಟ್ಟಿತು!

ಕ್ರಿಸ್‌ಮರದ ಕೆಳಗೆ ಬುದ್ಧನಿಗೆ ಖಂಡಿತ ಜ್ಞಾನೋದಯವಾಗುತ್ತಿರಲಿಲ್ಲ. ಏಕೆ

ಗೊತ್ತೆ? ಇಷ್ಟೆಲ್ಲಾ ಜನಸ್ತೋಮ, ಅವರ ವೃತ್ತಿಗಳು, ಅವರ ವರ್ತನೆಗಳನ್ನು ನೋಡುತ್ತಿದ್ದರೆ ಬುದ್ಧನ ವಿಚಾರಗಳೆಲ್ಲಾ ಕಲಸು ಮೇಲೋಗರವಾಗಿ ಹೋಗುತ್ತಿದ್ದವು! ಕಡೆಗೆ ಅವನು ಬೇಸತ್ತು ನನ್ನಂತೆಯೇ ತನ್ನ ವಿಚಾರಗಳನ್ನು ಬಿಟ್ಟುಬಿಟ್ಟು ತೆಪ್ಪಗೆ ತಾನೂ ಗುಂಪಿನಲ್ಲೊಂದಾಗಿಬಿಡುತ್ತಿದ್ದ. ಅಂತರ ರಾಷ್ಟ್ರೀಯ ಜನಸ್ತೋಮದಲ್ಲಿ ತಾನೂ ಒಬ್ಬನಾಗಿಬಿಟ್ಟು ತಲೆಯಲ್ಲಿರುವ ವಿಚಾರಗಳನ್ನು ಕ್ರಿಸ್‌ಮರ ತಿರುಗಿಸುವ ಮುನ್ನವೇ ತಾನೇ ಮರೆತುಬಿಡುತ್ತಿದ್ದ!

ಸದ್ಯ! ಇಂತಹ ಸಜ್ಜಾದ ಮರ ನಮ್ಮ ದೇಶದಲ್ಲಿ ಇಲ್ಲದಿರುವುದೇ ಮೇಲು! ಬೋಧಿ ವೃಕ್ಷದ ಸರಳತೆಯಿಂದಲೇ ತಾನೇ ಬುದ್ಧನ ವಿಚಾರಗಳು ಜ್ಞಾನೋದಯದತ್ತ ಹರಿದದ್ದು!

ಮಾರನೇ ದಿನ ಯಜಮಾನರೊಂದಿಗೆ ನ್ಯೂಯಾರ್ಕಿನ ಮೆಟ್ರೋಪಾಲಿಟನ್ ಮ್ಯೂಸಿಯಂ ನೋಡಲು ಹೋದಾಗ ಅಲ್ಲಿ ಬುದ್ಧನ ಪ್ರತಿಮೆ ಕಾಣಿಸಿತು. ಬೋಧಿ ವೃಕ್ಷದ ಕಾಂಡವೂ, ಕೊಂಬೆಗಳೂ, ಎಲೆಗಳೂ ಕಾಣಿಸಿಬಿಟ್ಟವು! ಸದ್ಯ ನಮ್ಮ ದೇಶದ ಈ ಹೆಚ್ಚುಗಾರಿಕೆ ಚರಿತ್ರೆಯಲ್ಲಾದರೂ ಇದೆಯಲ್ಲ ಎಂದು ಸಂತೋಷಪಟ್ಟುಕೊಂಡೆ.



ಜೈಲಿಂದ ಆಚೆ ಬಂದ್ಮೇಲೆ ನನಗೆ ಓಟು ಹಾಕೋಹಾಗಿದ್ರೆ, ನೀ ಹೇಳೋ ಕೆಲ್ಸ ಎಲ್ಲಾ ಮಾಡ್ತೀನಿ ಅಂತಾನಲ್ಲ ಆವಯ್ಯ

With Best Compliments From:

Sands Preeision (P) Ltd.

Bangalore

'ಸುಹಾಸಂ' ಪ್ರಕಟಣೆಗಳು

1.	ಮುಗಳು - ಭುವನೇಶ್ವರಿ ಹೆಗಡೆ	-	ರೂ.35
2.	ಮಾಸ್ಟರ್ ಪೈಂಟರ್ - ಕೆ.ಪ್ರಭಾಕರರಾವ್	-	ರೂ.35
3.	ಹತ್ತು ಕಥೆಗಳು - ಕು.ಗೋ.	-	ರೂ.30
4.	ಮಕ್ಕಳಾಟವಯ್ಯ - ಲೀಲಾ ಶೇಖರ್	-	ರೂ.40

ಕೊಂಡು ಓದಬೇಕಾದ ಹಾಸ್ಯ ಪುಸ್ತಕಗಳು ದಯವಿಟ್ಟು ಸಂಪರ್ಕಿಸಿ:

ಎಚ್. ಗೋಪಾಲಭಟ್ಟ (ಕು.ಗೋ.)

'ವಾಗ್ದೇವಿ' ಹಯಗ್ರೀವ್ ನಗರ

ಉಡುಪಿ - 579 102

ದೂರವಾಣಿ: 71509

With Best Compliments From:

SVR AGENCIES

No.2, 3rd Cross, Kalasipalyam New Extn.,
BANGALORE - 560 002.

Grams: "EQUIPMENTS"
Tel: 2221778 / 2222301 (pp)

DISTRIBUTORS FOR:

ASPEE Sprayers and
Dusters for Agriculture
& Horticulture

CONSIGNMENT AGENTS FOR:

Cenka Plastics
(Division of Century
Enka Limited, Poona)

for Thermoplastic Polyester
Granules CENKITE, Polyamide
6 Granule CENKALON.

ಚಾಂದ್ ಬೀಬಿ

- ನಾಗೂಶ್ರೀ ಸೂರಿ

ಕುರಿಯಾಕೋಸ್ ನನ್ನನ್ನು ಹದಿನೆಂಟನೆ ಕ್ರಾಸ್ ಹತ್ತಿರ ಡ್ರಾಪ್ ಮಾಡಿ ಹೋದಾಗ ಪುಣ್ಯಕ್ಕೆ ಗಾಂಧೀ ಬಜಾರಿಗೆ ಹೋಗೋ ಬಸ್ಸು ಇನ್ನೂ ಅಲ್ಲೇ ಇತ್ತು. ಬೇಗ ಬೇಗ ಕಾಲು ಹಾಕಿಕೊಂಡು ಹೋಗಿ ಹತ್ತಿಕೊಂಡೆ.

ಅವನ ಫ್ಯಾಕ್ಟರೀನಲ್ಲಿ ಯಾವುದೋ ಮೆಷಿನದ್ದು ರಿಪೇರಿಗೆ ಅಂತ ಹೋದೋನು ಅದು ಮುಗಿಯೋ ಹೊತ್ತಿಗೆ ಸುಸ್ತು ಹೊಡೆದು ಹೋಗಿದ್ದೆ. ಒಂದು ಕಡೆ ಕೂತ್ಕೊಂಡ ಹೊರತೂ ಸಾಧ್ಯವಿಲ್ಲ ಅನ್ನೋ ಹಾಗಾಗಿತ್ತು. ಆದ್ರೆ ಬಸ್ಸಿನಲ್ಲಿ ಕೂತ್ಕೊಳ್ಳಕ್ಕೆ ಖಾಲಿ ಇದ್ದ ಜಾಗ ಅಂದ್ರೆ ಹೆಂಗಸರಿಗೇ ಅಂತ ಹೊಸದಾಗಿ ಮಾಡಿದ್ದಾರಲ್ಲ, ಅಂಥಾ ಕಡೇ ಕೊನೇ ಸೀಟ್ನಲ್ಲಿ. ಒಂದು ಚಿಕ್ಕ ಹುಡುಗಿ-ಹೈಸ್ಕೂಲ್ ಓದೋಳು ಅಂತ ಕಾಣುತ್ತೆ - ಅವಳು ಕೂತಿದ್ಲು. ಅವಳ ಪಕ್ಕ ಹೋಗಿ ಜಾಗ ಮಾಡಿಕೊಂಡು ಕೂತೆ.

ಬಸ್ಸುಗಳಲ್ಲಿ ಹೆಂಗಸರಿಗೇ ಅಂತ ಈ ಜಾಗ ಮಾಡಿರತಾರೆ ನೋಡಿ, ಅಲ್ಲಿ ಯಾವತ್ತೂ ನಾನು ಕೂತೋನೆ ಅಲ್ಲ. ಇದುವರೆಗೆ ಈ ತನಕ ಅಲ್ಲಿ ಕೂತ್ಕೊಂಡಿದ್ದ ಒಬ್ಬ ಗಂಡಸನ್ನೂ ಅಲ್ಲಿಂದ ಎಬ್ಬಿಸಿ ಬೇರೆ ಕಡೆ ಕಳಿಸಿರೋದು ನಾನು ನೋಡೇ ಇಲ್ಲ. ಆದರೂ ಒಂದು ಥರ ಭಯ There is always a first time ಅನ್ನೋ ಥರಾ, ಅದು ನನ್ನಿಂದಲೇ ಶುರೂ ಆದ್ರೆ ಎಲ್ಲಿ ಹೋಗೋದು?

ಆದರೆ ಅವತ್ತು ಮಾತ್ರ, ಇಲ್ಲೇ ಕೂತಿರತೇನೆ ಎಬ್ಬಿಸಿದರೆ ಏಳೋದು, ಇಲ್ಲಾ ಅಂತಂದ್ರೆ, ಎಷ್ಟು ದೂರ ಕೂತ್ಕೊಂಡು ಹೋಗಕ್ಕೆ ಸಾಧ್ಯಾನೋ ಅಷ್ಟೇ ಲಾಭ ಅಂತ ಮನಸ್ಸು ಗಟ್ಟಿ ಮಾಡಿಕೊಂಡಿದ್ದೆ, ಆದರೂ ಯಾವುದಕ್ಕೂ ಇರಲಿ ಅಂತ ತುಂಬಾ ಸುಸ್ತು ಆಗಿ ನಿದ್ರೆ ಮಾಡತಿರೋನ ಥರ ಕಣ್ಣು ಮುಚ್ಚಿಕೊಂಡು ಕೂತಿದ್ದೆ.

ಬಸ್ಸು ಮಲ್ಲೇಶ್ವರಕ್ಕೆ ಬಂದಾಗ ಒಂದಷ್ಟು ಜನ ಹತ್ತಿಕೊಂಡ್ರು. ಅವರಲ್ಲಿ ನಾಕೈದು ಜನ ಹೆಂಗಸರೂ ಇದ್ರು, ಅಂತ ಕಾಣತ್ತೆ.

''ಲೇಡೀಸ್ ಸೀಟ್ನಲ್ಲಿ ಯಾವನೋ ಮುದುಕ ಕೂತಿದ್ದಾನೆ. ಎಬ್ಬಿಸೋಣವೇನೆ?''

''ಹೋಗಲೀ ಬಿಡೇ ಪಾಪ - ತಾತ ತುಂಬಾ ಸುಸ್ತಾದ ಥರಾ ಕಾಣಿಸತಾನೆ.''

ಮುದುಕ? ತಾತ?? ಅಲ್ಲೆ ಎದ್ದು ಅವರಿಗೆ ಎರಡು ತದಕಲೇ ಅನ್ನಿಸಿತು. ಆದ್ರೆ ಹಾಗೇನಾದ್ರೂ ಮಾಡಿದೆ ಅಂದ್ರೆ ಕೆಲಸ ಕೆಟ್ಟ ಹಾಗೇನೆ. ಅಂಥಾ ದುರ್ಯೋಧನನೇ ಏನೇನೋ ಕೆಟ್ಟ ಮಾತು ಕೇಳತಾ ಇದ್ರೂ ವೈಶಂಪಾಯನದಿಂದ ಏಳಲಿಲ್ಲ ಇನ್ನು ನನ್ನದೇನು ಮಹಾ?

ಸ್ವಾಸ್ತಿಕ್ ಹತ್ತಿರ ಬಂದಾಗ ಬಹಳ ಜನ ಹತ್ತಿಕೊಂಡರು. ಅಲ್ಲೇ ಹತ್ತಿರದ ಮದುವೆ ಛತ್ರದಿಂದ ಬಂದಿದ್ದವರು ಅಂತ ಕಾಣುತ್ತೆ. ಅಷ್ಟು ದೂರಕ್ಕೇ ಬರತಾ ಇದ್ದ ಘಮಗು ವಾಸನೆ ನೋಡಿದರೆ ತುಂಬಾ ಜನಾನೆ ಹೆಂಗಸರು ಇದ್ದ ಹಾಗಿತ್ತು. ಹ್ಯಾಗಿದ್ದಾರೋ ಕಣ್ಣು ಬಿಟ್ಟು ನೋಡಲೆ ಅನ್ನಿಸಿದ್ರೂ, ಕ್ಷಣಕಾಲದ ಚಪಲಕ್ಕೆ ಬಿದ್ದು, ಸೀಟು ಹೋದ್ರೆ ಆಮೇಲೆ? ಅಂತ ಅನಿಸಿ ಸುಮ್ಮನಾದೆ.

''ರೀ ಕಂಡಕ್ಟರ್ ಇಲ್ಲಿ ಗಂಡಸ್ರು ಲೇಡೀಸ್ ಸೀಟ್ನಲ್ಲಿ ನಿದ್ರೆ ಮಾಡ್ತಾ ಕೂತಿದ್ದಾರೆ. ಎಬ್ಬಿಸಿ ಅವರನ್ನ ದೂರ ಕಳಿಸಿ'' ಯಾವುದೋ ಹೆಣ್ಣು ಧ್ವನಿ.

''ಹೋಗಲಿ ಬಿಡಿ ಮೇಡಂ. ಪಾಪ, ವಯಸ್ಸಾದವರು, ಸುಸ್ತಾಗಿ ಇದ್ದ ಹಾಗೆ ಕಾಣತ್ತೆ''

''ವಯಸ್ಸಾಗಿದೆ, ಸುಸ್ತಾಗಿದೆ ಅನ್ನೋ ಥರಾ ಇದ್ರೆ ಅವರನ್ನ ಆ್ಯಂಬುಲೆನ್ಸ್‌ನಲ್ಲಿ ಕಳಿಸಿ ಅದಕ್ಕೆ ಜಾಗ ಸಿಟೀ ಬಸ್ಸಿನಲ್ಲಲ್ಲ... ರೀ ಡ್ರೈವರ್, ಪೋಲೀಸ್ ಸ್ಟೇಷನ್ನಿಗೆ ತಗೊಂಡು ಹೋಗ್ರೀ ಗಾಡೀನ್ನ - ಒಳ್ಳೆ ಮಾತಿಗೆ ಜನ ಬಗ್ಗೊಲ್ಲ''

ಪೋಲೀಸ್ ಸ್ಟೇಷನ್ನು? ಅಯ್ಯೋ ರಾಮನೆ! ಯಾರಿಗೆ ಬೇಕಪ್ಪ ಆ ರಾಮಾಯಣ? ಸುಸ್ತೋ ಗಿಸ್ತೋ ಎದ್ದು ನಿಂತರಾಯಿತು ಅಂತ ಕಣ್ಣು ಬಿಟ್ಟು ನೋಡಿದ್ರೆ, ಆ ರೋಫುದಾರಿ ಹೆಂಗಸು ಯಾರು ಅಂತೀರ

ಚಾಂದ್ ಬೀಬಿ!..... ಅದರಲ್ಲಿ ಅನುಮಾನಾನೇ ಇಲ್ಲ. ನಾನು ಅವಳನ್ನ ಕಡೇ ಸಲ ನೋಡಿದ್ದು ಅಂದ್ರೆ, ನಾನು, ಲೋವರ್ ಸೆಕೆಂಡ್ರಿ ಪಾಸು ಮಾಡಿ ಹೈಸ್ಕೂಲಿಗೆ ಸೇರಿಕೋತಾ ಇದ್ದ ಕಾಲದಲ್ಲಿ... ಆದರೆ ನಲವತ್ತು ವರ್ಷದ ಕೆಳಗೆ - ಆದ್ರೆ ಅವಳನ್ನ ಮರೆಯೊಕ್ಕೆ ನನ್ನ ಕೈನಲ್ಲಿ ಇನ್ನು ನಾಕು ಜನ್ಮ ಬಂದರೂ ಸಾಧ್ಯ ಇಲ್ಲ.

ಚಾಂದ್ ಬೀಬಿ ಅಂತಂದ್ರೆ, ಅವಳು ಮುಸಲ್ಮಾನರ ಹೆಂಗಸರು ಅಂದುಕೋಬೇಡಿ. ಅವಳ ನಿಜವಾದ ಹೆಸರು ರಾಜಲಕ್ಷ್ಮೀ ಅಂತ - ನಮ್ಮ ಸ್ಕೂಲಿನ ಹೈಸ್ಕೂಲ್ ಸೆಕ್ಷನ್‌ನಲ್ಲಿ ಸಂಸ್ಕೃತ ಪಂಡಿತರಾಗಿ ಕೆಲಸ ಮಾಡ್ತಾ ಇದ್ರಲ್ಲ ತಿರುನಾರಾಯಣ ಅಯ್ಯಂಗಾರ್, ಅವರ ಮಗಳು.

ನಾವುಗಳು ಆರನೆ ಕ್ಲಾಸ್ ಪಾಸ್ ಮಾಡಿ ಏಳನೆ ಕ್ಲಾಸಿಗೆ ಬರೋ ಹೊತ್ತಿಗೆ ಅವಳು ಅಲ್ಲಿ ನಮಗೆ ಕಾಯತಾ ಕೂತಿದ್ಲು - ಪರೀಕ್ಷೇಲಿ ಫೇಲ್ ಆಗಿ.

ಅವಳು ವಯಸ್ಸಿನಲ್ಲಿ ದೊಡ್ಡೋಳು ಅಂತಲೋ ಇಲ್ಲ ಮೇಷ್ಟ್ರ ಮಗಳೂ ಅಂತಲೋ ಏನೋ ಅವಳನ್ನ ನಮಗೆ ಮಾನೀಟರ್ ಮಾಡಿ ಕೂಡಿಸಿದ್ರು ನಮ್ಮ ಕ್ಲಾಸ್ ಟೀಚರ್. ಬಲೇ ಘಟವಾಣಿ - ನಾವು ಕ್ಲಾಸಲ್ಲಿ ಕಿಮಕ್ ಅನ್ನೋಕೆ ಆಗ್ತಾ ಇರಲಿಲ್ಲ. ಸ್ವಲ್ಪ ಬಾಲಾ ಬಿಚ್ಚಿದ್ರೆ ಸಾಕು, ಮೇಷ್ಟ್ರ ಕೈಲಿ ಒದೇ ತಿಂದುಕೊಂಡು ಬೆಂಚಿನ ಮೇಲೆ ನಿಂತಿರೋ ಥರಾ ಮಾಡೋಳು.

ಒಂದು ದಿನ ಮೇಷ್ಟ್ರು ಚರಿತ್ರೆ ಪಾಠ ಮಾಡೋ ಕಾಲಕ್ಕೆ ನಮಗೆ ಪ್ರಶ್ನೆ ಕೇಳಿದ್ರು

''ಚಾಂದ್ ಬೀಬಿ ಯಾರು - ಗೊತ್ತೇನ್ರೋ?''

ಚಾಂದ್ ಬೀಬಿ ಅನ್ನೋಳು ಬಹುಮನಿ ರಾಜ್ಯದವಳೋ ಅಥವಾ ಗುಲಾಮಿ ಸಂತತಿಯವಳೋ ಅಂತ ಯಾರಿಗೂ ಸರಿಯಾಗಿ ತಿಳಿದಿರಲಿಲ್ಲ. ಹಾಗಾಗಿ ಯಾರೂ ಉತ್ತರ ಹೇಳಲಿಲ್ಲ.

ನಾನು ಇರಲಾರದೆ ಪಕ್ಕದಲ್ಲಿ ಕೂತಿದ್ನಲ್ಲ ಆನಂದರಾಮ ಅವನಿಗೆ ಮೆಲ್ಲಗೆ ಹೇಳಿದೆ -

''ನಮ್ಮ ಲೆಕ್ಕದಲ್ಲಿ ನಮಗೆ ಈ ರಾಜಲಕ್ಷ್ಮೀನೆ ಅಲ್ಲವೇನೋ ಚಾಂದ್ ಬೀಬಿ? ಅವಳ ಹಾಗೆ ಇವಳದೂ ದರ್ಪ ಜಾಸ್ತಿ.''

ಅದು ಹ್ಯಾಗೋ ಮೇಷ್ಟರಿಗೂ ಕೇಳಿಸಿಬಿಟ್ಟು, ರಾಜಲಕ್ಷ್ಮೀಗೂ ಕೇಳಿಸಿಬಿಟ್ಟು. ತಗೊಳ್ಳಿ ಮೇಷ್ಟ್ರ ಕೈಯಲ್ಲಿ ಒಂದು ನಾಕು, ಆ ರಾಜಲಕ್ಷ್ಮೀ ಕೈನಲ್ಲಿ ಒಂದು ಅಂತ ಕೆನ್ನೆಗೆ ಐದು ಏಟು ತಿಂದುಕೊಂಡು ಬೆಂಚಿನ ಮೇಲೆ ನಿಂತದ್ದಾಯಿತು, ಅವತ್ತೆಲ್ಲ.

ಅದೇ ಮೊದಲು ಅದೇ ಕೊನೇದು ನೋಡಿ, ನಾನು ಯಾವಾದಾದ್ರು ಹೆಂಗಸಿನ ಕೈನಲ್ಲಿ ಒದೇ ತಿಂದದ್ದು - ಆಮೇಲೆ ಮದುವೆಗೆ ಮುಂಚೇನೂ ಇಲ್ಲ, ಮದುವೆ ಆದ ಮೇಲೂ ಇಲ್ಲ. ಹಾಗಾಗಿ ನಾನು ಹೇಳಿದ್ದು ನಾನು ಆ ರಾಜಲಕ್ಷ್ಮೀನ ಜನ್ಮಕ್ಕೂ ಮರೆಯೊಕ್ಕೆ ಆಗೊಲ್ಲ ಅಂತ - ಬೇರೆ ಇನ್ಯಾವುದಕ್ಕೂ ಅಲ್ಲ.

ಅವತ್ತು ನನ್ನನ್ನ ಬೆಂಚಿನ ಮೇಲೆ ನಿಲ್ಲಿಸಿದ್ದ ಆಕೆ ಈವತ್ತಿನ ದಿನ ಬಸ್ಸಿನಲ್ಲಿ ನಿಂತುಕೊಂಡಿರೂ ಥರಾ ಮಾಡ್ತಾ ಇದ್ದಾಳೆ, ಹುಂ ವಿಧಿಯಿಲ್ಲ ಏಳಲೇಬೇಕು.

ಆದ್ರೆ ಹೋರಾಡೊಕ್ಕೆ ಮೊದಲೆ ಸೋಲು ಒಪ್ಪಿಕೊಳ್ಳೋದು ಯಾಕೆ?

''ಆಯಿತು ಮೇಡಂ, ಹೆಂಗಸರ ಸೀಟಿನಲ್ಲಿ ಕೂತಿದ್ದೆ. ನೀವು ಹೇಳೋ ಥರ ಎದ್ದು ಹೋಗಬೇಕು. ಆದ್ರೆ ಒಂದು, ಆ ಡ್ರೈವರ್ ಸೀಟ್ ಹತ್ತಿರ ಏನು ಬರೆದಿದ್ದಾರೆ, ಸ್ವಲ್ಪ ಓದ್ತೀರಾ?''

''ಏನು ಬರೆದಿದ್ದಾರೆ.....?'' ಪಾಪ ಸೋಡಾ ಗ್ಲಾಸ್ ಕನ್ನಡಕ ಅವಳಿಗೆ.

''ಹೆಂಗಸರಿಗೆ, ವೃದ್ಧರಿಗೆ ಅಂಗವಿಕಲರಿಗೆ ಸ್ಥಳಾವಕಾಶ ಮಾಡಿಕೊಡಿ ಅಂತ ವಿನಂತಿ ಮಾಡಿದ್ದಾರೆ. ನನಗೆ ಮೊನ್ನೆ ಅರವತ್ತು ವರ್ಷಕ್ಕೆ ರಿಟೈರ್ ಆಗಿದೆ. ಹಾಗಾಗಿ ನಾನು ವೃದ್ಧ ಅಂತ ಆಯಿತು. ಅಂದರೆ ನನಗೆ ಕೂತ್ಕೊಳ್ಳೊ ಅಧಿಕಾರ ಇದೆ ಅಂತ ಆಯ್ತು. ಆದ್ರೆ ನಿಮಗೆ ನನಗಿಂತ ವಯಸ್ಸಾಗಿದ್ರೆ... ಅದು ಬೇರೆ ಮಾತು''

ಚಾಂದ್ ಬೀಬಿ ಒಂದು ನಿಮಿಷ ಸ್ವಲ್ಪ ಗಲಿಬಿಲಿ ಆದ ಹಾಗೆ ಕಂಡಳು. ಆದರೆ ಅದು ಒಂದು ನಿಮಿಷ ಮಾತ್ರ.

""I am so sorry uncle - ನೀವು ಏಳಬೇಡಿ ಕೂತ್ಕೊಳ್ಳಿ ಪರವಾ ಇಲ್ಲ. ನಿಮ್ಮ ಪರ್ಸನಾಲಿಟಿ ನೋಡಿದ್ರೆ ನೀವು ವಯಸ್ಸಾದವರಂತೆ ಕಾಣಿಸತಾ ಇರಲಿಲ್ಲ. ಅದಕ್ಕೇ...''

''ಆಯ್ತು ಬಿಡೀ ಮೇಡಂ. ಎಲ್ಲಾರೂ ತಪ್ಪು ಮಾಡೋರೆ... ನಾನೂ ನೋಡಿ, - ನಿಮ್ಮ grey hairs ನೋಡಿ ನೀವು ನನಗಿಂತ ದೊಡ್ಡವರೂ ಅಂದುಕೊಂಡಿದ್ದೆ....''

''ಅದೂ... ಅದು ನಾನು ಕಾಲೇಜ್ನಲ್ಲಿ ಕೆಮಿಸ್ಟ್ರಿ ಪ್ರಾಕ್ಟಿಕಲ್ ಮಾಡ್ತಾ ಇರೋವಾಗ ಕ್ಲೋರೀನ್ ಗ್ಯಾಸು ಲೀಕಾಗಿ ಕೂದಲೆಲ್ಲ ಬೆಳ್ಳಗಾಗಿ ಹೋಯ್ತು. ಏನು ಮಾಡಿದ್ರೂ ಹಾಳಾದ್ದು ಸರಿ ಹೋಗ್ತಾ ಇಲ್ಲ.''

ಕ್ಲೋರೀನ್ ಗ್ಯಾಸೇ? ಪಾಪ... ಆದ್ರೆ ಅದು ನಿನ್ನ ಮುಖದ ಬಣ್ಣಕ್ಕೆ ಏನೂ ಮಾಡಲಿಲ್ಲವೇ?

ಬಸ್ಸು ಹೋಗತಾ ಇರುವಾಗ ಚಾಂದ್ ಬೀಬಿ ಸ್ವಲ್ಪ ಹೊತ್ತು ಏನೂ ಬೇರೆ ಮಾತಾಡಲಿಲ್ಲ. ಆದರೆ ಐದು ನಿಮಿಷ ಆದಮೇಲೆ ಬಾಯಿ ತೆಗೆದಳು.

''ಅಂಕಲ್ ನೀವು ಹಿಂದಿನ ಕಾಲದವರೇ ವಾಸಿ. ಈ ವಯಸ್ಸಲ್ಲೂ ಎಷ್ಟು ಗಟ್ಟಿಯಾಗಿದ್ದೀರಿ! ನಿಮ್ಮ ವಯಸ್ಸಿಗೆ ಬರೋ ಹೊತ್ತಿಗೆ ನಾವು ಹ್ಯಾಗಿರತೇವೊ ಏನೋ?''

ಯಾಕೆ? ಮೂರು ವರ್ಷದ ಹಿಂದೇನೆ ನನ್ನ ವಯಸ್ಸಿಗೆ ಬಂದಿರಲಿಲ್ಲವೇ ನೀನು? ಆವಾಗ ಹ್ಯಾಗಿದ್ದೀ? ಅದು ಆಗಲೆ ಮರೆತು ಹೋಯಿತೇ?

ಮತ್ತೆ ಮತ್ತೆ Journey ಉದ್ದಕ್ಕೂ ಅವಳು ಆವಾಗಾವಾಗ ಮಾತು ಎತ್ತೋಳು. ಎಂಥಾ ವಿಷಯ ಅದು? ನನ್ನ ಸೊಸೆ ಯಾರ ಮನೆ ಕಡೇಯವಳು, ನನ್ನ ಮೊಮ್ಮಗಳು ಯಾವ ಕ್ಲಾಸಲ್ಲಿ ಓದ್ತಾ ಇದ್ದಾಳೆ ಬರೀ ಇಂಥಾವೆ. ಅಂದರೆ ಏನು? ನೋಡಿದವರು ಅನಕೋಬೇಕು - ನಾನು ವಯಸ್ಸಾದವನು, ಇವಳು ಇನ್ನೂ ಹರೆಯ ದಾಟದವಳು.

ಗಾಂಧೀ ಬಜಾರಿಗೆ ಹಿಂದಿನ ಸ್ಟಾಪಿನಲ್ಲಿ ಅವಳು ಇಳಕೊಂಡಳು. ಇಳೀವಾಗ್ಲೂ ಅಷ್ಟೆ.

''ಅಂಕಲ್ ಬಸ್ ಇಳೀವಾಗ ಹುಷಾರು, ಕತ್ತಲಲ್ಲಿ ಕಾಣದೀರ ಬಿದ್ದುಗಿದ್ದು ಬಿಟ್ಟೀರಿ - ಈ ವಯಸ್ಸಲ್ಲಿ ನೀವು ಎಷ್ಟು ಹುಷಾರಿದ್ರೆ ಅಷ್ಟು ಒಳ್ಳೇದು''

''ಥ್ಯಾಂಕ್ಯೂ ಮೇಡಂ.... ನೀವು ಹೇಳೋದೂ ನಿಜಾನೆ....''

ಅವಳು ಇಳಿದ್ಲು ಬಸ್ ಹೊರಡ್ತು. ಆವಾಗ ನಾನು ಕಿಟಕೀಯಿಂದ ತಲೆ ಹೊರಗೆ ಹಾಕಿ ಕೂಗಿದೆ - ಎಷ್ಟಾದರೂ ನಾನು ತುಂಬಾ ಧೈರ್ಯವಂತ!

''ನೀನೂ ಅಷ್ಟೇ ಅಮ್ಮ, ಚಾಂದ್ ಬೀಬಿ; ಫುಟ್‌ಪಾತ್ನಲ್ಲಿ ಕಲ್ಲುಗಳು ಎದ್ದಿರತ್ವೆ, ಎಡವಿ ಬಿದ್ರೆ ಆಮೇಲೆ ನೀನು ಕಟ್ಟಿಸ್ಕೊಂಡಿರೋ ಹಲ್ಲುಗಳೆಲ್ಲ ಉದುರಿ ಹೋಗತ್ವೆ.''

ಆ ಬಜಾರಿ ಹೆಣ್ಣಿನ
ಮಾತು ಕುಣಿತ ಅಲಂಕಾರ ಡ್ರೆಸ್ಸು
ನೋಡಿಯೇ ಹೇಳಬಹುದವಳ
ಕುಲಗೋತ್ರ ವಯಸ್ಸು ಅಡ್ರೆಸ್ಸು

ಶಂಸ

SVR LINDANE 20 E.C.

For effective Control of White Stem Borer in Coffee Plantation

SVR CARBENDAZIM 50% W.P.

A Broad Spectrum Systemic fungicide recommended for Coffee Collar Rot, Black Rot, Brown - eye spot. And also for control of diseases affecting Grapes, Vegetables, Paddy etc.

SVR CHLORPYRIPHOS 20 E.C.

For effective Termite (White ants) in pre-Construction of Buildings and existing Building Structures.

Formulated by:

KARNATAKA INSECTICIDES AND FUNGICIDES

Plot No. 27-B, II Phase Peenya Industrial Area,
BANGALORE - 560 058.

Marketed by:

S.V. RANGASWAMY AND COMPANY LIMITED

No.2, III Cross, Kalasipalyam New Extension,
BANGALORE - 560 002.

With Best Compliments From:

SRI BHASKAR INDUSTRIES

B-78, INDUSTRIAL ESTATE
RAJAJI NAGAR
BANGALORE - 560 004
PHONE: 3350646

ಸಮರ ಶಿಕ್ಷಣ

- ಭೂಪಿ

ಸ್ಟಾಫ್ ಕಾಲೇಜ್ ಕೋರ್ಸ್‌ಗೆ ಸೀಟು ದೊರಕಿಸಿಕೊಳ್ಳುವುದು ಒಬ್ಬ ಆಫೀಸರ್‌ನ career ನಲ್ಲಿನ ಮಹತ್ತರವಾದ ಘಟ್ಟ. ಸಮರಾಂಗದ ಅಧಿಕಾರಿಗಳಲ್ಲಂತೂ ಈ ಸಾಧನೆ ಆಶಾಗೋಪುರದ ತಳಹದಿ! ಏಕೆಂದರೆ, ಕೋರ್ಸ್ ಮುಗಿದೊಡನೇ ಇವರಿಗೆ ಒಂದು ಬ್ರಿಗೇಡ್ ಹೆಡ್‌ಕ್ವಾರ್ಟರ್ಸಿನಲ್ಲಿ ಒಬ್ಬ ಸ್ಟಾಫ್ ಆಫೀಸರ್ ಆಗಿಯೋ (ಬ್ರಿಗೇಡ್ ಮೇಜರ್, DAA & QMG) ಇಲ್ಲಾ ಮೇಲಿನ ಸ್ತರದ ಸಂಘಟನೆಗಳಲ್ಲಿ (ಡಿವಿಜನ್ ಕೇರ್ ಕಮಾಂಡ್ ಇತ್ಯಾದಿ) ಎರಡನೇ ದರ್ಜೆಯ ಸ್ಟಾಫ್ ಆಫೀಸರ್ ಆಗಿಯೋ ಪೋಸ್ಟಿಂಗ್ ಆಗುವುದು ಸಾಮಾನ್ಯ. ಇದರಿಂದ ಮುಂದೆ ಲೆಫ್ಟಿನೆಂಟ್ ಕರ್ನಲ್ (ಲೆ.ಕ.) ರ್‍ಯಾಂಕಿಗೆ ಏರಲು ದಾರಿ ಸುಗಮ.... ಹಾಗೆಯೇ ಮುಂದೆ ಬ್ರಿಗೇಡ್ ಕಮಾಂಡರ್, ಡಿವಿಜನಲ್ ಕಮಾಂಡರ್... ಇತ್ಯಾದಿ, ಇತ್ಯಾದಿ ಕನಸುಗಳು ಇಲ್ಲಿಂದಲೇ ಷುರು ಆಗುತ್ತವೆ... ಅಷ್ಟೇ ಏಕೆ, ಅತೀ ಉನ್ನತ ಹುದ್ದೆಯಾದ ಚೀಫ್ ಆಫ್ ಆರ್ಮಿ ಸ್ಟಾಫ್ (COAS) ಪದವಿಯತ್ತಲೂ ಮನಸ್ಸು ಓಡುವುದು ಅಷ್ಟೇನೂ ಅಸಾಮಾನ್ಯ ಅಲ್ಲ, ಅನ್ನಿ.... ಬಹಳಷ್ಟು ಜನರಿಗೆ ಇದು ತಿರುಕನ ಕನಸಾಗಿ ಮುಕ್ತಾಯಗೊಂಡರೂ, ಕೆಲವಾದರೂ ಮೆಟ್ಟಿಲುಗಳನ್ನು ಏರಲು ಸ್ಟಾಫ್ ಕಾಲೇಜ್ ಕೋರ್ಸ್ ಸಹಕಾರಿ, ಅನ್ನುವ ಮಾತು ನಿಜ!

ನನ್ನಂತಹ 'ಸೇವಾಂಗ' ದವನಿಗೆ ಈ ತರಹೆಯ ಕನಸುಗಳು ಅಸಂಬದ್ಧವಾಗಿಯೇ ಇತ್ತು ಅಂತ ಹೇಳಬಹುದು. ಏಕೆಂದರೆ.... ಎಲ್ಲಾ ಕಡೆ ಇರುವಂತೆ ಸೇವೆಯಲ್ಲೂ ಸಹ ''ಜಾತ್ಯಂತರ'' ಅಲ್ಲದಿದ್ದರೂ ''ವರ್ಗಾಂತರ'' ಅನ್ನುವ ಪಿಡುಗು ಇದ್ದೇ ಇದೆ. ಸಮರಾಂಗದವರು ಮೇಲ್ವರ್ಗ, ಸೇವಾಂಗವರು ಕೀಳ್ವರ್ಗ! (ಈ ಪಿಡುಗು ಈಗ ವಾಯುಪಡೆಯಲ್ಲಿ ಸ್ವಲ್ಪ ವಿಕೋಪಕ್ಕೆ ಒಳಗೊಂಡು, ಅವಾಂತರ ಎಬ್ಬಿಸಿರುವುದು ನಿಮ್ಮೆಲ್ಲರಿಗೂ ಗೊತ್ತೇ ಇದೆಯಲ್ಲಾ!).... ಈ ಅಂತರ ಪ್ರಕೃತಿ ನಿಯಮ ಇದ್ದ ಹಾಗೆ... ಆಶ್ಚರ್ಯ ಪಡುವಂತಹುದೇನೂ ಇಲ್ಲ! .... ಜನ್ಮಕ್ಕೇ ಅಂಟಿದ್ದು ಅಂತ ನನ್ನ ಭಾವನೆ!

ಏನೇ ಇರಲಿ, ಆಶಾಗೋಪುರ ನನಗೆ ಮರೀಚಿಕೆ ಅಂತ ತೋರಿದರೂ ಸಹ ಅದನ್ನು ಸ್ವಲ್ಪ ಎತ್ತರಕ್ಕಾದರೂ ಎಬ್ಬಿಸಲು ನನಗೆ ಯಾವ ಅಭ್ಯಂತರವೂ ಇರಲಿಲ್ಲ ಅನ್ನಿ. ನಮ್ಮ EME ಕೋರ್‌ನಲ್ಲಿ ನನಗಿಂತ ಮುಂಚೆ ಕೆಲವರು ಈ ಸ್ಟಾಫ್ ಕಾಲೇಜ್ ಕೋರ್ಸ್ ಮಾಡಿದ್ದರು. ಅವರ ಪೈಕಿ ಒಬ್ಬರೇ ಒಬ್ಬರಿಗೆ (ಅವರು ಆಗಲೇ ಲೆಫ್ಟಿನೆಂಟ್ ಕರ್ನಲ್ ಆಗಿದ್ದರು) ಒಂದು ಕಮಾಂಡ್ ಹೆಡ್‌ಕ್ವಾರ್ಟರ್ಸಿನಲ್ಲಿ ಸೇವಾಂಗಗಳ ಕಾರ್ಯಸಮನ್ವಯಿಸುವ ಹುದ್ದೆ ದೊರಕಿತ್ತು. ಮುಂದೆ EME ನಲ್ಲೆ ಮುಂದುವರೆದರೇ ಹೊರತು ಬೇರೆ ಯಾವ ಸ್ಟಾಫ್ ಹುದ್ದೆಯೂ ಅವರ ಪಾಲಿಗೆ ಬರಲಿಲ್ಲ. ಆದರೂ... ಮನುಷ್ಯನಿಗೆ ಆಸೆ ಅನ್ನುವುದು ಇದ್ದೇ ಇರುತ್ತಲ್ಲಾ.... ಯಾರಿಗೆ ಗೊತ್ತು? ''ತಿರುವು''

ನನ್ನಿಂದಲೇ ಆಗಬಹುದೆಂಬ ಭ್ರಮೆ ನನ್ನಲ್ಲೂ ಮನೆ ಮಾಡಿತ್ತು!

★★★

ಸ್ಟಾಫ್ ಕಾಲೇಜ್ ಕೋರ್ಸ್‌ಗೆ ಅರ್ಹತೆ ಗಳಿಸಿದ ಮೇಲೆ ಅಂಥಾ ಅದೃಷ್ಟವಂತರಲ್ಲಿ ಮತ್ತೊಂದು ಮಹತ್ತರವಾದ ಬದಲಾವಣೆಯನ್ನು ಕಾಣಬಹುದು. ಅವರ ನಡಿಗೆ, ಗತ್ತು, ಮಾತಿನ ವೈಖರಿ, ಇತರರೊಡನೆ ವರ್ತಿಸುವ ರೀತಿ... ಎಲ್ಲದರಲ್ಲೂ ಗಮನಾರ್ಹ ಬದಲಾವಣೆ!... ಎಷ್ಟೇ ಆಗಲಿ ಮುಂದಿನ ಸೇನಾನಾಯಕರುಗಳಾಗುವವರಲ್ಲವೇ? ಆ ಉನ್ನತ ಪದವಿಗೆ ಇದು ಮೊದಲನೇ ಮೆಟ್ಟಲಲ್ಲವೆ?.... ಅಂದ ಮೇಲೆ ''ಶುಭಸ್ಯಶೀಘ್ರಂ'' ಅಂತ ಎಷ್ಟು ಬೇಗ ಅವರುಗಳ ಹಾವ ಭಾವಗಳನ್ನು ಅಳವಡಿಸಿಕೊಂಡರೆ ಅಷ್ಟು ಒಳ್ಳೆಯದಲ್ಲವೇ? .... ಈ ತರಹೆಯ ಬದಲಾವಣೆ ಬರೀ ಆಫೀಸರ್‌ಗಳಲ್ಲಷ್ಟೇ ಅಲ್ಲ. ಅದಕ್ಕಿಂತ ಒಂದು ಕೈ ಮೇಲಾಗಿ ಅವರುಗಳ ಮಡದಿಯರಲ್ಲಿ ಕಂಡು ಬರುತ್ತದೆ. ಎಲ್ಲೋ ಅಲ್ಲೊಂದು, ಇಲ್ಲೊಂದು ಅಂತ ಕೆಲವರ ಮೇಲೆ ಈ ''ಹೆಗ್ಗಳಿಕೆ'' ಅಷ್ಟೊಂದು ಪರಿಣಾಮ ಬೀರದೇ ಇರಬಹುದು..... ಅಷ್ಟೇ....

★★★

ಮುಂದೆ, ಸ್ಟಾಫ್ ಕಾಲೇಜ್ ಸೇರುವ ಸಡಗರ!.... ಅಲ್ಲಿ ಮೊಟ್ಟ ಮೊದಲಿಗೆ ರಕ್ಷಣಾ ಪಡೆಯ ಚುನಾಯಿತ, ಉದಯೋನ್ಮುಖ ಅಧಿಕಾರಿಗಳೊಂದಿಗೆ (ಅಂದರೆ ಅಲ್ಲಿಯ ಇನ್‌ಸ್ಟ್ರಕ್ಟರುಗಳೊಂದಿಗೆ) ಸಂಪರ್ಕ ಆಗುತ್ತೆ. ರಕ್ಷಣಾ ಪಡೆಯ ಉನ್ನತ ಅಧಿಕಾರಿಗಳಲ್ಲದೇ ದೇಶದ ಪ್ರಭಾವಶಾಲಿ ವ್ಯಕ್ತಿಗಳ ಗಮನಕ್ಕೆ ಬರುವ ಸುಯೋಗ ಲಭಿಸುತ್ತೆ... ಒಟ್ಟಿನಲ್ಲಿ ಘನತೆ ಏರುತ್ತೆ ಅಲ್ಲವೇ?.... ಅಂದ ಮೇಲೆ ಘನತೆಗೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಳ್ಳುವುದು (ಈಗಿನಿಂದಲೇ) ಲಾಭದಾಯಕವಲ್ಲವೇ?.....

ಉಡಿಗೆ, ತೊಡಿಗೆಗಳಿರಲಿ, ಮುಖ್ಯವಾಗಿ ಹೊಂದಿಸಿಕೊಳ್ಳಬೇಕಾಗಿದ್ದುದು ವಾಹನ ಸೌಕರ್ಯ... ಸೈಕಲ್ ಇನ್ನು ಮೇಲೆ ಮೂಲೆಗೆ ಬೀಳಬೇಕು!.... ನಿಜ... ಕಾರಿಯಪ್ಪನವರು ಮಹಾದಂಡನಾಯಕರಾಗಿದ್ದಾಗ ಸೇವೆಯವರಲ್ಲಿ ದೇಶಾಭಿಮಾನ ಬೆಳೆಯಲು ''ಸಾಮಾನ್ಯ ಪ್ರಜೆ'' ಯಂತೆ ಸೈಕಲ್ ಮೇಲೆ ಆಫೀಸಿಗೆ ಹೋಗುತ್ತಿದ್ದರಂತೆ!... ಆದರೆ... ಅದೂ ಒಂದು ತರಹೆಯ ''ಸ್ವಾತಂತ್ರ್ಯದ ಅಮಲಿನಲ್ಲಿ''ನ ನಡವಳಿಕೆ ಇರಬಹುದೇನೋ?.... 1948ಎಲ್ಲಿ, 1961 ಎಲ್ಲಿ? ಅದೂ ವೆಲ್ಲಿಂಗ್‌ಟನ್‌ನಂತಹ ಗುಡ್ಡಗಾಡು ಪ್ರದೇಶದಲ್ಲಿ, ಹಣವಂತರು ವಿಹಾರ, ವಿಶ್ರಾಮಕ್ಕಾಗಿ ಅಡ್ಡಾಡುವ ತಾಣದಲ್ಲಿ, ಭಾರೀ ಸೇನಾನಾಯಕರು ಸೈಕಲ್ ತುಳಿಯುವುದೇ?..... ಜನ ನೋಡಿ ಏನು ಅಂದುಕೊಂಡಾರು? ಹೇಳಿ?... ಕಡೇ ಪಕ್ಷ ಒಂದು ಸ್ಕೂಟರ್ ಆದರೂ ಬೇಡವೇ?..... ಕಾರ್ ಇದ್ದರೆ ಘನತೆಗೇನು ಧಕ್ಕೇನೇ?.... ಬದಲಿಗೆ ಅದು ಘನತೆಯನ್ನು ವೃದ್ಧಿಪಡಿಸುವ ಸಾಧನ ಅಲ್ಲವೇ?... ಅಂತೂ ಭಾವೀ ಸ್ಟಾಫ್ ಕಾಲೇಜ್ ಪದವೀಧರರು ಈ ತರಹೆಯ ಚಿತ್ತಾರದ ಬದುಕಿನತ್ತ ಮನಸ್ಸು ಹಾಯಿಸುವುದು ಸಹಜ.... ನನಗೂ

ಇಂತಹ ಕನಸುಗಳನ್ನು ಬದಿಗೊತ್ತಲು ಸಾಧ್ಯವಾಗಲಿಲ್ಲ.

★★★

ನಾನೇನೋ ಸಿಕಂದರಾಬಾದ್ ಸೇರಿದ ಹೊಸದರಲ್ಲಿ ಒಂದು ಸೆಕೆಂಡ್‌ಹ್ಯಾಂಡ್ ಮಾರಿಸ್ ಮೈನರ್ ಕೊಂಡಿದ್ದೆ... ನೋಡಲು ಅಷ್ಟೇನೂ ಕಳಪೆ ಅಂತ ಅನಿಸದಿದ್ದರೂ, ಅದು ನನ್ನ 'ಹೊಸಾ ಘನತೆಗೆ' ತಕ್ಕದ್ದಾಗಿರಲಿಲ್ಲ ಅಂತ ನನಗೆ ಒಂದು ತರಹೆಯ ಕಾಂಪ್ಲೆಕ್ಸ್ ಷುರು ಆಯಿತು! ಸಾಲದ್ದಕ್ಕೆ ಎರಡನೇ ಗೇರ್ ಕೊಂಡಾಗಿನಿಂದ ಕೆಲಸ ಮಾಡುತ್ತಿರಲಿಲ್ಲ. ''ಬರೀ ಗೇರ್ ಸಿಗುವುದಿಲ್ಲ.... ಗೇರ್ ಬಾಕ್ಸ್‌ನೇ ಬದಲಿಸಬೇಕು. ಹೊಸದಕ್ಕೆ ಸುಮಾರು ಐನೂರು ಆಗುತ್ತೆ. ಅದೂ ಬೊಂಬಾಯಿನಲ್ಲಿ ಸಿಗಬಹುದು ಇಲ್ಲಿ ಇಲ್ಲ'' ಅಂತ ಗರಾಜಿನವ ಹೇಳಿದ! ಐನೂರು! ನಾನು ಕಾರಿಗೆ ತೆತ್ತ ಹನ್ನೆರಡನೇ ಒಂದು ಭಾಗ! ಕೊಡಲು ತಾಕತ್ತಿಲ್ಲ ಅಂತ ಅನಿಸಿತು... ಆದರೆ ಘನತೆ ಕಾಪಾಡಿಕೊಳ್ಳಬೇಕಲ್ಲಾ... ಕೋಲೂ ಮುರಿಯಬಾರದು, ಹಾವೂ ಸಾಯಬಾರದು... ಏನು ಮಾಡಲಿ ಅಂತ ಯೋಚಿಸಿದೆ.

ನಮ್ಮ ಸ್ಕೂಲಿನಲ್ಲಿ ರಾಜಯ್ಯ ಅಂತ ಒಬ್ಬ ಮಜ್ದೂರ್ (ಕೂಲಿ) ಇದ್ದ... ಟೆಂಪರರಿ ಹುದ್ದೆ... ಓದು ಬರೆಹ ಸೊನ್ನೆ... ಆದರೆ ಕಾರುಗಳ ವಿಷಯದಲ್ಲಿ ಅಸಾಧ್ಯವಾದ, ಅಸಾಮಾನ್ಯವಾದ ತಿಳುವಳಿಕೆ! ಬಿಚ್ಚಿ ಜೋಡಿಸುವುದಿರಲಿ, ಕಾರ್ ನಡೆಸಿ ಏನು ಊನ ಅಂತ ಖಚಿತವಾಗಿ ಹೇಳುವ ಪರಿಣಿತಿ ಅವನಲ್ಲಿತ್ತು! ಇದನ್ನು ಸ್ಕೂಲಿನವರು ಆಗಾಗ್ಗೆ ಬಳಸಿಕೊಳ್ಳುತ್ತಿದ್ದರು. ರಜಾದಿನಗಳಲ್ಲಿ ಮನೆಗೆ ಕರೆಸಿ ಕಾರ್ ರಿಪೇರಿ ಮಾಡಿಸಿಕೊಳ್ಳುತ್ತಿದ್ದರು.... ಅವನಿಗೂ ಸಂಭಾವನೆ ಸಿಗುತ್ತಿತ್ತು... ಅದೂ ಅಲ್ಲದೆ ಅವನಿಗೂ ಒಂದು ಆಸೆ... ಎಂದಾದರೊಂದು ದಿನ ಪರ್ಮನೆಂಟ್ ಆಗಿ ಮೆಕ್ಯಾನಿಕ್ ಕೆಲಸ ಸ್ಕೂಲಿನಲ್ಲಿ ಸಿಗಬಹುದೇನೋ.... ಅಂತ!

ಸರಿ.... ಹೊಸಾಗೇರ್ ಬಾಕ್ಸ್‌ಗೆ ಹೇಗಿದ್ದರೂ ಐನೂರು ತೆರಬೇಕು.... ಅದಕ್ಕೆ ಮುಂಚೆ ನಾನೇ ಅದನ್ನು ಬಿಚ್ಚಿಸಿ ಆಮೇಲೆ ರಿಪೇರಿ ಸಾಧ್ಯವಾಗದೇ ಇದ್ದರೆ ತೆತ್ತರಾಯಿತು. ಒಂದು ಕೈ ನೋಡುವ ಅಂತ ಅಂದುಕೊಂಡು ರಾಜಯ್ಯನನ್ನು ಕೇಳಿದೆ. ಅವನು ''ಅದಕ್ಕೇನು ಸರ್... ನಿಮ್ಮ ಮನೆ ಕಾರ್ ಷೆಡ್ಡಿನಲ್ಲಿ ಬಿಚ್ಚೋಣ'' ಅಂದ, ಹಾಗೇ ಒಂದು ಭಾನುವಾರ ಬಿಚ್ಚಿದ.... ''ಇಲ್ಲಿ ನೋಡಿಸರ್.... ಈ ಗರಾಜಿನವರು ಎಂಥಹವರು ಅಂತ... ಬರೀ ಈ ಫ಼ೋರ್ಕ್ (fork) ಸವೆದಿದೆ ಅಷ್ಟೇ.... ಗೇರುಗಳೆಲ್ಲಾ ಚೆನ್ನಾಗೇ ಇವೆ. ಈ ಫ಼ೋರ್ಕ್‌ನ ನಾನು ಬಜ಼ಾರಿನಲ್ಲಿ ಬ್ರೇಜ಼ಿಂಗೋ, ವೆಲ್ಡಿಂಗೋ ಮಾಡಿಸಿಕೊಂಡು ಬರುತ್ತೇನೆ ಒಂದೂವರೆ ರೂಪಾಯಿ ಆಗಬಹುದು.... ಆಮೇಲೆ ನೋಡ್ತಿರಿ, ಗಾಡಿ ಇಪ್ಪತ್ತು ಸಾವಿರ ಮೈಲಿ ಆದರೂ ನಿರಾತಂಕವಾಗಿ ನಡೆಯುತ್ತೆ'' ಅಂದ! ಐನೂರೆಲ್ಲಿ, ಒಂದೂವರೆ ಎಲ್ಲಿ?.... ''ಪರವಾಗಿಲ್ಲ, ಚೆನ್ನಾಗಿ ಮಾಡಿಸು... ಮೆಟಲ್ ಸ್ಪ್ರೇ ಮಾಡಿಸು. ಐದು ರೂಪಾಯಿ ಆದರೂ ಪರವಾಗಿಲ್ಲ ಅಂದೆ! ''ನಿಮಗೇಕೆ? ನಾನು ಮಾಡಿಸ್ತೇನೆ'' ಅಂತ ಅಂದು ಒಂದೂಕಾಲು ರೂಪಾಯಿನಲ್ಲಿ ಫ಼ೋರ್ಕ್ ರಿಪೇರಿ ಮಾಡಿಸಿ ಅಳವಡಿಸಿದ.

ಗೇರ್ ಸರಿಹೋಯಿತು? ಇಷ್ಟರಲ್ಲಿ ಒಂದು ಸಂಜೆ ನನ್ನ ಕಾರಿನ ಪಕ್ಕ ಸವರಿ ಬೇರೊಂದು ಕಾರ್ ನಿಲ್ಲದೇ ಹೊರಟುಹೋಯಿತು.... ಸರಿ.... ಇನ್ಶೂರೆನ್ಸ್ ಇತ್ತು. ಕಾರಿನ ಬಾಡಿ ಸರಿಮಾಡಿಸಿ ಪೇಯಿಂಟಿಂಗ್ ಮಾಡಿದ್ದಾಯಿತು. ಇಷ್ಟೆಲ್ಲಾ ಆದ ಮೇಲೆ ಧೈರ್ಯ ಬಂತು. ಎಂಜಿನ್ ಬಿಚ್ಚಿ, ರಾಜಯ್ಯನ ಕೈಲೇ ಮನೆಯಲ್ಲೇ ಓವರ್‌ಹಾಲ್ ಮಾಡಿಸಿದೆ. ಎಲ್ಲಾ ಒಟ್ಟು ಮುನ್ನೂರ ಎಂಭತ್ತೊಂದು ರೂಪಾಯಿ ಕೈನಿಂದ ಖರ್ಚಾಯಿತು. ಘನತೆಗೆ ತಕ್ಕ ವಾಹನ ಹೊಂದಿಸಿಕೊಂಡೆ!

★★★

ಪರೀಕ್ಷೆ ಫಲಿತಾಂಶ ಬಂದ ಒಂದೆರಡು ತಿಂಗಳಲ್ಲಿ ಸ್ಟಾಫ್ ಕಾಲೇಜಿನಿಂದ ಕಾಗದ ಬಂತು. ಕೇಳಬೇಕೆ? ಸ್ಟಾಫ್ ಕಾಲೇಜ್ ಅಂದರೆ ಕೆಲಸ ಹೇಗೆ ಮಾಡಬೇಕು ಅಂತ ಹೇಳಿ ಕೊಡುವ ಸಂಸ್ಥೆ. ಕಾಗದ ಬರೆಯುವಿಕೆಯಿಂದ ಹಿಡಿದು, ಯುದ್ಧ ಸನ್ನಿವೇಶಗಳ ಕ್ರಮಬದ್ಧ ವಿಶ್ಲೇಷಣೆ, ಆಜ್ಞೆಗಳನ್ನು ಲಿಖಿತಮೂಲಕ ತಿಳಿಸುವ ರೀತಿ, ಮೀಟಿಂಗ್‌ಗಳ ಅಳವಡಿಕೆ, ಯುದ್ಧಕಾಲದಲ್ಲಿ ಪರಿಸ್ಥಿತಿಗನುಗುಣವಾಗಿ ಸ್ಪಂದಿಸುವ ವಿಧಾನದವರೆಗೂ ಎಲ್ಲಾ ಶಿಸ್ತಾಗಿ ಕಲಿಸುವ ಸಂಸ್ಥೆ! ಅವರ ಕಾಗದದಲ್ಲಿ ಲೋಪದೋಷಗಳಿರಲು ಸಾಧ್ಯವೇ? ಸ್ಟಾಫ್ ಕಾಲೇಜಿಗೆ ಸ್ವಾಗತ ಬಯುಸುವುದರಿಂದ ಷುರುಮಾಡಿ, ಯಾವಾಗ ರಿಪೋರ್ಟ್ ಮಾಡಿಕೊಳ್ಳಬೇಕು. ಅದಕ್ಕೆ ಮುಂಚೆ ಯಾವ ಯಾವ ಮಾಹಿತಿಗಳನ್ನು ಕಳಿಸಿಕೊಡಬೇಕು ಎಂತೆಲ್ಲಾ ಬರೆದಿದ್ದರು. ಮಾಹಿತಿಗಳಲ್ಲಿ ಸಂಸಾರದ ವಿವರ, ಸ್ವಂತ ವಾಹನದ ಬಗ್ಗೆ ವಿವರ, ಮನೆಗೆಲಸಕ್ಕೆ ಯಾವ ಯಾವ ಆಳುಗಳು ಬೇಕು, ಸಾಮಾನುಗಳೆಲ್ಲಾ ವೆಲ್ಲಿಂಗ್‌ಟನ್‌ನನ್ನು ಹೇಗೆ ಮತ್ತು ಯಾವಾಗ ತಲುಪುತ್ತವೆ, ಲಾರಿ/ವ್ಯಾಗನ್ ವಿವರ ಏನು, ನೀವು ಸೇರಿದೊಡನೇ ತಕ್ಷಣಕ್ಕೆ (ಅಂದರೆ 15 ದಿನಕ್ಕೆ ಆಗುವಷ್ಟು) ಯಾವ ಯಾವ ಪದಾರ್ಥಗಳು ಎಷ್ಟೆಷ್ಟು ಬೇಕು... ಎಂತೆಲ್ಲಾ ಕೂಲಂಕುಶವಾಗಿ ತಿಳಿಸಲು ಫಾರಂಗಳನ್ನು ಸಹ ಕಳುಹಿಸಿದ್ದರು!

★★★

ಅಂತೂ ಇಂತೂ ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿ ವೆಲ್ಲಿಂಗ್‌ಟನ್‌ಗೆ ಹೊರಡಲು ಸಜ್ಜಾದೆ. ಕಾರಿನಲ್ಲೇ, ಬೆಂಗಳೂರು, ಮೈಸೂರು, ಊಟಿ ಮೂಲಕ ಪ್ರಯಾಣ ಅಂತ ನಿಶ್ಚಯಿಸಿ ಮನೆ ಸಾಮಾನೆಲ್ಲಾ ಲಾರಿ ಮೂಲಕ ಕಳುಹಿಸಿದ್ದಾಯಿತು! ಎರಡು ಮಕ್ಕಳು, ಹೆಂಡತಿ, ಅವಳ ಹೊಟ್ಟೆಯಲ್ಲಿ ಮತ್ತೊಂದು (ಕಾಲ ''ದೋಯಾ ತೀನ್'' ದಾಗಿತ್ತು. ''ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ'' ಅನ್ನುವ ಸ್ಲೋಗನ್ ಆಗಲಿ, ''ಹೆಣ್ಣಿರಲಿ, ಗಂಡಿರಲಿ ಮಗು ಒಂದೇ ಇರಲಿ'' ಅನ್ನುವ ಸ್ಲೋಗನ್ ಆಗಲಿ ಇರಲಿಲ್ಲ!) ಇವರುಗಳೊಡನೆ ಹೊರಟೆ.

★★★

ಸ್ಟಾಫ್ ಕಾಲೇಜಿನವರು ಬರೀ ಕಾಗದ ಬರೆಯುವುದರಲ್ಲೇ ಪರಿಣಿತರಾಗಿರಲಿಲ್ಲ. ಕಾಲೇಜಿಗೆ ಬರುವವರನ್ನು ಸ್ವಾಗತಿಸುವ ರೀತಿಯಲ್ಲಿ ಸಹ ಅಗ್ರಗಣ್ಯರಾಗಿದ್ದರು. ರೈಲಿನ

ಮೂಲಕ ವೆಲ್ಲಿಂಗ್‌ಟನ್ ಸೇರುವವರಿಗೆ ಇದರ ಭವ್ಯತೆ ಡಂಗು ಬಡಿಯುವಂತೆ ಮನದಟ್ಟಾಗುತ್ತದೆ. ಕಾರಿನಲ್ಲಿ ಹೋದರೆ ಅದರ ಸ್ವಾದ ಅಷ್ಟಾಗಿ ಸವಿಯಲು ಸಾಧ್ಯವಿಲ್ಲ. ಆದರೂ ಈ ಭವ್ಯತೆಯ ವಿವರಣೆ ಇಲ್ಲಿ ಪ್ರಸ್ತುತ ಅಂತ ತೋರುತ್ತೆ... ವಿವರಿಸುತ್ತೇನೆ.....ಓದಿ!

ಮೇಟುಪಾಳ್ಯಂ ಮೂಲಕ ಊಟಿ ರೈಲಿನಲ್ಲಿ ವೆಲ್ಲಿಂಗ್‌ಟನ್ ರೈಲ್ವೆ ಸ್ಟೇಷನ್ ತಲುಪಿದೊಡನೆಯೇ ಕಣ್ಣಿಗೆ ಗೋಚರಿಸುವುದೆಂದರೆ ಸ್ಟೇಷನ್‌ವ್ಯಾಗನ್‌ಗಳ ಸಾಲು ಒಂದುಕಡೆ, ಮತ್ತೊಂದು ಕಡೆ ಮನೆಕೆಲಸದವರ ಪೆರೇಡ್! ರೈಲು ಇಳಿದೊಡನೆಯೇ ಒಬ್ಬ ಆಫೀಸರ್ (ಲೆ. ಕರ್ನಲ್) ಮತ್ತು ಒಬ್ಬ JCO ಕೈಕುಲುಕಿ ಸ್ವಾಗತ ಬಯಸುತ್ತಾರೆ. ಜೊತೆಗೆ ಬಂದ ಸಾಮಾನಿನ ಉಸ್ತುವಾರಿ ಒಬ್ಬ NCO ಹೊತ್ತುಕೊಳ್ಳುತ್ತಾನೆ. ನೀವು ಕೊಟ್ಟ ಮಾಹಿತಿಗಳೆಲ್ಲಾ ಆಫೀಸರ್ ಹತ್ತಿರ ಇರುತ್ತೆ. ಅದರಂತೆ ನಿಮಗಾಗಿ ಆರಿಸಿದ ಆಳುಗಳನ್ನು (ಕುಕ್, ಆಯ, ಜನರಲ್ ಸರ್ವೆಂಟ್, ಡೋಬಿ, ಸ್ವೀಪರ್.... ಇತ್ಯಾದಿ) ನಿಮಗೆ ಪರಿಚಯಿಸುತ್ತಾರೆ. ನಿಮಗಾಗಿ ಕಾದಿರಿಸಿರುವ ಸ್ಟೇಷನ್‌ವ್ಯಾಗನ್‌ನಲ್ಲಿ ನೀವು ಕೇಳಿದ ತಕ್ಷಣಕ್ಕೆ ಬೇಕಾದ ಪದಾರ್ಥಗಳೆಲ್ಲಾ ನೀಟಾಗಿ ಪ್ಯಾಕ್ ಮಾಡಿ ಇರಿಸಲ್ಪಟ್ಟಿರುತ್ತವೆ. ನೀವು ಮೊದಲೇ ತಿಳಿಸಿದ್ರೆ. ಆಫೀಸರ್ಸ್ ಮೆಸ್‌ನಲ್ಲಿ ನಿಮಗಾಗಿ ಊಟವೋ, ತಿಂಡಿಯೋ ಕಾದಿರುತ್ತದೆ. ನೀವು, ನಿಮಗಾಗಿ ಅಲಾಟ್ ಮಾಡಿದ ಮನೆ ಸೇರುವ ಹೊತ್ತಿಗೆ ನಿಮ್ಮ ಆಳುಗಳು ಅಲ್ಲಿ ಸೇರಿರುತ್ತಾರೆ. ನಿಮಗಾಗಿ ಕಾದಿರುವ MES ಅಧಿಕಾರಿ ನಿಮ್ಮ ಮನೆ ತಪಾಸಣೆ ನಡೆಸಿ ನಿಮ್ಮ, ಸುಪರ್ದಿಗೆ ಒಪ್ಪಿಸುತ್ತಾನೆ. ಆಳುಗಳು ಕಾರ್ಯಪ್ರವೃತ್ತರಾಗುತ್ತಾರೆ... ನೀವು ವಿಶ್ರಾಂತಿಗೆಂದು ಸ್ವಲ್ಪ ಅಡ್ಡಾಗುತ್ತೀರಿ!.... ಹೇಗಿದೆ, ಸ್ವಾಗತ!

ಕಾರಿನಲ್ಲಿ ಹೋಗಿದ್ದರಿಂದ ಆಳುಗಳದ್ದಾಗಲಿ, ಸ್ಟೇಷನ್‌ವ್ಯಾಗನ್‌ಗಳದ್ದಾಗಲಿ ಪೆರೇಡ್ ಇರಲಿಲ್ಲ. ನೀವು ಮೊದಲೇ ಸೂಚಿಸಿದ್ದಂತೆ ಆಫೀಸರ್ಸ್ ಮೆಸ್ ಸೇರಿದೊಡನೆಯೇ ಮನೆ ಮತ್ತು ಆಳುಗಳ ಮಾಹಿತಿ ನಿಮಗೆ ಸಿಗುತ್ತೆ. ಮನೆ ಪದಾರ್ಥಗಳು ನಿಮ್ಮ ಕಾರ್ ಸೇರುತ್ತವೆ. ನೀವು ಊಟ ಅಥವಾ ತಿಂಡಿ ಮುಗಿಸಿ ಮೆಸ್‌ನಿಂದ ನಿಮಗಾಗಿ ಅಲಾಟ್ ಆಗಿರುವ ಮನೆ ಸೇರುತ್ತೀರಿ. ಅಲ್ಲಿ ನೀವು ಕೇಳಿದ ಆಳುಗಳು ನಿಮಗಾಗಿ ಕಾದಿರುತ್ತಾರೆ... ಮತ್ತೇನು ಬೇಕು?

ನಾನು ಮೆಸ್ ಸೇರಿದೊಡನೆ ನನಗಾಗಿ ಅಪ್ಪರ್ ಕಟಾನೂರಿನಲ್ಲಿ ಮನೆ ಸಿದ್ಧಪಡಿಸಿದ್ದಾರೆಂದು ತಿಳಿಯಿತು. ಅದಕ್ಕೆ ''ಪೀಥಾಪುರಂ ಅರಮನೆ'' ಅಂತ ಹೆಸರಿತ್ತು. ಅಂದರೆ ಪೀಥಾಪುರಂ ರಾಜನ ಕಂಟ್ರಿಹೌಸ್! ಅದನ್ನು ಬೇರೆ ಯಾರೋ ಖರೀದಿಸಿದ್ದು MES ಗೆ ಬಾಡಿಗೆಗೆ ಕೊಟ್ಟಿದ್ದರು. ಅರಮನೆಯನ್ನು ನಾಲ್ಕು ಸಂಸಾರಗಳಿಗೆ ಹಂಚಿದ್ದರು.... ಪ್ರಶಾಂತ ವಾತಾವರಣ.... ಮನೆ ಸುತ್ತಲೂ ರೋಜಾ ಹೂವಿನ ತೋಟ (ಅದಕ್ಕೇ ಅರಮನೆಗೆ 'ರೋಜ಼ರಿ' ಅಂತ ಹೊಸಾ ನಾಮಕರಣ ಆಗಿತ್ತು).... ದೊಡ್ಡ ಕಾಂಪೌಂಡ್... ಸುತ್ತಲೂ ಟೀ ತೋಟಗಳು! ಮೆಸ್‌ನಲ್ಲಿ ದೊರೆತ ''ದಿಕ್ಸೂಚಿ'' ಹಿಡಿದು

ಸಂಸಾರ ಸಮೇತ ಅರಮನೆಯನ್ನು ಸೇರಿಕೊಂಡೆ.

★★★

ಸ್ಟಾಫ್ ಕಾಲೇಜಿನಲ್ಲಿ ಆರು ವಾರಗಳ ಆರು 'ಟ್ಯುಟೋರಿಯಲ್'' ಗಳಿದ್ದವು.... ಅಂದರೆ ಆರು ಸೆಮಿಸ್ಟರ್‌ಗಳಿದ್ದ ಹಾಗೆ..... ಪರೀಕ್ಷೆ, ಗಿರೀಕ್ಷೆ ಅಂತ ಏನೂ ಇರಲಿಲ್ಲ. ದಿನ ನಿತ್ಯದ ಪಾಠಗಳಿಗೆ ಸ್ಪಂದಿಸುವುದೇ ಪರೀಕ್ಷೆ!

ಮೊದಲ ಆರು ವಾರಗಳು ''ಬೋರ್'' ಅಂತಲೇ ಹೇಳಬೇಕು.... ಏಕೆಂದರೆ ಈ ದಿನಗಳಲ್ಲಿ ಬರೀ ಬರವಣಿಗೆಯ ಶೈಲಿಯನ್ನು ಕರಗತ ಮಾಡಿಸುವುದೇ ಮುಖ್ಯ ಉದ್ದೇಶವಾಗಿತ್ತು. ''ಏನು'' ಬರೆದಿದ್ದೀಯ ಅನ್ನುವದಕ್ಕಿಂತ ''ಹೇಗೆ'' ಬರೆದಿದ್ದೀಯ ಅನುವುದಕ್ಕೇ ಹೆಚ್ಚು ಪ್ರಾಧಾನ್ಯತೆ. Capital letters, spacing ಇವುಗಳ ಸರಿಯಾದ ಬಳಕೆಯಿಂದ ಹಿಡಿದು paragraphing, ಹೆಡ್ಡಿಂಗ್, ಇನ್‌ಟ್ರೊಡಕ್ಷನ್, ಕನ್‌ಕ್ಲೂಷನ್... ಇತ್ಯಾದಿಗಳಿಗೇ ಮಹತ್ವ! ಬರೀ ಸರಕಾರಿ ಕಾಗದದ ವಿನ್ಯಾಸದಿಂದ ಹಿಡಿದು ಕದನ ಸನ್ನಿವೇಶದ ವಿಶ್ಲೇಷಣೆ, ಆಜ್ಞೆಗಳನ್ನು ಲಿಖಿತ ಮೂಲಕ ತಿಳಿಸುವ ವಿಧಾನ, ಮೆಸೇಜ್ ರೈಟಿಂಗ್, ರಿಪೋರ್ಟ್, ಲೇಔಟ್, ಪೇಪರ್ ರೈಟಿಂಗ್ ವರೆಗೂ ಸತತವಾದ ಅಭ್ಯಾಸ!.... ಬೋರ್ ಅನಿಸಿದರೂ ಕೊನೆಯಲ್ಲಿ ಮಿಲಿಟರಿ ಶೈಲಿಯ ಬರವಣಿಗೆ ಪೂರ್ತಿ ಕರಗತವಾಗುತ್ತಿತ್ತು. ಈ ''ಬೋರ್'' ನ ಜೊತೆಗೆ ಇದೇ ಟ್ಯುಟೋರಿಯಲ್‌ನಲ್ಲಿ ಸೇನೆಗಳ ವಿವಿಧ ಅಂಗಗಳ ಸಾಂಪ್ರದಾಯಿಕ ವಿನ್ಯಾಸ, ಕಾರ್ಯವಿಧಾನ, ಯುದ್ಧೋಪಕರಣಗಳ ಸರಬರಾಜು, ಸಾಮರ್ಥ್ಯ, ದಕ್ಷತೆ, ಉಪಯೋಗಿಸುವ ವಿಧಾನ ಇತ್ಯಾದಿ ಮೂಲಭೂತ ವಿಷಯಗಳ ಬಗ್ಗೆ ತಿಳುವಳಿಕೆ, ವಿಶ್ಲೇಷಣೆ, ಚರ್ಚೆ ಇತ್ಯಾದಿ ಸಹ ಕಲಿಯಬೇಕಾಗಿತ್ತು.

ಬಾಕಿ ಐದು ಟ್ಯುಟೋರಿಯಲ್‌ಗಳು ಬಹಳ ಕುತೂಹಲಕಾರಿಯಾಗಿರುತ್ತಿದ್ದವು. ಇವು ಸಮರ ಕೌಶಲಗಳನ್ನು ಕರಗತ ಮಾಡಿಕೊಳ್ಳುವುದಕ್ಕೆ ಮೀಸಲಾಗಿದ್ದವು. ಕ್ರಮಬದ್ಧವಾಗಿ ಮೊದಲು ಅಧ್ಯಯನ, ಆಮೇಲೆ ಅದನ್ನು ಕರಗತ ಮಾಡಿಕೊಳ್ಳುವ ವಿಧಾನದ ಬಗ್ಗೆ ಚರ್ಚೆ, Sand model ಮೇಲೆ ಒಂದು ಯುದ್ಧ ಸನ್ನಿವೇಶದ ವಿಶ್ಲೇಷಣೆ, ನಂತರ ಹೊರಾಂಗಣದಲ್ಲಿ ಇದೇ ಬಗೆಯ ಸನ್ನಿವೇಶ ಸಮೀಕ್ಷೆ ಹೀಗೆ ನಡೆಯುತ್ತಿದ್ದವು. ಎಲ್ಲಾ ಚರ್ಚೆ, ವಿಶ್ಲೇಷಣೆ ಮತ್ತು ಸಮೀಕ್ಷೆ ಶಿಸ್ತಿನ ಬರವಣಿಗೆಯಲ್ಲಿ ಮುಕ್ತಾಯಗೊಳ್ಳುತ್ತಿದ್ದವು.

ಒಟ್ಟಿನಲ್ಲಿ ಹತ್ತು ತಿಂಗಳ ಸ್ಟಾಫ್ ಕಾಲೇಜ್ ವಾಸ ಸುಖಮಯವಾಗಿ ಕಳೆಯಿತು. ಯಾವುದಕ್ಕೂ ಕೊರತೆ ಇರಲಿಲ್ಲ. ಆಫೀಸರ್‌ಗಳ ಮತ್ತು ಅವರ ಸಂಸಾರಗಳ ನಡುವೆ ಒಂದು ಬಗೆಯ 'ಬಾಂಧವ್ಯ' ಬೆಳೆಯಿತು. ಜೊತೆಗೆ ನೌಸೇನಾ ಬಲದ ಅರಿವು ಮೂಡಿಸಲು ಮೂರು ದಿನ ನೌಕಾ ಪಡೆಯ ನೌಕೆಗಳಲ್ಲಿ ಕೊಚ್ಚಿಯಿಂದ ಮುಂಬಯಿಗೆ ಪ್ರಯಾಣ, ದಾರಿಯಲ್ಲಿ ಅದರ ಬಲ ಮತ್ತು ಕದನ ಕೌಶಲಗಳ ಪ್ರದರ್ಶನ! ಬೊಂಬಾಯಿನಿಂದ ಸ್ಪೆಷಲ್ ರೈಲಿನಲ್ಲಿ ಪುಣೆ, ಬೆಂಗಳೂರು, ಮದರಾಸ್ ಇವುಗಳಲ್ಲಿನ

ಸೇನಾ ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕಾ ಸಂಸ್ಥೆಗಳಿಗೆ ಭೇಟಿ!... ಈ ದಿನಗಳಲ್ಲಿ ಯಾವುದೂ ''ಬೋರ್'' ಆಗಿರಲಿಲ್ಲ!

ಕಡೆಯ ಟ್ಯುಟೋರಿಯಲ್ ಅಂತೂ ಮತ್ತೂ ಕುತೂಹಲಕಾರಿಯಾಗಿತ್ತು. ಇದರಲ್ಲಿ ಮೂರು ಸೇನಾ ವಿಭಾಗಗಳ (ಭೂ, ಜಲ ಮತ್ತು ವಾಯು) ಸಮಸ್ಯೆಯ ಸಾಧನೆಯ ಬಗ್ಗೆ ಅಧ್ಯಯನ. ಇವುಗಳ ಜೊತೆ ಭೂಸೇನಾ ವಿದ್ಯಾರ್ಥಿಗಳಿಗೆ ''ಟೆಲಿಫೋನ್ ಬ್ಯಾಟಲ್'' ಎಂಬ ಅಭ್ಯಾಸ. ವಿದ್ಯಾರ್ಥಿಗಳಿಗೆ ವಿವಿಧ ದರ್ಜೆಯ ಹುದ್ದೆಗಳನ್ನು ಕೊಟ್ಟು, ಕೃತಕ ಹೆಡ್ ಕ್ವಾರ್ಟರ್ಸ್‌ಗಳನ್ನು ನಿರ್ಮಿಸಿ, ಒಂದು ಯುದ್ಧ ಸನ್ನಿವೇಶವನ್ನು ಕಲ್ಪಿಸುತ್ತಿದ್ದರು. ಈ ಸನ್ನಿವೇಶದ ವಿಶೇಷ ಅಂದರೆ ಯುದ್ಧ ನಡೆಯುತ್ತಿರುವಾಗ ಮಾಹಿತಿಗಳನ್ನು ವಿಶ್ಲೇಷಿಸಿ ತಕ್ಷಣ ಆಜ್ಞೆಗಳನ್ನು ಕೊಡುವ ಪರಿಣಿತಿಯನ್ನು ವೃದ್ಧಿಪಡಿಸುವುದು. ಮೂರುದಿನ ಸತತವಾಗಿ ಹಗಲೂ ರಾತ್ರಿ ಟೆಲಿಫೋನ್ ಮೂಲಕ ಯುದ್ಧದಲ್ಲಿ ತೊಡಗಿರುವ ಪಡೆಗಳ ಆತಂಕಭರಿತ, ಶಂಕಾಭರಿತ, ಆಶಾ/ನಿರಾಶಾ ಭರಿತ ಮಾಹಿತಿಗಳನ್ನು ಒದಗಿಸುತ್ತಾ, ಮಧ್ಯೆಮಧ್ಯೆ ವೈರಿ ಪಡೆಗಳ ಮಾತುಕತೆಗಳನ್ನು ಬೆರೆಸುತ್ತಾ, ಇವನ್ನೆಲ್ಲಾ ವಿದ್ಯಾರ್ಥಿಗಳು ಹೇಗೆ ಗ್ರಹಿಸುತ್ತಾರೆ, ಯಾರ ತರಹ ವಿಶ್ಲೇಷಿಸುತ್ತಾರೆ. ಏನು ಆಜ್ಞೆಗಳನ್ನು ಕೊಡುತ್ತಾರೆ..... ಎಂದೆಲ್ಲಾ ಪರೀಕ್ಷಿಸುತ್ತಾರೆ. ಒಟ್ಟಿನಲ್ಲಿ ಯುದ್ಧಕಾಲದಲ್ಲಿ ಉಂಟಾಗಬಹುದಾದಂತಹ ಒತ್ತಡಗಳಿಗೆ ಸ್ಪಂದಿಸುವ ವಿಧಾನವನ್ನು ಅಳೆಯುತ್ತಾರೆ!

ಇದರಲ್ಲಿ ನೋಡಬೇಕು ನಮ್ಮ ಸಮರಾಂಗಗಳ ಆಫೀಸರ್‌ಗಳ ಕಳವಳ, ತಳಮಳ! ಅದರಲ್ಲೂ ಬ್ರಿಗೇಡ್ ಕಮಾಂಡರ್ ಆಗಿಯೋ ಅಥವಾ ಅವರ ಮುಖ್ಯ ಸ್ಟಾಫ್ ಆಫೀಸರ್ (ಬ್ರಿಗೇಡ್ ಮೇಜರ್) ಆಗಿ ನಿಯಮಿಸಲ್ಪಟ್ಟಿರುವವರ ಗೋಳು! ಕೆಲವರಂತೂ ಈ ಮೂರುದಿನಗಳ ಸತತ ಅಭ್ಯಾಸದಿಂದ ಕಂಗೆಟ್ಟು ಮನಸ್ಸಿನ ಸಮತೋಲನವನ್ನೇ ಕಳೆದುಕೊಳ್ಳುವ ಸ್ಥಿತಿಗೆ ತಲುಪುತ್ತಾರೆ. ''ಈ ಪರೀಕ್ಷೆಯಲ್ಲಿ ತೇರ್ಗಡೆ ಆಗದಿದ್ದಲ್ಲಿ ನನ್ನ career ಮುಗಿಯಿತು'' ಅನ್ನುವ ಭಯ ಅವರನ್ನು ಸದಾ ಕಾಡುತ್ತಿರುತ್ತದೆ! ನನ್ನಂಥಹ ಸೇವಾಂಗದವನಿಗೆ ಈ ಬಗೆಯ ''ಯುದ್ಧ ನಿರ್ದೇಶಕನ'' ಅಥವಾ ಅವನ ಮುಖ್ಯ ಸಹಾಯಕನ ಹುದ್ದೆಯನ್ನು ಸಾಮಾನ್ಯವಾಗಿ ದಯಪಾಲಿಸುತ್ತಿರಲಿಲ್ಲ. ಸೇವಾಂಗಗಳ ಸೇವಾ ಕಾರ್ಯಗಳನ್ನು co-ordinate ಮಾಡುವ DAA & QMG ಅನ್ನುವ ಪದವಿ ದಕ್ಕುತ್ತಿತ್ತು. ನನಗಂತೂ ಈ ಹುದ್ದೆ ಸ್ವಲ್ಪವೂ ಆತಂಕ ಹುಟ್ಟಿಸುವಂತಹುದಾಗಿರಲಿಲ್ಲ! ಆದರೆ ನನ್ನ ''ಸಹೋದ್ಯೋಗಿ' ಬ್ರಿಗೇಡ್ ಮೇಜರ್ ಪಡುತ್ತಿದ್ದ ತೊಳಲಾಟವನ್ನು ನೋಡಲಾರದೆ, ಸಹಿಸಲಾರದೆ ಅವನು ಅದನ್ನು ಯಶಸ್ವಿಯಾಗಿ ನಿಭಾಯಿಸಲು ಸಹಾಯಕನಾಗಿದ್ದೆ... ಆತ ಲೆಫ್ಟಿನೆಂಟ್ ಜನರಲ್ ಆಗಿ ನಿವೃತ್ತಿ ಹೊಂದಿದ! ನಾನು.....?!!

★★★

ಸ್ಟಾಫ್ ಕಾಲೇಜಿನಲ್ಲಿ ಮತ್ತೊಂದು ಮೋಜಿನ ಸನ್ನಿವೇಶ ವಿದ್ಯಾರ್ಥಿಗಳ ಮಡದಿಯರದು! ಮಾಡಲು ಕೆಲಸವಿಲ್ಲದವರೇ ಜಾಸ್ತಿ! ಅದರಲ್ಲೂ ಪತಿಯ 'ಏಳಿಗೆ'ಗಾಗಿ

ದುಡಿಯುವ ಕಾತುರ ಬೇರೆ. ನನ್ನ ಮಡದಿಯ ಹಾಗೆ 'ಮನೆ ಮಕ್ಕಳು' ಅನ್ನುವ ಅತಿಯಾದ ಕಾಳಜಿಯಿಂದ ಮುಕ್ತರಾಗಿದ್ದವರೇ ಜಾಸ್ತಿ! ಕಿಟ್ಟಿಪಾರ್ಟಿ, ಕಾರ್ಡ್‌ಪಾರ್ಟಿ, ಗಾಸಿಪ್ ಪಾರ್ಟಿಗಳಲ್ಲದೇ ಇನ್‌ಸ್ಟ್ರಕ್ಟರುಗಳನ್ನು, ಅವರ ಮಡದಿಯರನ್ನು ಓಲೈಸುವ, ಒಲಿಸುವ ಪ್ರಯತ್ನದಲ್ಲೇ ಜಾಸ್ತಿ ತೊಡಗಿರುತ್ತಿದ್ದರು! ಕೆಲವು 'ವಿದ್ಯಾವಂತ' ಮಡದಿಯರು ಪತಿಯ 'ಹೋಂವರ್ಕ್'ನಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದರು!.... ಅಂತೂ ಅವರದೂ ಒಂದು ಬಗೆಯ ಆತಂಕ ಭರಿತ ಜೀವನ!

★★★

ಸ್ಟಾಫ್ ಕಾಲೇಜ್ ಕೋರ್ಸ್ ಆಗಸ್ಟ್ ತಿಂಗಳ ಕೊನೆಯಲ್ಲಿ ಮುಕ್ತಾಯಗೊಂಡಿತು. ಮುಗಿಯುವ ಮುಂಚೆ ಮತ್ತೆ ಎಲ್ಲರಿಗೂ ಆತಂಕ! "ಯಾವ ಹುದ್ದೆಗೆ ಪೋಸ್ಟ್ ಮಾಡುತ್ತಾರೋ, ಅಂತ! ಬ್ರಿಗೇಡ್ ಮೇಜರ್ ಹುದ್ದೆ ಅಂದರೆ ತನ್ನನ್ನು 'ಜನರಲ್ ಆಗುವ ಯೋಗ್ಯತೆ ಉಳ್ಳವನು ಅಂತ ಗುರುತಿಸಿದ್ದಾರೆ" ಅನ್ನುವ ಹೆಮ್ಮೆ! (ಬಹಳಷ್ಟು ಜನರಿಗೆ ಇದು "ಭ್ರಮೆ" ಅನ್ನಿ)... ಆಶ್ಚರ್ಯಕರವಾದ ಸಂಗತಿ ಅಂದರೆ, ಈಸಲ ನನನ್ನೂ ಸಹ ಒಂದು ಸ್ಟಾಫ್ ಹುದ್ದೆಗೆ ಪೋಸ್ಟ್ ಮಾಡಿದರು! EME ಕೋರ್‌ನಲ್ಲಿ ಈ ತರಹೆಯ ಹುದ್ದೆ ಗಳಿಸಿದವರಲ್ಲಿ ಎರಡನೆಯವನಾದೆ! ಷಿಲ್ಲಾಂಗ್‌ನಲ್ಲಿದ್ದ ಕೋರ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಎರಡನೇ ದರ್ಜೆಯ ಸ್ಟಾಫ್ ಆಫೀಸರ್ ಆಗಿ! ಈ ಕೋರ್ ಹೆಡ್‌ಕ್ವಾರ್ಟರ್ಸ್ ನಮ್ಮ ಈಶಾನ್ಯ ಗಡಿಗಳ ರಕ್ಷಣೆ ಮತ್ತು ನಾಗಾಲ್ಯಾಂಡಿನಲ್ಲಿ ಆತಂಕವಾದಿಗಳ ವಿರುದ್ಧದ ಕಾರ್ಯಾಚರಣೆಯ ಜವಾಬ್ದಾರಿ ಹೊತ್ತ ಒಂದು field formation ಆಗಿತ್ತು. ನಾನು ಒಂದು field formation ನಲ್ಲಿ ಸ್ಟಾಫ್ ಹುದ್ದೆ ಗಳಿಸಿದ ಮೊದಲ EME ಆಫೀಸರ್ ಆದೆ!.... ನಾನಾಗಲೇ ತಿಳಿಸಿದ್ದ "ತಿರುವಿನ" ಲಕ್ಷಣಗಳು ಫಲಕಾರಿ ಆಗುತ್ತಿವೆಯೇನೋ ಅಂತ ಅನಿಸಿತು. ಆಶಾಗೋಪುರ ಮತ್ತೆ ಚಿಗುರಲು ಷುರು ಆಯಿತು!


★★★

ನಾವು ಮೂರು ಜನ ಷಿಲ್ಲಾಂಗ್‌ಗೆ ಪೋಸ್ಟ್ ಆಗಿದ್ದೆವು. ಒಬ್ಬ ಮಟ್ಟಿಗೆ ಕೋರ್ಸ್ ಮುಗಿದೊಡನೆಯೇ ಷಿಲ್ಲಾಂಗ್‌ಗೆ ಹೊರಟಿದ್ದ. ಮೂರು ಜನರೂ ನಮ್ಮ ಸಾಮಾನುಗಳನ್ನು ಒಂದು ಲಾರಿಯಲ್ಲಿ ಹಾಕಿ ಷಿಲ್ಲಾಂಗ್‌ಗೆ ರವಾನೆ ಮಾಡಿದೆವು. ಅವುಗಳನ್ನು ಇಳಿಸಿಕೊಳ್ಳುವ ಭಾರ ಈ ಆಫೀಸರ್‌ಗೆ ವಹಿಸಿದೆವು. ನಾನು ಮತ್ತು ಮೂರ್ತಿ (ಸಿಗ್ನಲ್ ಕೋರಿಗೆ ಸೇರಿದವ - ಮೈಸೂರಿನವನೇ) ಎರಡು ತಿಂಗಳು ರಜ ಪಡೆದು, ಒಟ್ಟಿಗೆ ನಮ್ಮೆರಡು ಕಾರುಗಳಲ್ಲಿ ಸಂಸಾರ ಸಮೇತ ದಕ್ಷಿಣ ಭಾರತ ಪ್ರವಾಸ ಮುಗಿಸಿ ಬೆಂಗಳೂರಿಗೆ ಬಂದೆವು.

ರಜ ಮುಗಿಯುವ ಹೊತ್ತಿಗೆ ಆಗಲೇ ವೃತ್ತಪತ್ರಿಕೆಗಳಲ್ಲಿ ಚೀನೀಯರ ಆಟಾಟೋಪದ ಬಗ್ಗೆ ವರದಿಗಳು ಬರಲು ಷುರು ಆಗಿದ್ದವು. "ಹಿಂದೀ ಚೀನೀ ಭಾಯಿ, ಭಾಯಿ" ಅನ್ನುವ ಘೋಷಣೆ 'ಭಾಯಿ, ಭಾಯಿ" ಇಂದ "ಬೈ, ಬೈ"ಗೆ ಬದಲಿಸುವ

ಸೂಚನೆಗಳು ಕಂಡುಬಂದವು. ಆದರೂ ಬೆಂಗಳೂರಿನಲ್ಲಿದ್ದ ನಾವು ಇದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಷಿಲ್ಲಾಂಗ್‌ನಿಂದ ಸಂಸಾರ ಅಲ್ಲಿಗೆ ಕರೆದುಕೊಂಡು ಹೋಗಲು ಅನುಮತಿ ಬಂದಿತ್ತೇ ಹೊರತು ನಾವು ಹೊರಡುವ ವರೆಗೆ ಅನುಮತಿ cancel ಆಗುವ ಸೂಚನೆಗಳು ಯಾವುದೂ ಬರಲಿಲ್ಲ. ಷಿಲ್ಲಾಂಗ್ ಎಂದು ಸೇರುತ್ತೇವೆ ಅನ್ನುವ ಬಗ್ಗೆ ನಮ್ಮ ಹೆಡ್ ಕ್ವಾರ್ಟರ್ಸ್‌ಗೆ ಮೆಸೇಜ್ ಕಳಿಸಿ, ಇಬ್ಬರ ಕಾರುಗಳನ್ನು ಒಂದು 'ಡಬಲ್ EVK'ನಲ್ಲಿ ಏರಿಸಿ ರೈಲಿನಲ್ಲಿ ಗುವಾಹತಿಗೆ ರವಾನೆ ಮಾಡಿದೆವು. ಕೆಲವು ದಿನಗಳ ನಂತರ ಪತ್ನೀ ಪುತ್ರ ಪುತ್ರಿಯರ ಸಮೇತ ನಿರಾತಂಕವಾಗಿ ರೈಲು ಹತ್ತಿದೆವು. ಆಟಾಟೋಪದ ವರದಿಗಳು ಬರುತ್ತಲೇ ಇದ್ದುವು!

★★★



With Best Compliments From:

VIJAY SPHEROIDALS

Plot No. 17-B, Peenya Industrial Area
II Phase, Bangalore - 560 058

-: ಸಂಗೀತದಲ್ಲಿ ಸಾಹಿತ್ಯ :-

- ಟಿ.ಡಿ.

ಇಂಜಿನಿಯರಿಂಗ್ ಕಾಲೇಜು ಸೇರಿದ ಮೇಲೆ ಬೇರೆ ಬೇರೆ ಊರಿನ ವಿದ್ಯಾರ್ಥಿಗಳ ಪರಿಚಯವಾಯಿತು. ಹಾಸ್ಟೆಲ್ ಒಂದು ಆಲ್‌ಇಂಡಿಯನ್ ಯೂನಿಯನ್ ತರಹ ಬೇರೆ ಬೇರೆ ಮಾತು, ಸಂಗೀತ, ಹವ್ಯಾಸ ಚೆನ್ನಾಗಿತ್ತು. ಪಕ್ಕದಲ್ಲಿದ ರಾಮಮಂದಿರದಿಂದ ರಾಮನವಮಿ ಸಂಗೀತ ಬೇರೆ ಊರಿನವರಿಗೆ ಹೊಸ ಅನುಭವ. ಪ್ರತಿನಿತ್ಯ ಹಾಸ್ಟೆಲ್‌ಗೆ ಕೇಳುತ್ತಿತ್ತು ಈ ಸಂಗೀತ. ನನ್ನ ರೂಂ ಮೇಟ್ ಕೂಡಾ ಕನ್ನಡದವನೇ ಆದರೂ ಸ್ವಲ್ಪ ಉತ್ತರ ಕನ್ನಡದ ವ್ಯತ್ಯಾಸ. ಅವನ ಅಡ್ಡ ಹೆಸರು ಹಾಸ್ಟೆಲ್‌ನಲ್ಲಿ ಬೋಂಡಾ ಸಾಹೇಬ ಅಂತ ಅವನ ಆಕಾರ ನೋಡಿ ಇಟ್ಟಿದ್ದರು. ಅವನಿಗೆ ಕನ್ನಡ ಕೀರ್ತನೆಗಳು, ಕರ್ನಾಟಕ ಸಂಗೀತ ಬಹಳ ಇಷ್ಟವಾಗಿ ತಾನೂ ಹಾಡು ಕಲಿಯಬೇಕೆನ್ನುವಾಸೆ. ಆದರೆ ಹಾಡಿನಲ್ಲಿ ರಾಗ, ಭಾವಕ್ಕಿಂತ ಸಾಹಿತ್ಯದ ಮೇಲೆ ಜಾಸ್ತಿ ಪ್ರೀತಿ. ಅಲ್ಲಿ-ಇಲ್ಲಿ ಸ್ವಲ್ಪ ಕಲಿತು ಜೋರಾಗಿ ತಾಳ ಹಾಕಿ, ಸಾಹಿತ್ಯ ಅರ್ಥವಾಗುವಂತೆ ಹೇಳುತ್ತಿದ್ದ.

ಬೋಂಡಾ ಸಾಹೇಬ ಹೇಳಿದ, ಅಮೇರಿಕಾದ ವಿದ್ವಾಂಸ ಹಿಗಿನ್ಸ್ ಭಾಗವತರ್ ಎಷ್ಟು ಚೆನ್ನಾಗಿ ಸ್ಫುಟವಾಗಿ ಕನ್ನಡ ಕೀರ್ತನೆ ಹೇಳುವಾಗ, ನಾನು ಯಾಕೆ ಸಂಗೀತ ವಿದ್ವಾನ್ ಆಗಬಾರದು ಅಂದ. ತಾನು ಒಳ್ಳೆಯ ಮೇಷ್ಟ್ರ ಹತ್ತಿರ ಸಂಗೀತ ಕಲಿತು ಮ್ಯೂಸಿಕ್ ಪರೀಕ್ಷೆ ಪಾಸು ಮಾಡಿ, ಅಮೇರಿಕನ್ ಭಾಗವತರಿಗಿಂತ ಚೆನ್ನಾಗಿ ಹೇಳಬೇಕು ಅಂದ.

ನಾನು ನೋಡಿದ ಪ್ರಕಾರದಲ್ಲಿ ಅವನಿಗೆ ಕಾಲೇಜು, ಕ್ಲಾಸ್‌ಗಿಂತ ಹೊಟ್ಟೆ ತುಂಬಾ ಊಟಾ ಮಾಡುವುದೇ ಜಾಸ್ತಿ ಖಾಯಿಶು. ಯಾವ ಹೋಟೆಲ್‌ನಲ್ಲಿ ದೋಸೆ ಬೆಸ್ಟು, ಎಲ್ಲಿ ಕೂರ್ಮಾ, ಬಿರಿಯಾನಿ ಮಜಬೂತಾಗಿರುತ್ತದೆ ಎಂದು ಲಿಸ್ಟ್ ಇಟ್ಟಿದ್ದ. ನಾನು ಹೇಳಿದ ಅಯ್ಯಾ ಸಾಹೇಬ ನೀನು ಹಾಡಿದರೆ ವಿದ್ವಾನ್ ಹೋಗಿ ಅದ್ವಾನ್ ಆಗುತ್ತೆ, ಸುಮ್ಮನೆ ಸಂಗೀತ ಕಿವಿಯಲ್ಲಿ ಕೇಳಿಸುಕೋ ಸಾಕು ಎಂದೆ. ಆದರೆ ಬಿಡುವಲ್ಲ ಮಿತ್ರ. ನನಗೆ ಒಳ್ಳೆಯ ಹಾಡಿನ ಮೇಷ್ಟ್ರು ಪರಿಚಯ ಮಾಡಿಕೊಡು, ಸ್ವಲ್ಪ ಸ್ವಲ್ಪ ಬರುತ್ತೆ ನಾನೇ ಮೇಷ್ಟ್ರ ಮುಂದೆ ಹೇಳಿ ನನ್ನನ್ನು ಶಿಷ್ಯನಾಗಿ ತೆಗೆದುಕೊಳ್ಳುವ ಹಾಗೆ ಒಪ್ಪಿಸುತ್ತೇನೆ, ನಿನಗೆ ಯಾಕೆ ಎಂದ.

ಸರಿ, ಸಂಗೀತದ ಮೇಷ್ಟ್ರು ರಾಮಚಾರ್ ಮನೆಗೆ ಕರೆದುಕೊಂಡು ಹೋಗಿ ಪರಿಚಯ ಮಾಡಿಕೊಟ್ಟೆ; ರಾಮಾಚಾರರು ಅವನ ಆಕಾರ, ವಯಸ್ಸು, ವೇಷ ನೋಡಿ ನಾನು ಬರೀ ಸಂಗೀತ ಜ್ಞಾನ ಇರುವವರನ್ನೇ ತೆಗೆದುಕೊಳ್ಳುವುದು, ಜೊತೆಗೆ ಆರು ತಿಂಗಳಲ್ಲೇ ಜೂನಿಯರ್ ಪರೀಕ್ಷೆ ಮಾಡಬೇಕು, ಇಲ್ಲದಿದ್ದರೆ ಮುಂದಕ್ಕೆ

ತೆಗೋಳೂದಿಲ್ಲ ಅಂದರು.

ಸಾಹೇಬ ಹೇಳಿದ, ನಾನು ಕೊಂಚ, ಕೊಂಚ ಕಲಿತಿದ್ದೇನೆ, ಸಂಗೀತ ಜ್ಞಾನ ಇದೆ, ಹೇಳುತ್ತೀನಿ ಕೇಳಿ ಎಂದು ಶುರು ಮಾಡಿದ ಸಾಹಿತ್ಯ. ''ಕ್ರಿಷ್ಣ ನ್ನೀ ಬೆಗನೇ ಬರ್ರ್ರೋ'' ಅಂತಾ ಜೋರಾಗಿ ಕೈಯಾಡಿಸಿಕೊಂಡು ಬೈಲಹೊಂಗಲ್ ದಂಡೇಲಿ ಬಸ್ ಕಂಡಕ್ಟರ್ ತರ ಅರಚಿದ.

ಯಾಕೋ, ರಾಮಾಚಾರರು ತಲೆ ತಗ್ಗಿಸಿದರು. ನನ್ನನ್ನು ಹತ್ತಿರ ಕರೆದು ಕಿವಿಯಲ್ಲೆ ಹೇಳಿದರು, ಈತ ಹೀಗೆ ಮುಂದಕ್ಕೂ ಹಾಡಿದರೆ ಹಳೇ ಕಾಲದ ಇಂಜಿನಿಯರುಗಳು ಗಟ್ಟಿಯಾಗಿ ಕಟ್ಟಿದ ಸೇತುವೆಗಳೂ ಬಿದ್ದುಹೋಗುತ್ತವೆ. ನಿನಗೆ ಹಾಡು ಬೇಡ ಎಂದರು. ಬೋಂಡಾ ಸಾಹೇಬ ನಮ್ಮ ಪಿಸುಗುಟ್ಟಾಟ ಕೇಳಿ ಕೀರ್ತನೆ ಬೇಡವಾದರೆ, ಸ್ವರಜಿತ ಹೇಳ್ತೀನಿ ಕೇಳಿ ಅಂತಾ ''ಸಗ್ಗ ಸಗ್ಗ ಮಗರ್ರಿಗ ನಿರ್ರಿ ನಿರ್ರಿ, ನಿರ್ರೀ ಗರಿಸನಿ'' ಅಂತಾ ಶುರು ಮಾಡಿದ. ರಾಮಾಚಾರರು ಕಿವಿಯ ಮೇಲೆ ಕೈಮುಚ್ಚಿಕೊಂಡು ಕೇಳಿದರು; ಏನಪ್ಪಾ ನಿಮ್ಮ ಮನೆಯಲ್ಲಿ ಯಾರಾದ್ರೂ ಪೋಲೀಸ್ ಇಲಾಖೆಯಲ್ಲಿ ಡ್ರಿಲ್ ಮಾಸ್ಟ್ರು ಇದ್ದಾರಾ ಅಂತ.

ಅದು ಹೆಂಗಾ ಕಂಡುಹಿಡಿದ್ರಿ ಸಾಹೇಬ್ರಾ ಅಂತಾ ಆಶ್ಚರ್ಯಪಟ್ಟ ಸಾಹೇಬ. ಭಲೋ ಪತ್ತೆ ಹಚ್ಚಿದ್ದೀರಾ ಗುರುಗಳೇ, ಅದು ಹ್ಯಾಂಗ?

ನಿಮ್ಮ ಸಾಹಿತ್ಯ ಸ್ಪಷ್ಟ, ಕುಟ್ಟಿ ತಟ್ಟುವ ತಾಳಗಳ ಜೋರು ಕೇಳಿ ಹಾಗೆ ಅನ್ನಿಸಿತು ಅಂದರು. ಈಗಲೇ ನನ್ನನ್ನು ಗುರುಗಳೇ ಅಂತಾ ಕರೆಯಬೇಡಾ. ನಿನಗೆ ಅಷ್ಟು ಸಂಗೀತ ಕಲಿಯಬೇಕು ಅಂತಾ ಇದ್ದರೆ ನಾನು ಬೇರೊಬ್ಬ ತಬಲಾ ಮೇಸ್ಟರೋ ಅಥವಾ ಖಂಜಿರಾ ಮೇಷ್ಟ್ರ ಹತ್ತಿರ ಹೇಳಿಸುತ್ತೇನೆ. ವೋಕಲ್ ಬೇಡ ಅಂದರು.

ಸಾಹೇಬ ಬಿಡುವಲ್ಲ, ಅವನಿಗೆ ವೋಕಲ್ ಬೇಕು. ಕೇಳಿದ ಅಮೇರಿಕನ್ ಹಿಗಿನ್ಸ್ ಕನ್ನಡ ಹಾಡು ಹೇಳುವಾಗ ನಾನು ಕನ್ನಡಿಗ ಯಾಕೆ ಹೇಳಬಾರದು ಅವನಿಗಿಂತ ಜಾಸ್ತಿ ಸ್ಫುಟವಾಗಿ ಹೇಳ್ತೀನಿ ಅಂದ.

ನಾನು ಹೇಳ್ದೆ, ಕನ್ನಡ ಭಾಷೆಯ ಮೇಲೆ ಇಷ್ಟು ವ್ಯಾಮೋಹ ಇಟ್ಟುಕೊಂಡಿದ್ದಾನೆ, ಶಿಷ್ಯನಾಗಿ ಸೇರಿಸಿಕೊಂಡು ಪ್ರಯತ್ನ ಮಾಡಿ ಅಂತಾ. ಅವನು ನೀವು ಹೇಳಿದ ಹಾಗೆ ಅಭ್ಯಾಸ ಮಾಡಿ ಆರು ತಿಂಗಳಲ್ಲಿ ಜೂನಿಯರ್ ಪಾಸ್ ಮಾಡದಿದ್ದಲ್ಲಿ ನಾನೇ ಅವನನ್ನು ಪ್ರತಿ ಮಳೆಗಾಲವೂ, ಕುಸಿದು ಬೀಳುತ್ತಿರುವ ಅಣೆಕಟ್ಟು, ಗೌರ್ನಮೆಂಟ್ ಕ್ವಾರ್ಟಸ್, ಕಟ್ಟೋ ಕೆಲಸಕ್ಕೆ ಸೇರಿಸುತ್ತೇನೆ ಬಾಯ್ಮುಚ್ಕೊಂಡು ಅದೇ ಅಣೆಕಟ್ಟು, ಕ್ವಾರ್ಟಸ್ಸನ್ ಪುನಃ ಪುನಃ ಕಟ್ಕೊಕ್ಕೆಂತ.

ಸರಿ ಮೇಸ್ಟ್ರು, ಸಾಹೇಬನು ಇದನ್ನೇ ಛಾಲೆಂಜ್ ಆಗಿ ತಗೆದುಕೊಂಡು ವಾರಕ್ಕೆರಡು ಕ್ಲಾಸ್ ಶುರು ಮಾಡಿದರು. ಪ್ರತಿನಿತ್ಯ ಸಂಗೀತಾಭ್ಯಾಸ ಬೋಂಡಾ ಸಾಹೇಬನಿಗೂ, ಹಾಸ್ಟೆಲ್‌ನಲ್ಲಿ ಯಾರಿಗೂ ನಿದ್ದೆಯಿಲ್ಲ. ಪರೀಕ್ಷೆ ಟೈಂನಲ್ಲಿ ಬರುವ

ಜಾಸ್ತಿ ನಿದ್ದೆಗೂ ಅವಕಾಶ ಸಿಗಲಿಲ್ಲ. ಅಂದರೆ ಒಂದು ಒಳ್ಳೆಯದಾಯ್ತು; ಪ್ರತಿ ರಾತ್ರಿ ಬರುತ್ತಿದ್ದ ಬೀದಿ ನಾಯಿ ತಂಡದ ಸಾಮೂಹಿಕ ಕೂಗಾಟ ನಿಂತುಹೋಯ್ತು, ಹಾಸ್ಟೆಲ್‌ನ ಎಲ್ಲಾ ವಿದ್ಯಾರ್ಥಿಗಳು ಇವನಿಗೆ ಉತ್ಸಾಹ, ಪ್ರೋತ್ಸಾಹ ಕೊಟ್ಟಿದ್ದೇ ಕೊಟ್ಟಿದ್ದು. ತಮ್ಮ ಸೆಮಿಸ್ಟರ್ ಪರೀಕ್ಷೆ ಹೋದರೂ ಚಿಂತೆಯಿಲ್ಲ, ಇವನ ಜೂನಿಯರ್ ಹಾಡು ಪರೀಕ್ಷೆ ಪಾಸು ಮಾಡಿದರೆ ಹಾಸ್ಟೆಲ್‌ಗೇ ಕೀರ್ತಿ ಅಂತಾ.

ಒಬ್ಬ ಹೇಳ್ದ, ಬೀಡಾ ಹಾಕ್ಕಿಕೋ ಗಂಟಲು ಬಿಟ್ಕೊಳ್ಳುತ್ತೆ, ಜೋರಾಗಿ ಹಾಡ್ಬಹುದು ಅಂತಾ. ಇನ್ನೊಬ್ಬ ಹೇಳ್ದ ಕಾಫೀ, ಟೀ ಎಲ್ಲಾ ಬಿಟ್ಬಿಡು, ಬರೀ ಸೋಡಾ ಕುಡಿ ಅಂತಾ. ಮತ್ತೊಬ್ಬ ಹೇಳಿದ ನಾನ್ ವೆಜಿಟೇರಿಯನ್ ಮಾತ್ರ ತಿನ್ನೇಡ, ಬರೀ ಸೊಪ್ಸಾರು ತೊಗೋ, ನಾಲಗೆ ಚೆನ್ನಾಗಿ ನೊಳೆಯುತ್ತದೆ ಅಂತಾ. ಸಾಹೇಬನಿಗೆ ಬಂತು ಪೀಕ್ಲಾಟ. ದೋಸೆ, ಕೂರ್ಮಾ, ಬಿರಿಯಾನಿ ಮೇಲೆ ಪ್ರತಿನಿತ್ಯದ ಗೀಳು. ಆದ್ರೂ ಪಾಸ್ ಮಾಡ್ಲೇಬೇಕು ಅಂಬ ಜಿದ್ದಿನಿಂದ, ಬರೀ ಬೀಡಾ - ಸೋಡಾದಲ್ಲೇ ಇದ್ದ; ಪರೀಕ್ಷೆ ದಿವ್ಸದ ತನಕ. ಪರೀಕ್ಷೆ ಹತ್ತಿರ ಬರುತ್ತಾ ಹೊಟ್ಟೆ ಚಪಲ ಜೋರಾಗಿತ್ತು, ರೇಗುವುದು ಜಾಸ್ತಿಯಾಗಿತ್ತು, ತಾಳಲಾರದ ಬಯಕೆಗೆ.

ಬಂತು ಪರೀಕ್ಷೆ ದಿವ್ಸ. ಪರೀಕ್ಷೆ ಹಾಲ್ ಮಾರ್ಕೆಟ್ ಬಳಿ ಇದ್ದ ಹೈಸ್ಕೂಲ್‌ನಲ್ಲಿ, ಪಕ್ಕದಲ್ಲೇ ಇದ್ದ ನ್ಯೂ ಗೌಸಿಯಾ ಹೋಟೆಲ್ ಗುರುತು ಸಾಹೇಬನಿಗೆ ಹಳೆಯ ಪರಿಚಯ - ಬೆಸ್ಟ್ ಕೂರ್ಮ, ಬಿರಿಯಾನಿ ಅಂತ ಆಗಾಗ್ಗೆ ಹೇಳುತ್ತಿದ್ದ.

ಪರೀಕ್ಷೆ ಬೆಳಿಗ್ಗೆ ಕಾಫಿ ಕುಡಿಬೇಡ, ತಿಂಡಿ ತಿನ್ನಬೇಡ, ಗಂಟ್ಲು ಕಟ್ಟಿಬಿಡುತ್ತೆ ಅಂತಾ ಅಟ್ಟಿದರು ಸ್ನೇಹಿತರು ಸಾಹೇಬನನ್ನು, ಬರೀ ಹೊಟ್ಟೆಯಲ್ಲಿ ಒಂಬತ್ತು ಗಂಟೆ ಪರೀಕ್ಷೆಗೆ.

ಗಂಟೆ ಹತ್ತಾಯ್ತು, ಹನ್ನೊಂದಾಯ್ತು, ಹನ್ನೆರಡು ಗಂಟೆಗೂ ಇವನನ್ನು ಕರೆಯಲೇ ಇಲ್ಲ. ಎಲ್ಲಾ ಚಿಕ್ಕ ಮಕ್ಕಳನ್ನೂ ಮೊದಲು, ಮೊದಲು ಕರೆಸಿದರೆ, ಮಕ್ಕಳು ಹಸಿವು ತಡೆಯುವುದಿಲ್ಲ ಅಂತಾ ಹೇಳಿ. ಹನ್ನೆರಡು ಗಂಟೆಗೆ ಪಕ್ಕದ ನ್ಯೂ ಗೌಸಿಯಾ ಹೋಟೆಲಿನ ಕೂರ್ಮ ಬಿರಿಯಾನಿಯ ಕಂಪು ಬಾಯಲ್ಲೆ ನೀರೂರುತ್ತಿತ್ತು. ಕಡೆಗೂ ಒಂದು ಗಂಟೆಗೆ ಕರೆಯುವ ವೇಳೆಗೆ ಹೊಟ್ಟೆ ಮೂರನೇ ಕಾಲ ತಾಳ ಹಾಕ್ತಿತ್ತು. ರೋಷ ಏರಿತ್ತು. ಪರೀಕ್ಷಕರಲ್ಲಿ ಒಬ್ರು ವಯಸ್ಸಾದ ವೈದ್ಧಿಕ ವಿದ್ವಾಂಸರು ಇನ್ನೊಬ್ಬರು ಮೇಡಂ ಪ್ರಖ್ಯಾತ ಕಲಾವಿದರು. ಪರೀಕ್ಷಕರು ಹೇಳಿದರು, ಒಂದು ನುಡಿ ನೆರವಲ್ ಹೇಳಪ್ಪ ಅಂದರು. ಶುರು ಮಾಡಿದ ಸಾಹೇಬ ''ಕುರ್ಮಾ, ಕುರಿ, ಕುರ್ಮಾ ಕುರಿ, ಶಂಕರಿ, ಕುರ್ಮಾ ಕುರಿ, ಕುರ್ಮಾ ಕುರಿ, ಕುರ್ಮಾ ಕುರಿ'' ಅಂತ ನೀಡಲ್ ಸ್ಟ್ರಕ್ಟ್ ಆದ ರೆಕಾರ್ಡ್ ತರಹ ಬಾಯಿ ಚಪ್ಪರಿಸಿಕೊಂಡು ಹೇಳಿದ. ಪರೀಕ್ಷಕರು ಕಿವಿ ಮುಚ್ಚಿಕೊಂಡು ಶಿವ, ಶಿವಾ ಅಂದರು; ಮೇಡಂ ಪರೀಕ್ಷಕರು ಸರಿ ಬೇಡ ಒಂದು ಸ್ವರ ಹಾಕೆಂದ್ರು. ಸಾಹೇಬನಿಗೆ ಹಸಿವಿನ ಜೊತೆಗೆ ಇವರ ವರ್ತನೆ ನೋಡಿ ಬಹಳ ರೇಗಿತು. ಮೇಡಂ ಮೊಖಕ್ಕೆ ಕೈ ತೋರಿಸ್ಕೊಂಡು ಹೇಳಿದ ''ದಪ್ಪಾ ದಪ್ಪಾ, ನೀದಪ್ಪ, ನಿಮ್ಮ

ಅಮ್ಮ ದಪ್ಪ, ನಿಮ್ಮ ಅಪ್ಪ ದಪ್ಪ, ನೀದಪ್ಪ'' ಅಂತಾ. ಇಬ್ಬರು ಪರೀಕ್ಷಕರು ತಬ್ಬಿಬ್ಬಾಗಿ, ನಿನ್ನನ್ನು ಗ್ಯಾರಂಟಿ ಫೇಲ್ ಮಾಡಿಸ್ತೀನಿ ಅಂತಂದ್ರು. ಅದು ಕೇಳಿ ರೋಷ ಗಗನಕ್ಕೇರಿತು ಸಾಹೇಬನಿಗೆ. ಬಿಡಲೇ ಇಲ್ಲ. ಪರೀಕ್ಷಕರು ಎದ್ದು ಹೋದರೂ ಹೇಳ್ತಾನೇ ಇದ್ದ ಅವರ ಬೆನ್ನು ಹತ್ತಿ... ನೀ ದಪ್ಪ, ನಿಮ್ಮ ಅಮ್ಮ ದಪ್ಪ, ನಿಮ್ಮಪ್ಪ ದಪ್ಪ, ನೀವು ಇನ್ನೂ ದಪ್ಪ.....''




ನಮ್ಮ ಸಂಪಾದನೇಗೂ
ಟ್ಯಾಕ್ಸ್ ಆಕ್ತಾರಂತಲ್ಲಾ
ಗುರೂ!

ಹತ್ತೊಂಭತ್ತನೆಯ ಶತಮಾನದ ಪಂಚ್

ಮೊನ್ನೆ ನಮ್ಮ ಮನೆಯ ಲೈಬ್ರರಿಯಲ್ಲಿ ಏನೋ ಹುಡುಕುತ್ತಿದ್ದಾಗ ಒಂದು ಹಳೇ ಬೌಂಡ್ ಪುಸ್ತಕ ಕಣ್ಣಿಗೆ ಬಿತ್ತು. ಕುತೂಹಲದಿಂದ ತೆರೆದು ನೋಡಿದೆ. ೧೮೮೨ನೇ ಇಸವಿಯ ಪಂಚ್ ಪತ್ರಿಕೆಗಳನ್ನೆಲ್ಲಾ ಒಟ್ಟುಗೂಡಿಸಿ ಅಟ್ಟೆ ಹಾಕಿದ್ದ ಪುಸ್ತಕ. ಇಂದಿಗೆ ನೂರಪದಿನಾರು ವರ್ಷಗಳಷ್ಟು ಹಿಂದೆ ಇಂಗ್ಲೆಂಡಿನ ಜನಜೀವನ ಹೇಗಿತ್ತು ಎಂದು ತಿಳಿಯಲು ಯಾರಿಗೆ ಆಸಕ್ತಿ ಇರುಲ್ಲ ಹೇಳಿ. ಮೊಟ್ಟಮೊದಲು ಕಣ್ಣಿಗೆ ಬಿದ್ದದ್ದು ಕ್ರಿಕೆಟ್ ಕುರಿತ ಕಾರ್ಟೂನ್‌ಗಳು. ಕ್ರಿಕೆಟ್ ಆಟದಲ್ಲಿ ಬಳಕೆಯಲ್ಲಿರುವ ಮಾತುಗಳಿಗೆ ಚಿತ್ರಕಾರ ತನ್ನದೇ ಆದ ಅರ್ಥ ಕಲ್ಪಿಸಿದ್ದ ರೀತಿ ತಮಾಷೆಯಾಗಿತ್ತು. ಅಪರಂಜಿ ಓದುಗರ ಖುಷಿಗಾಗಿ ಆ ವ್ಯಂಗ್ಯಚಿತ್ರಗಳನ್ನು ಸ್ಕ್ಯಾನ್ ಮಾಡಿ ಕೆಳಗೆ ಕೊಟ್ಟಿದ್ದೇನೆ. ಕನ್ನಡ ಕ್ಯಾಪ್ಷನ್‌ಗಳ ಅಗತ್ಯವಿಲ್ಲ ಎಂದು ನನ್ನ ಅನಿಸಿಕೆ.


ong Leg & Short Leg



A Drive to the Pavillion


Run Out


A Clean Bowl.


A Maiden Over ...?


Caught Out.



ಓಟಿನಬ್ಬರ ತಣ್ಣಗಾಯಿತು, ಜನತೆ ಪಾಳ್ಯಕೆ ಮರಳಿತು

ದೆಹಲಿ - ಸಿಮ್ಲಾಗಳಲ್ಲಿ

- ಸೂರಿ ಹಾರ್ದಳ್ಳಿ

'ಇಷ್ಟು ದೂರ ಬಂದಮೇಲೆ ತಾಜಮಹಲ್ ನೋಡದಿದ್ರೆ ಹೇಗೆ? ತನ್ನ ಹೆಂಡತಿ ಮಮ್ತಾಜ್ ಸತ್ತುಹೋದ ಸಂತೋಷಕ್ಕೆ ಷಹಾಜಹಾನ್ ಕಟ್ಟಿದ ಆ ಬಿಲ್ಡಿಂಗನ್ನು ನೋಡಲೇಬೇಕು. ಆ ಷಹಜಹಾನನ ಭಾಗ್ಯ ಯಾರಿಗುಂಟು ಯಾರಿಗಿಲ್ಲ! ಗಂಡ ಬದುಕಿರುವಾಗಲೇ ಸತ್ತು ಸ್ವರ್ಗ ಸೇರಿದ ಆ ಮಮ್ತಾಜಳನ್ನು ನೋಡಿ ಕಲಿತುಕೋಬೇಕು ನಮ್ಮ ಹೆಂಡಂದಿರು', ಸುರೇಶ ಹೇಳಿದ. ಯಾಕೆಂದರೆ ಅವನ ಹೆಂಡತಿ ಅವನ ಜೊತೆಗಿರಲಿಲ್ಲ. ಆದರೆ ಇತರ ಗಂಡಸರು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಯಾಕೆಂದರೆ ಅವರ ಹೆಂಡಂದಿರು ಅವರ ಮೇಲೆ ಹದ್ದಿನ ಕಣ್ಣಿಟ್ಟಿದ್ದರು. ಅವರು, ಮೂವತ್ತ ಐದು ಜನ ಪ್ರವಾಸಿಗರು ಒಂದು ದಿನ ಮೊದಲೇ ಬೆಂಗಳೂರನ್ನು ಬಿಟ್ಟಿದ್ದರು. ದೆಹಲಿಯ ತನಕ ರೈಲು ಪ್ರಯಾಣ, ಅಲ್ಲಿಂದ ಮುಂದೆ ಕುಲು, ಮನಾಲಿ, ಸಿಮ್ಲಾ, ರೊಹಟಂಗ್ ಪಾಸ್, ಚಂಡಿಗಡಗಳಿಗೆ ಬಸ್ಸಿನಲ್ಲಿ ಪ್ರಯಾಣ. ಮೇಸ್ತ್ರಿ ಟ್ರಾವೆಲ್ಸ್ ಏರ್ಪಡಿಸಿದ್ದ ಪ್ರವಾಸ ಅದು.

ಸುರೇಶ ಮತ್ತೆ ಹೇಳಿದ, 'ಆಗ್ರಾದಲ್ಲಿ ಇಳಿದುಬಿಟ್ಟು ತಾಜಮಹಲ್ ನೋಡಿಕೊಂಡು, ಪುನಃ ಇಲ್ಲಿಗೇ ಬಂದು, ಮುಂದಿನ ಟ್ರೇನ್ ಹತ್ತಿ ಹೋದರಾಯಿತು. ಐದು ನೂರಕ್ಕಿಂತ ಹೆಚ್ಚು ದೂರ ಪ್ರಯಾಣ ಮಾಡುವವರು ಮಧ್ಯೆ ಬ್ರೇಕ್ ತೆಗೆದುಕೊಳ್ಳಬಹುದು. ಅಂದರೆ ಪುನಃ ಟಿಕೆಟ್ ತೆಗೆದುಕೊಳ್ಳಬೇಕಿಲ್ಲ. ಇಲ್ಲಿಂದ ಇನ್ನೂರು ಕಿಲೋಮೀಟರ್ ದೂರ ದೆಹಲಿ. ನಾಲ್ಕು - ನಾಲ್ಕೂವರೆ ಗಂಟೆಯ ಪ್ರಯಾಣ', ಅಂತ. ಶಾಮಣ್ಣ ಕಮಕ್ ಕಿಮಕ್ ಅನ್ನಲಿಲ್ಲ. ಅವರ ಹೊಟ್ಟೆಯಲ್ಲಿ ಇನ್ನೊಂದು ರೈಲು ಓಡುತ್ತಿತ್ತು. ಬೆಳಿಗ್ಗೆ ರೈಲಿನ ಕ್ಯಾಂಟೀನಿನ ಕಲಗಚ್ಚಿನಂತಹ ಕಾಫಿ ಕುಡಿದಿದ್ದರು. ಬಾಯಿ ಕೆಟ್ಟುಹೋಗಿ, ಇದೆಂಥ ಪಿಂಡ ಇದು. ನನ್ನ ಕರ್ಮ ಎಂದು ಬೈದುಕೊಂಡವರು ಮತ್ತೆ ಒಂದು ಲೋಟ ಚಹಾ ತರಿಸಿದ್ದರು. ಎರಡರ ರುಚಿಯೂ ಒಂದೇ ರೀತಿ ಇದ್ದುದರಿಂದ ತಲೆ ಕೆಟ್ಟುಹೋಗಿ, 'ಅವ ಕೊಟ್ಟದ್ದೇ ಕಾಪಿಯ ಅಲ್ಲಾ ಎರಡೂ ಇಪ್ಪದೇ ಹಾಂಗಾ? ಅವ ಬೊಜ್ಜ, ಮೂರು ರೂಪಾಯಿ ತಗೊಂತೊ.... ಒಳ್ಳೆ ಕಾಪಿ ಕೊಡುಕೆ ಆತ್ತಿಲ್ಲೆಯಾ?' ಎಂದು ಶಪಿಸಿದ್ದರು. ಬಳೇಪೇಟೆಯ ಹೋಟೆಲೊಂದರ ಮಾಲಿಕ ಶಾಮಣ್ಣನವರು ಎಲ್ಲಿ ತನ್ನ ಹೊಟ್ಟೆ ಕೆಟ್ಟು ಲೂಸ್ ಮೋಶನ್ ಶುರುವಾಗುತ್ತೋ ಎಂದು ಹೆಸರಿದ್ದರು. ರೈಲಿನ ನಲ್ಲಿಯಲ್ಲಿ ನೀರು ಬಂದರೆ ಬಂತು, ಇಲ್ಲದಿದ್ದರೆ ಇಲ್ಲ. ಬರದೇ ಇದ್ದರೆ ಏನು ಮಾಡುವುದು?

ಅವರು ತನ್ನ ಸಮಸ್ಯೆಯನ್ನು ಇತರರಿಗೆ ಹತ್ತು ಬಾರಿ ಹೇಳಿದರೂ ಯಾರೂ ಅದನ್ನು ದೊಡ್ಡ ವಿಷಯವನ್ನಾಗಿ ಸ್ವೀಕರಿಸಲಿಲ್ಲವಾದ ಕಾರಣ ಮತ್ತಷ್ಟು ಚಿಂತೆಗೊಳಗಾಗಿದ್ದರು.

ಸುರೇಶ ನಿರ್ಧರಿಸಿಯೇ ಬಿಟ್ಟಿದ್ದ. ಹೇಗಾದರೂ ಎಲ್ಲರನ್ನೂ ಕಲೆಹಾಕಿ, ತಾಜಮಹಲ್ ನೋಡಿಕೊಂಡೇ ಹೋಗಬೇಕೆಂದು. ಮೊದಲು ಎಲ್ಲರನ್ನೂ ಒಪ್ಪಿಸಬೇಕಿತ್ತು.

ರೈಲು ಸುಮಾರು ಒಂದು ಕಿಲೋಮೀಟರ್ ಉದ್ದವಿತ್ತು. ಎಲ್ಲಾ ರೀತಿಯ ಭಾಷೆಗಳ, ಬಟ್ಟೆ ಬರೆಗಳ, ಸಂಸ್ಕೃತಿಗಳ ಜನರು ತುಂಬಿದ್ದರು. ಕೆಲವರು ಇಸ್ಪೀಟು ಆಡುತ್ತಿದ್ದರೆ, ಕೆಲವರು ನಿದ್ರಿಸುತ್ತಿದ್ದರು. ಇನ್ನೂ ಕೆಲವರು ಬರೀ ತಿನ್ನುವುದರಲ್ಲಿಯೇ ನಿರತರಾಗಿದ್ದರು. ಈ ಕಡೆಯಿಂದ ಆ ಕಡೆಗೆ ಸಾಗಲು ಒಂದು ಗಂಟೆ ನಡೆಯಬೇಕಾಗುತ್ತದೆ. ರೈಲಿನ ತುಂಬಾ ಭಿಕ್ಷುಕರು, ಮಾರಾಟಗಾರರು, ನಿಂತು ಪ್ರಯಾಣಿಸುವವರು, ಇವರೇ ತುಂಬಿದ್ದರಿಂದ ಅವರ ನಡುವೆ ನುಸುಳುವುದು ಸುಲಭಸಾಧ್ಯವಲ್ಲ. ಮೂವತ್ತೈದು ಜನ ಪ್ರಯಾಣಿಕರು ಎಲ್ಲೆಡೆ ಚದುರಿದ್ದರು. ಅವರನ್ನೆಲ್ಲಾ ಒಪ್ಪಿಸುವುದು ಸುಲಭದ ಕೆಲಸವಲ್ಲ. ಆದರೂ ಸುರೇಶ ಅನುವಾಗಿದ್ದ.

ಕೊನೆಗೆ ಶಾಮಣ್ಣ ಒಂದು ರಾಗ ಎಳೆದರು, ಸುಮಾರು ದಿನಗಳೇ ಆದಂತೆ ಅನಿಸಿದೆ, ಊಟ ಮಾಡದೇ. ಅಲೆಲ್ಲಾ ಸುತ್ತುವ ಶಕ್ತಿ ನನಗಿಲ್ಲ. ದೆಹಲಿಗೆ ಹೋಗಿ, ಹೊಟ್ಟೆಗಿಷ್ಟು ಅನ್ನ-ಸಾರು ಸರುದುಕೊಂಡರೇನೇ ತನಗೆ ಹಿತವಾಗುವುದು, ಅಂತ.

ಪಾಪ, ಬೆಳಿಗ್ಗೆ ಎದ್ದವರು ಒಂದು ಲೋಟ ಬಿಸಿಬಿಸಿ ಸ್ಟ್ರಾಂಗ್ ಕಾಫಿ ಕುಡಿಯದೇ ರಾಘವೇಂದ್ರನಿಗೆ ಊದಿನ ಕಡ್ಡಿಯನ್ನು ಕೂಡಾ ಹಚ್ಚುವಷ್ಟು ತಾಕತ್ತಿರುವುದಿಲ್ಲ ಅವರಿಗೆ. ಆ ಸರ್ವಶಕ್ತ ಭಗವಂತನು ಮನುಷ್ಯ ಜಾತಿಗೆ ಕೊಟ್ಟ ಒಂದು ಅತ್ಯುತ್ತಮ ವರ ಅಂದರೆ ಬೀಜದ ಕಷಾಯ ಅರ್ಥಾತ್ ಕಾಫಿ. ಈ ದರಿದ್ರ ಕಾಫಿಯಿಂದಾಗಿ ಅವರ ನಾಲಗೆ ಚಮಚಮ ಅನ್ನುತ್ತಿತ್ತು. ಅದೇನು ಕಾಫಿಯೋ ಪಿಂಡವೋ ಎಂದು ಪದೇ ಪದೇ ಹೇಳಿ ಮನಸ್ಸಿಗೆ ಸಮಾಧಾನ ಮಾಡಿಕೊಂಡಿದ್ದರು.

ರೈಲು ಈಗಾಗಲೇ ಎರಡು ಗಂಟೆ ತಡ ಎಂದು ಹೇಳಿದ ಟಿ.ಟಿ.ಇ. ಇದನ್ನು ತಿಳಿದ ಸಾವಿರಾರು ಜನ ಪ್ರಯಾಣಿಕರು ಇಡೀ ರೈಲು ಇಲಾಖೆಗೇ ಶಾಪ ಹಾಕಿದರು. ಭಾರತದ ರೈಲು ಗಾಡಿಗಳೇ ಹಾಗೆ, ಸಮಯ ಪ್ರಜ್ಞೆ ಇಲ್ಲವೇ ಇಲ್ಲ ಎಂದು ಗೊಣಗಿದರು.

ಪ್ರಶ್ನೆ ಬರುವುದು ಇಲ್ಲಿ. ನಿಗದಿತ ವೇಳೆಯನ್ನು ಪ್ರಚುರಪಡಿಸಿದ್ದರಿಂದ ಮಾತ್ರ ಈ ಅಸಹನೆ. ಇಲ್ಲವಾಗಿದ್ದರೆ? ರೈಲಿನ ಸಮಯಕ್ಕೆ ಸಂಬಂಧಿಸಿದ ಜೋಕುಗಳು ಇಲ್ಲಿ ಪ್ರಸ್ತುತ.

ಒಬ್ಬ ಅಧಿಕಪ್ರಸಂಗಿ ರೈಲು ಅಧಿಕಾರಿಯೊಬ್ಬನನ್ನು ಕೇಳಿದನಂತೆ, 'ಅಲ್ಲಸ್ವಾಮಿ, ಈ ರೈಲುಗಳು ಸಮಯಕ್ಕೆ ಸರಿಯಾಗಿ ಬರೋದೇ ಇಲ್ಲ. ಹಾಗಿದ್ದಮೇಲೆ ಟೈಂ ಟೇಬಲ್ ಹಾಕೋದಾದರೂ ಯಾಕೆ?' ಅಂತ.

'ಅಲ್ಲಸ್ವಾಮಿ, ಎಷ್ಟು ತಡ ಅಂತ ಗೊತ್ತಾಗೋದು ಬೇಡವೇ' ಅಂದನಂತೆ ಆ

ಅಧಿಕಾರಿ.

ಇನ್ನೊಂದು ಸಂದರ್ಭ. ಒಂದು ರೈಲು ನಿಲ್ದಾಣದಲ್ಲಿ ನಾಲ್ಕು ಗಡಿಯಾರಗಳಿದ್ದವಂತೆ, ಆ ನಾಲ್ಕೂ ಬೇರೆ ಬೇರೆ ಸಮಯವನ್ನು ತೋರಿಸುತ್ತಿದ್ದವಂತೆ. ಯಾರೋ ಒಬ್ಬ ಸೀದಾ ಸ್ಟೇಷನ್ ಮಾಸ್ಟರ ಹತ್ತಿರ ಹೋಗಿ ಇದು ಯಾಕೆ ಎಂದು ಕೇಳಿದನಂತೆ.

'ಈ ಕಾಲದಲ್ಲಿ ಯಾವ ಗಡಿಯಾರವನ್ನೂ ನಂಬೋಕೆ ಆಗೊಲ್ಲ ಸ್ವಾಮಿ, ಒಂದು ಮುಂದೆ ಹೋಗುತ್ತೆ, ಒಂದು ಹಿಂದಿರುತ್ತೆ. ಮತ್ತೊಂದು ನಿಂತಿರುತ್ತೆ. ಮೂರೂ ಕೆಟ್ಟರೆ ನಾಲ್ಕರಲ್ಲಿ ಒಂದಾದರೂ ಸರಿಯಾಗಿ ಸಮಯ ತೋರಿಸಲಿ ಎಂದು ನಾಲ್ಕು ಹಾಕಿದ್ದೇವೆ' ಎಂದರಂತೆ ಸ್ಟೇಷನ್ ಮಾಸ್ಟರರು.

ಸರಿಯೇ? ನೀವೇನೆನ್ನುತ್ತೀರಿ?

★★★

ಸುರೇಶ ಮಕ್ಕಿತ್ತಾಯರಿಗೆ ತನ್ನ ನಿರ್ಧಾರವನ್ನು ವಿವರಿಸುವ ಮೊದಲೇ ಅವರು ಅದಾವುದನ್ನೂ ಕೇಳಲು ನಾವು ಸಿದ್ಧರಿಲ್ಲವೆಂಬಂತೆ ಮುಖ ಊದಿಸಿಕೊಂಡು ಕುಳಿತಿದ್ದುದರಿಂದ ಸುರೇಶನ ಕೆಲಸ ಕೋಣನ ಮುಂದೆ ಕಿನ್ನರಿ ಬಾರಿಸಿದಂತಾಯಿತು. 'ನಮ್ಮನ್ನೇನ್ರೀ ಕೇಳ್ತೀರಿ? ನಾವು ಮುದುಕರು. ನಮಗೆ ಏನು ತಿಳಿಯುತ್ತೆ? ನೀವು ಹುಡುಗರು, ಬಿಸಿ ರಕ್ತದವರು ಏನು ಮಾಡ್ತಿರೋ ಮಾಡಿಕೊಳ್ಳಿ' ಎಂದವರೇ ನಿಮಗೂ ತನಗೂ ಏನು ಸಂಬಂಧವೇ ಇಲ್ಲ ಎಂಬಂತೆ ವರ್ತಿಸಿದರು.

ಇಲ್ಲಿಯ ತನಕ ಚೆನ್ನಾಗಿದ್ದವರಿಗೆ ಏನಾಯಿತು ಎಂದು ತಿಳಿಯದೇ ಸುರೇಶ ಗಲಿಬಿಲಿಗೊಂಡ. ನಗುನಗುತ್ತಾ ಮಾತನಾಡುತ್ತಿದ್ದರು, ಹಾಸ್ಯದ ತುಣುಕುಗಳನ್ನು ಹಾರಿಸುತ್ತಿದ್ದರು, ಮಕ್ಕಳೊಡನೆ ಮಕ್ಕಳಾಗಿ ಬೆರೆತಿದ್ದವರು. ಮಾರ್ಗದರ್ಶಿ ಹೊರಡುವ ಮೊದಲೇ ಎಲ್ಲರಿಗೂ ಹೀಗೆಯೇ ತಾಕೀತು ಮಾಡಿದ್ದ. ಮಕ್ಕಿತ್ತಾಯರು 'ಅದೊಂದನ್ನು ಯಾಕೆ ಬಿಟ್ಟಿರಿ, ಹೆಂಗಸರ ಜೊತೆ ಹೆಂಗಸರಾಗಿ ಬೆರೆಯಬೇಕು. ಅವರ ಜೊತೆ ಸೀರೆ - ಆಭರಣ, ಅಡಿಗೆ-ಪಡಿಗೆಗಳ ವಿಷಯ ಮಾತ್ರ ಮಾತನಾಡಬೇಕು. ಅಲ್ಲವೇ?' ಎಂದು ಪ್ರಶ್ನಿಸಿ ಎಲ್ಲರನ್ನೂ ನಗಿಸಿದ್ದರು. ಅಂತವರಿಗೆ ಏನಾಯಿತು?

ಮಕ್ಕಿತ್ತಾಯರು ಖಾಸಗಿ ಕಂಪನಿಯೊಂದರ ಮುಖ್ಯಸ್ಥರು, ವಿಧುರರು, ವಯಸ್ಸು ನಲವತ್ತೈದರ ಅಕ್ಕಪಕ್ಕ. ಎರಡು ಗಂಡು ಮಕ್ಕಳೊಂದಿಗೆ ಬಂದಿದ್ದರು. ಕಂಪನಿಯು ಎಲ್.ಟಿ.ಸಿ. ದೊರಕಿಸಿತ್ತು.

ಮಲಗಿದವರ ತಲೆಗೆ ಡಿಕ್ಕಿ ಹೊಡೆದುಕೊಂಡು, ಹಾದಿಯಲ್ಲಿ ಕುಳಿತವರನ್ನು ತುಳಿದುಕೊಂಡು ಓಡಾಡಿದ್ದು ನಿರರ್ಥಕವಾಯಿತು. ಒಬ್ಬರು ಬರದಿದ್ದರೆ ಒಟ್ಟಿಗೇ ತೆಗೆದುಕೊಂಡ ಟಿಕೇಟಿನ ಗತಿ?

ಮಕ್ಕಿತ್ತಾಯರು ಯಾಕೆ ಸಿಡುಕುತ್ತಿದ್ದರೆಂಬುದು ದೆಹಲಿಯಲ್ಲಿ ಇಳಿದ ಮೇಲೇ

ಗೊತ್ತಾಗಿದ್ದು. ಅದಕ್ಕೆ ಕಾರಣ ಮಿಥಿಲಾ ಎಂಬ ಕಾಲೇಜು ಓದುತ್ತಿರುವ ಇಪ್ಪತ್ತೆರಡರ, ಕೆಂಪು ಕೆಂಪು ದೇಹದ, ಚುರುಕಾಗಿರುವ ಹುಡುಗಿ. ಅವಳೂ ಸಹ ಪ್ರಯಾಣಿಕಳೇ. ನಗುನಗುತ್ತಾ ಅವಳ ಜೊತೆ ಮಾತನಾಡುತ್ತಿದ್ದ ಮಕ್ಕಿತ್ತಾಯರನ್ನು ಆಕೆ ಅಂಕಲ್ ಎಂದು ಕರೆದುಬಿಟ್ಟಳಂತೆ. ತಾನು ಮುದುಕನಾಗಿದ್ದಕ್ಕೆ ಹುಳ್ಳು ಹುಳ್ಳು ಮನಸ್ಸನ್ನು ಮಾಡಿಕೊಂಡರಂತೆ.

ಅದನ್ನು ಆ ಹುಡುಗಿಯೇ ಇತರರಿಗೆ ಆಮೇಲೆ ಹೇಳಿದ್ದು. ಎಲ್ಲರ ಮಾತಿನ ವಿಷಯವಾಗಿದ್ದು.

★★★

ಎಲ್ಲಾ ಹೆಚ್ಚಿನ ನಗರಗಳ ಹಾಗೆ ಮೇಸ್ತ್ರಿ ಟ್ರಾವೆಲ್ಸ್‌ನ ಪ್ರಯಾಣಿಕರನ್ನು ದೆಹಲಿ ಕೂಡಾ ಸ್ವಾಗತಿಸಿದ್ದು ಚರಂಡಿಯ ಕೆಟ್ಟ ವಾಸನೆ ಮತ್ತು ಸ್ಲಮ್‌ಗಳು. ಸಿಕ್ಕಾಪಟ್ಟೆ ಸೆಖೆ ಇದ್ದ ಕಾರಣ ಎಲ್ಲರೂ ಬೆವರಿ ಒದ್ದೆಯಾಗಿದ್ದರು. ಕುಡಿದಷ್ಟೂ ನೀರು ನೀರು ಎಂದು ಮತ್ತಷ್ಟು ಕುಡಿಯಬೇಕಿತ್ತು. ಒಳ ಅಂಗಿಗಳು ದೇಹಕ್ಕೆ ಅಂಟಿಕೊಂಡು ಬೆಂಗಳೂರಿನ ಜನ ಶೀತ ಯಂತ್ರದಿಂದ ಒಲೆಯೊಳಗೆ ಬಿದ್ದಂತೆ ಚಡಪಡಿಸುತ್ತಿದ್ದರು.

ದೆಹಲಿ ಎಲ್ಲಾ ಭಾಷೆಗಳ, ಎಲ್ಲಾ ವೈಪರೀತ್ಯಗಳ, ಎಲ್ಲಾ ರೀತಿಯ ಕಲಸು ಮೇಲೋಗರೆಗಳ ನಗರ, ಸೈಕಲ್, ರಿಕ್ಷಾ, ಕುದುರೆ ಗಾಡಿ, ಬೈಕ್ ವಾಹನಗಳು, ರಿಕ್ಷಾ, ಟ್ಯಾಕ್ಸಿ ಇವೆಲ್ಲವೂ ಸಾರಿಗೆಗೆ ಲಭ್ಯ. ಯಾರೂ ಮೀಟರ್ ಹಾಕುವುದಿಲ್ಲವಾದುದರಿಂದ ಹತ್ತುವ ಮೊದಲು ಚರ್ಚೆ ಮಾಡಬೇಕು. ಐವತ್ತು ರೂಪಾಯಿ ಹೇಳಿದರೆ ಹತ್ತರಿಂದ ನಾವು ಪ್ರಾರಂಭಿಸಬೇಕು. ಇಲ್ಲವಾದರೆ ಟೋಪಿ ಬೀಳುವುದೇ ಜಾಸ್ತಿ.

ಅಲ್ಲಲ್ಲಿ ಪ್ರಿ-ಪೈಡ್ ಟಿ.ಎಸ್.ಆರ್. ಬೂತ್‌ಗಳು ಇದ್ದರೂ ಅವುಗಳ ಎದುರು ಒಂದೇ ಒಂದು ವಾಹನ ನಿಂತಿರುವುದಿಲ್ಲ. ಹಲವಾರು ಹೋಟೆಲುಗಳಿದ್ದರೂ ಇಡ್ಲಿ-ವಡೆ ಮುಂತಾದವುಗಳ ಬೆಲೆ ವಿಪರೀತ. ಚಹಾ ಎರಡು ರೂಪಾಯಿಗೆ ದೊರಕಿದರೆ, ಕಾಫಿಗೆ ಹತ್ತೋ ಹನ್ನೆರಡೋ. ಅದೂ ಇನ್‌ಸ್ಟಂಟ್ ಪರ್ಕುಲೇಟರ್ ಕಾಫಿ. ಅದರ ಮೇಲೊಂದಿಷ್ಟು ಕ್ಯಾಡ್‌ಬರೀಸ್ ಚಾಕಲೇಟ್ ಪುಡಿಯನ್ನು ಉದುರಿಸಿರುತ್ತಾರೆ. ಕಾಫಿ ಕುಡಿದ ಹಾಗೇ ಆಗುವುದಿಲ್ಲ.

ದೆಹಲಿಯಲ್ಲಿ ತಂಪು ಪಾನೀಯಗಳಿಗೆ ಬೇಸಗೆಯಲ್ಲಿ ಭಾರಿ ಬೇಡಿಕೆ. ಅಲ್ಲಲ್ಲಿ ಉಚಿತವಾಗಿ ತಣ್ಣನೆಯ ನೀರು ದೊರೆಯುವ ವ್ಯವಸ್ಥೆ ಇದೆ. ಕೆಲ ಮನೆಗಳಲ್ಲಿ ಜಲದಾನ ಮಾಡುವ ಮಹನೀಯರೂ ಇದ್ದಾರೆ. ಹಾಗೆಯೇ ಒಂದು ಗ್ಲಾಸು ತಣ್ಣನೆಯ ನೀರಿಗೆ ನಾಲ್ಕಾಣೆಯ ದರದಲ್ಲಿ ಮಾರಾಟಮಾಡಿ ಜೀವನ ಸಾಗಿಸುವವರೂ ಇದ್ದಾರೆ.

ದೆಹಲಿಗೆ ಹೋಲಿಸಿದರೆ ಬೆಂಗಳೂರಿಗರು ಪುಣ್ಯವಂತರು. ಅವರಿಗೆ ಬೀದಿಗೆ ಹದಿನಾರು ಬಾರುಗಳು-ವೈನ್ ಶಾಪುಗಳು ಸಿಗುತ್ತವೆ. ಆದರೆ ದೆಹಲಿ ಹಾಗಲ್ಲ.

ಅವುಗಳ ಸಂಖ್ಯೆ ತುಂಬಾ ಕಡಿಮೆ. ದಿನದ ಕೆಲ ಹೊತ್ತು ಮಾತ್ರ ಅವು ತೆರೆದಿರುತ್ತವೆ. ಏನಾದರೂ ಕೊಳ್ಳಬೇಕಿದ್ದರೆ ಕ್ಯೂನಲ್ಲಿ ನಿಲ್ಲಬೇಕು ಮತ್ತು ನಮ್ಮ ಕರ್ನಾಟಕದಲ್ಲಿಯಂತೆ ಎಲ್ಲೆಂದರಲ್ಲಿ ಕುಳಿತು ಕುಡಿಯುವಂತಿಲ್ಲ. ನಮ್ಮ ರಾಜ್ಯದಲ್ಲಿ ರಸ್ತೆಯ ಮಧ್ಯೆ ಕುಳಿತು ಕುಡಿಯುತ್ತಿದ್ದರೂ, ವಾಹನಗಳು ಅತ್ತಿತ್ತ ಜಾಗಮಾಡಿಕೊಂಡು ಅವರಿಗೆ ತೊಂದರೆ ಕೊಡದೆ ಸಾಗುತ್ತವೆ. ಜೋರಾಗಿ ಕಾಲು ಜಾರಿದರೆ ಮೂಗು ಯಾವುದಾದರೊಂದು ವೈನ್ ಶಾಪ್ ಮುಂದೋ, ಬಾರಿನ ಎದುರೋ ಇರುತ್ತದೆ. ಆ ಸೌಲಭ್ಯ ದೆಹಲಿಯಲ್ಲಿ ಇಲ್ಲ.

ಒಣಗಿದ ಬಾಯಿಯನ್ನು ಒದ್ದೆ ಮಾಡಿಕೊಳ್ಳಲೆತ್ನಿಸಿದ ರಂಗೇಗೌಡರು ನಿರಾಶರಾಗಿ ಕೊನೆಗೆ ಕರ್ನಾಟಕಕ್ಕೆ ಜೈ ಎಂದು ಘೋಷಿಸಿದ್ದರಲ್ಲಿ ತಪ್ಪಿಲ್ಲ. ಸತ್ಯ ಹೇಳಬೇಕೆಂದರೆ ಕರ್ನಾಟಕದ ಆಡಳಿತ ನಡೆಸುವವರು ಮಂತ್ರಿಗಳಲ್ಲ, ಸಾರಾಯಿ ದೊರೆಗಳು ಮತ್ತು ಮಠಾಧಿಪತಿಗಳು.

☆☆☆

ರಂಗೇಗೌಡರು ತುಮಕೂರಿನ ಒಬ್ಬ ಪ್ರಸಿಷ್ಠಿತ ವಸ್ತ್ರ ವ್ಯಾಪಾರಿ. ಮಾವನ ಮನೆಯಿಂದ ಹೆಂಡತಿಯ ಜೊತೆಗೆ ಸಾಕಷ್ಟು ಹಣಕಾಸುಗಳನ್ನೂ ತಂದಿದ್ದರಿಂದ ಹೆಂಡತಿ ರಂಗಮ್ಮನದೇ ಮನೆಯಲ್ಲಿ, ವ್ಯಾಪಾರದಲ್ಲಿ ಆಧಿಪತ್ಯ. ಅವಳು ಹೇಳಿದ ಹಾಗೆಯೇ ಎಲ್ಲ ನಡೆಯಬೇಕು. ಹೇಗೋ ಸಂಸಾರ ನಡೆದರೆ ಸಾಕು ಎಂದು ತನ್ನ ಇಳಿಯ ವಯಸ್ಸಿನಲ್ಲಿಯೂ ಅವಳ ಮಾತನ್ನೇ ಅನುಸರಿಸುವ ಕ್ರಮವನ್ನು ರೂಢಿಗತ ಮಾಡಿಕೊಂಡಿದ್ದರು.

ಅವಳ ಇಚ್ಛೆಯಂತೆಯೇ ಅವರು ಈ ಪ್ರಯಾಣಕ್ಕೆ ಹೊರಟಿದ್ದು.

ಸೌತೆ ಕಾಯಿ ಚೆನ್ನಾಗೈತೆ.... ತಿಂತೀರೇನ್ರೀ, ಗಂಟಲು ಒಣಗೋಗೈತೆ, ಕಾಫಿ ಕುಡಿಲಾ ಎಂದೆಲ್ಲಾ ಹೆಂಡತಿಯನ್ನು ಕೇಳುತ್ತಾರೆ. ಆಕೆ ಕೂಡಲೇ ಉತ್ತರಿಸುವುದಿಲ್ಲ. ಸ್ವಲ್ಪ ಹೊತ್ತಿನ ನಂತರ ನಿಂಗೆ ಬೇಕಾದ್ರೆ ತಗೊ.... ನಂಗೆ ಬೇಡ ಎಂದು ಅಪ್ಪಣೆ ಕೊಡಿಸುವಷ್ಟರಲ್ಲಿ ರೈಲು ಮುಂದಕ್ಕೆ ಹೋಗಿರುತ್ತಿತ್ತು ಅಥವಾ ಕಾಫಿಯವನು ಜಾಗ ಖಾಲಿ ಮಾಡಿರುತ್ತಿದ್ದ. ಊರಿನಲ್ಲಾಗಿದ್ದರೆ ಮನೆಯಿಂದ ಹೊರಗೆ ಏನು ಬೇಕಾದರೂ ಕೊಂಡು ನಾಲಿಗೆಯ ತೀಟೆ ತೀರಿಸಿಕೊಳ್ಳಬಹುದಿತ್ತು. ಆದರೆ ಇಲ್ಲಿ ಹೆಂಡತಿಯ ಹದ್ದಿನ ಕಣ್ಣು. ಅದೊಂದು ಹಿಂಸೆ ಅವರಿಗೆ.

ಅವರಿಗೆ ರಾತ್ರಿ ಸರಿಯಾಗಿ ನಿದ್ರೆ ಬರುವುದಿಲ್ಲ. ಇಂದು ದೆಹಲಿಯ ಸೆಖೆಯಲ್ಲಿ ರಾತ್ರಿಯಿಡೀ ಬರೀ ಗಾಳಿಹಾಕಿಕೊಳ್ಳುವುದೇ ಆಯಿತು, ನೀರು ಕುಡಿಯುವುದೇ ಆಯಿತು. ಅಲ್ಲ, ಇಷ್ಟೊಂದು ನೀರು ಅದೆಲ್ಲಿಗೆ ಹೋಗುತ್ತೆ ಎಂದು ಯೋಚಿಸಿಯೇ ಯೋಚಿಸಿದರು. ಏಳೆಂಟು ಬಾಟಲುಗಳಷ್ಟು ನೀರು ಆಗಲೇ ಉದರವನ್ನು ಸೇರಿತ್ತು. ಮಧ್ಯರಾತ್ರಿಯ ಸುಮಾರಿಗೆ ಅವರ ಕಣ್ಣಿಗೆ ಜೊಂಪು ಹತ್ತಿತು.

ಮತ್ತೆ ಅವರು ಕಣ್ಣು ಬಿಡುವಾಗ ಸುತ್ತ ಎಲ್ಲೆಡೆ ಬೆಳಕು ಹರಡಿಬಿಟ್ಟಿತ್ತು. ಅವರ ಹೆಂಡತಿಯೂ ಸೇರಿದಂತೆ ಉಳಿದವರೆಲ್ಲಾ ಮೈಮರೆತು ನಿದ್ರಿಸುತ್ತಿದ್ದರು. ಅವರು ಒಮ್ಮೆಲೇ ದಿಗ್ಗನೆದ್ದು ಕುಳಿತರು. ಗಂಟೆ ಸುಮಾರು ಆರೂ ಆರೂವರೆ ಆಗಿರಬಹುದು. ತಡವಾಗಿಬಿಟ್ಟಿತಲ್ಲ! ಹಿಂದಿನ ದಿನವೇ ಪ್ರವಾಸದ ಗೈಡ್ ಹೇಳಿಬಿಟ್ಟಿದ್ದ, 'ಎಲ್ಲರೂ ಆರು ಗಂಟೆಗೆ ಛತ್ರದಲ್ಲಿ ಹಾಜರಿರಬೇಕು. ಅಲ್ಲೇ ಕಾಫಿ ಕೊಡುತ್ತೇವೆ. ಆರೂವರೆಗೆ ಬಸ್ ಏರಿ ಸಿಮ್ಲಾಕ್ಕೆ ಪ್ರಯಾಣ. ಯಾರೂ ತಡಮಾಡಬಾರದು' ಅಂತ. ಗೌಡರು ಗಡಿಯಾರ ನೋಡಿಕೊಂಡರು. ಅದು ಇನ್ನೂ ನಾಲ್ಕೂ ಮುಕ್ಕಾಲು ತೋರಿಸುತ್ತಿತ್ತು. ಗಡಿಯಾರ ಕೆಟ್ಟಿರಬಹುದೇ ಎಂದು ನೋಡಿದರು. ಆದರೆ ಸೆಕೆಂಡು ಮುಳ್ಳು ಚಲಿಸುತ್ತಿತ್ತು. ಒಮ್ಮೆ ಕೂಗಿ ಎಲ್ಲರನ್ನೂ ಎಚ್ಚರಿಸಲೇ ಎಂದು ಯೋಚಿಸಿದರು. ಹೌದು... ಅದು ಒಬ್ಬ ಜವಾಬ್ದಾರಿಯುತ ಸಹಪ್ರಯಾಣಿಕನಾಗಿ ತನ್ನ ಕರ್ತವ್ಯ ಎಂದು ಯೋಚಿಸಿದರು. ಮೊದಲು ಹೆಂಡತಿಯನ್ನು ಕರೆದರು, 'ಲೇ, ಏಳೇ....'

ಶಾಮಣ್ಣ ಆದೇ ತಾನೇ ಬಚ್ಚಲ ಮನೆಯಿಂದ ಬರುತ್ತಿದ್ದರು. ಅವರನ್ನು ನೋಡಿ ಗೌಡರಿಗೆ ಏನೋ ಆನಂದವಾಯಿತು, 'ನೋಡಿ ಶಾಮಣ್ಣ ಬೆಳಕು ಹೀಗೆ ಹರಿದರೂ ಇನ್ನೂ ಯಾರೂ ಎದ್ದಿಲ್ಲ ನೋಡಿ. ಅಲ್ಲಿ ಸುಮ್ಮನೆ ಗಲಾಟೆ. ತಡವಾಗಿ ಹೊರಟರೆ ಸಿಮ್ಲಾ ಸೇರುವಾಗ ಅರ್ಧರಾತ್ರಿಯಾದರೂ ಆಗಬಹುದು. ಸದ್ಯ, ನೀವಾದರೂ ಎದ್ದಿದ್ದಿರಲ್ಲ' ಅಂದರು.

'ನಾನು ಮಲಗಿದ್ದು ಉಂಟೊ.... ರಾತ್ರಿಯಿಡೀ ನೀರಕಡೆ ಹೋಗಿಬರುವುದೇ ಆಯಿತು. ಇರುವ ಎಲ್ಲಾ ದೇವರಿಗೂ ಹೇಳಿಕೊಂಡಿದ್ದೇನೆ. ಬೇದಿ ನಿಂತರೆ ಕಾಯಿ ಒಡೆಸುತ್ತೇನೆ, ಅಂತ. ಜೊತೆಗೆ ಈ ಗ್ಯಾಸ್ ಟ್ರಬಲ್ ಬೇರೆ. ಏನು ಮಾಡುವುದೋ ಏನೋ... ಆ ದೇವರೇ ಬಲ್ಲ. ಅದಿರಲಿ, ನೀವು ಇಷ್ಟು ಬೇಗ ಎದ್ದಿದ್ದು ಯಂತದಕೆ? ಇನ್ನೂ ನಾಲ್ಕುವರೆ ಅಲ್ಲವೋ?' ಎಂದು ಉತ್ತರಿಸಿದರು ಶಾಮಣ್ಣ. 'ಈ ದೆಹಲಿಯಲ್ಲಿ ಭಾಳಾ ಬೇಗ ಬೆಳಗಾಗುತ್ತದೆ, ಬೇಸಗೆಯಲ್ಲಿ. ಬೆಂಗಳೂರಿನಲ್ಲಿ ಆರೂವರೆಗೆ ಬರುವ ಬೆಳಕು ಇಲ್ಲಿ ಐದಕ್ಕೆ ಕಾಣಿಸಿಕೊಳ್ಳುತ್ತದೆ. ನೀವು ಕನ್‌ಫ್ಯೂಸ್ ಮಾಡಿಕೊಂಡಿರಬೇಕು.... ಮಲಗಿಕೊಳ್ಳಿ' ಎಂದರು.

ದೆಹಲಿಯಲ್ಲಿ ಬೇಸಗೆಯ ದಿನಗಳು ಬಹು ದೀರ್ಘ, ಚಳಿಗಾಲದಲ್ಲಿ ಅತಿ ಕಡಿಮೆ.

★★★

ದೆಹಲಿಯಿಂದ ಸಿಮ್ಲಾಕ್ಕೆ ಹರ‍್ಯಾನ ರಾಜ್ಯದ ಮೂಲಕ ಹೋಗಬೇಕು. ಭಜನ್‌ಲಾಲ್, ದೇವಿಲಾಲ್, ಬನ್ಸಿಲಾಲ್, ಮುಂತಾದ ಲಾಲ್‌ಗಳ ರಾಜ್ಯದಲ್ಲಿ ಜನರು ನಿಜಕ್ಕೂ ಕೆಂಪು ಕೆಂಪಗಿದ್ದಾರೆ. ಪಕ್ಕದಲ್ಲಿ ರಾಜಾಸ್ಥಾನದ ಮರುಭೂಮಿಯ ಕಾರಣ ಗಾಳಿ ಬರಿ ಬಿಸಿ ಮಾತ್ರವಲ್ಲ, ಧೂಳು ಸಹಿತ ಕೂಡಾ. ಜನರು ಮುಖಕ್ಕೆ ಬಟ್ಟೆ ಮುಚ್ಚಿಕೊಂಡಿರುತ್ತಾರೆ. ಬಸ್ಸಿನಲ್ಲಿ ಹೋಗುವಾಗ ಗಾಳಿ ಬರಲಿ ಎಂದು ಕಿಟಕಿ ತೆರೆದರೆ

ಕೆಲವೇ ನಿಮಿಷಗಳಲ್ಲಿ ಮೈತುಂಬಾ ಸಣ್ಣ ಸಣ್ಣ ಮರಳು ಬೆವರಿನ ಮೇಲೆ ಶೇಖರವಾಗುತ್ತದೆ.

ಆ ರಾಜ್ಯದಲ್ಲಿ ಮರಗಳು ಕಡಿಮೆ. ಫಲವತ್ತಾದ ಭೂಮಿ ಇರುವುದರಿಂದ ಗೋಧಿ-ಅಕ್ಕಿಗಳ ಬೆಳೆ ಚೆನ್ನಾಗಿದೆ. ಹೆದ್ದಾರಿಯಲ್ಲಿ ಹತ್ತು ಹತ್ತು ಅಡಿಗೆಲ್ಲಾ ಒಂದೊಂದು ಡಾಬಾ ಇವೆ. ಅವುಗಳಲ್ಲಿ ಶುಚಿಯಂತೂ ದೇವರಿಗೇ ಪ್ರೀತಿ. ಎದುರು ಸಾಮಾನ್ಯವಾಗಿ ಒಂದೆರಡು ಲಾರಿಗಳು ನಿಂತಿರುತ್ತವೆ. ದಾಬಾದಲ್ಲಿ ಕುರ್ಚಿಗಳು, ಮೇಜುಗಳು, ಮಂಚಗಳು ಕೂಡಾ ಗ್ರಾಹಕನಿಗಾಗಿ ಕಾದಿರುತ್ತವೆ. ಮಂಚಗಳನ್ನು ಮಲಗಲಿಕ್ಕೆ ಉಪಯೋಗಿಸುವುದಿಲ್ಲ. ಇಲ್ಲಿನ ಲಾರಿ ಚಾಲಕರು ಅವುಗಳ ಮೇಲೆ ಕಾಲು ಮಡಚಿ ಕುಳಿತುಕೊಳ್ಳುವುದನ್ನು ಇಷ್ಟಪಡುತ್ತಾರೆ.

ಡಾಬಾಗಳಲ್ಲಿಯೂ ಕಾಫಿಗಳು ಸಿಗುವುದು ಕಡಿಮೆ. ಸಿಕ್ಕರೂ ಎಸ್‌ಪ್ರೆಸ್ಸೊ ಕಾಫಿ. ನೀರು ನೀರಾಗಿ, ಸಕ್ಕರೆ-ಕಾಫಿಗಳ ವಾಸನೆಯೊಂದಿಗೆ ಇರುತ್ತದೆ. ಬೆಲೆ ದುಬಾರಿ. ಚಹಾಕ್ಕೆ ಯಾಲಕ್ಕಿ, ಶುಂಠಿಗಳನ್ನು ಮಿಶ್ರಮಾಡಿ ಕಷಾಯದ ಹಾಗೆ ಕೊಡುವುದು ಇಲ್ಲಿ ಮಾಮೂಲು.

ಹೋಟೆಲುಗಳಲ್ಲಿ ಮೈಸೂರು ಪಾಕುಗಳನ್ನು ತಟ್ಟೆಗಳಲ್ಲಿ ಜೋಡಿಸಿರುತ್ತಾರಲ್ಲಾ, ಹಾಗೆ, ಇಲ್ಲಿ ನಿವಾಸಿಗಳು ಬೆರಣಿಗಳನ್ನು ಒಂದಕ್ಕೊಂದು ಅಂಟಿಸಿ ಸರಿಸಿ, ಗೋಪುರಾಕಾರಕ್ಕೆ ತರುತ್ತಾರೆ. ಅದರ ಮೇಲೆ ಹುಲ್ಲನ್ನು ಹರಡಿ ಮಳೆಯಿಂದ ರಕ್ಷಿಸುತ್ತಾರೆ. ಇದೇ ಅವರಿಗೆ ಮಳೆಗಾಲದ ಇಂಧನವೋ ಏನೋ. ಅದು ದಕ್ಷಿಣ ಕನ್ನಡದ ತಿರಿಯನ್ನು ನೆನಪಿಗೆ ತರುತ್ತದೆ. ಅದರ ಎತ್ತರ ಸುಮಾರು ಹತ್ತರಿಂದ ಹದಿನೈದು ಅಡಿ ಇರುತ್ತದೆ.

ಸುರೇಶನ ಪಕ್ಕದಲ್ಲಿ ಬಸ್ಸಿನಲ್ಲಿ ಕುಳಿತವರು ರಾಜ್ ಎಂಬ ಹೆಸರಿನ ವ್ಯಕ್ತಿ. ಸಹಜವಾಗಿಯೇ ಇಬ್ಬರಲ್ಲಿ ಮಾತು ಪ್ರಾರಂಭವಾಯಿತು. ಮೊದಲು ಪರಿಚಯ. ರಾಜ್ ಬ್ಯಾಂಕ್ ಒಂದರ ಉದ್ಯೋಗಿ. ತಾನು ಇತ್ತೀಚೆಗೆ ಹಿಂದೂ ಧರ್ಮವನ್ನು ತೊರೆದು ಕ್ರಿಶ್ಚಿಯನ್ ಆಗಿ ಪರಿವರ್ತನೆಗೊಂಡಿರುವುದಾಗಿ ಹೇಳಿ, ಅದೇ ಅವಕಾಶವೆಂಬಂತೆ ಮೊದಲ ಧರ್ಮದಲ್ಲಿ ತನಗೆ ಸಿಗದ ಅನೇಕ ಉಪಯೋಗಗಳು ಹೊಸ ಧರ್ಮದಲ್ಲಿ ದೊರಕಿದ್ದು ಹೇಗೆ ಎಂದೆಲ್ಲಾ ವಿವರಿಸತೊಡಗಿದರು. ಆ ಭಗವಂತನು ಮಾನವನ ಉದ್ಧಾರಕ್ಕೆ ಏನೇನು ಮಾಡಿದ್ದಾನೆ, ಏನೇನು ಹೇಳಿದ್ದಾನೆ ಎಂಬುದನ್ನೆಲ್ಲಾ ಶ್ರದ್ಧೆಯಿಂದ ಹೇಳುವಾಗ ಅವರ ಅನನ್ಯ ನಂಬಿಕೆಯ ಬಗ್ಗೆ ಸುರೇಶ ಆಶ್ಚರ್ಯ ಚಕಿತನಾದರೂ ಇವರ ಏಕಮುಖ ಧೋರಣೆಯನ್ನು ಖಂಡಿಸುತ್ತಾ ಯಾಕೆ ಮಜಾ ಪಡೆಯಬಾರದು ಎಂದು ನಿರ್ಧರಿಸಿದ.

ಸೈತಾನನು ಮನುಷ್ಯನನ್ನು ಕೆಟ್ಟ ದಾರಿಗೆ ಎಳೆಯುತ್ತಾನೆ. ಅದರಿಂದಾಗಿಯೇ ದೇವರು ಮನುಷ್ಯನಿಗೆ ಶಿಕ್ಷೆ ಕೊಡುತ್ತಾನೆ. ಬೇಡಿಕೊಂಡಾಗ ಅವನ ತಪ್ಪುಗಳನ್ನು ಕ್ಷಮಿಸುತ್ತಾನೆ. ಮನುಷ್ಯನ ಉದ್ಧಾರಕ್ಕೇ ದೇವರು ಏಸುಕ್ರಿಸ್ತನನ್ನು ಭೂಮಿಗೆ

ಕಳುಹಿಸಿದ್ದು ಎಂದೆಲ್ಲಾ ಹೇಳತೊಡಗಿದಾಗ ಸುರೇಶ ತನ್ನ ವಾದವನ್ನು ಪ್ರಾರಂಭಿಸಿದ:

'ನೀವು ಹೇಳುವಂತೆ ದೇವರು ದೊಡ್ಡವನೋ ಇಲ್ಲ ಸೈತಾನ ಶಕ್ತಿವಂತನೋ?'

'ದೇವರು'

'ಹಾಗಾದರೆ ಮನುಷ್ಯ ಮಾಡುವ ತಪ್ಪುಗಳಿಗೆ ಅವನೇ ಕಾರಣವಲ್ಲ. ಹಾಗಿದ್ದರೂ ನಿಮ್ಮ ದೇವರು ಅವನನ್ನು ಏಕೆ ಶಿಕ್ಷಿಸುತ್ತಾನೆ? ಸೈತಾನನ್ನೇ ಹತಗೊಳಿಸಿ ಮನುಕುಲದಲ್ಲಿ ಸದಾ ಶಾಂತಿ-ಸುಖ-ಸಂತೋಷಗಳನ್ನು ಹರಡಬಹುದಿತ್ತಲ್ಲ.'

'ಅದಕ್ಕೂ ಕಾಲ ಬರುತ್ತದೆ.'

'ಎಂದು?'

'ಆ ದಯಾಮಯನಾದ ದೇವರು ಅವನ ಸಮಯವನ್ನು ತೆಗೆದುಕೊಳ್ಳುತ್ತಾನೆ.'

'ತಿಳಿದುಕೊಳ್ಳಿ ರಾಜ್, ನಮಗೀಗ ಬೇಕಿರುವುದು ದೇವರಲ್ಲ, ಧರ್ಮವಲ್ಲ, ಮಾನವೀಯತೆ. ನಮ್ಮನ್ನು ಬೇರೆಯವರ ಸ್ಥಾನದಲ್ಲಿ ಕಲ್ಪಿಸಿಕೊಂಡು ಅವರ ನೋವುಗಳನ್ನು ಅನುಭವಿಸುವ ಮಾರ್ಧವತೆ. ಸರ್ವಜ್ಞ ಹೇಳಿದ್ದಾನೆ, ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಅಂತ. ಒಂದೇ ಒಂದು ಹುಳವನ್ನೂ ಹುಟ್ಟಿಸಲಾರದ ನಾವು ಸಾವಿರಾರು ದೇವರು-ಧರ್ಮಗಳನ್ನು ಹುಟ್ಟುಹಾಕುತ್ತೇವೆ.'

ಆತ ಕೋಪಗೊಳ್ಳಲಿಲ್ಲ. ಆದರೂ ತನ್ನ ನಂಬಿಕೆಯೇ ಅಚಲ ಎಂಬಂತೆ ಮುಂದಿನ ವಾದಕ್ಕೆ ಸಿದ್ಧನಾದ.

ಹೈವೇ. ಬಸ್ ಎಪ್ಪತ್ತರ ವೇಗದಲ್ಲಿ ಚಲಿಸುತ್ತಿತ್ತು. ಮಾರ್ಗದರ್ಶಿ ಡ್ರೈವರನ ಕ್ಯಾಬಿನ್ನಿನಲ್ಲಿ ಕುಳಿತು ಆಯಾಯಾ ಸ್ಥಳದ ಮಹಾತ್ಮೆ ಬಗ್ಗೆ ಹೇಳುತ್ತಿದ್ದ. ಮೈಕ್‌ನ ಗೊರಗೊರ ಶಬ್ದ, ಬಸ್ಸಿನ ಶಬ್ದ, ಪಕ್ಕದಲ್ಲಿ ಸಾಗುತ್ತಿರುವ ವಾಹನಗಳ ಹಾರ್ನ್, ಇವುಗಳಿಂದಾಗಿ ಅವನು ಏನು ಹೇಳುತ್ತಿರುವನೆಂಬುದು ಅರ್ಥವಾಗುತ್ತಿರಲಿಲ್ಲ. ಕುರುಕ್ಷೇತ್ರ, ಪಾನಿಪತ್, ಮುಂತಾದ ಶಬ್ದಗಳು ಕೇಳಿಬರುತ್ತಿದ್ದರೂ ಪ್ರಯಾಣಿಕರು ಅದನ್ನು ಸರಿಯಾಗಿ ಮನಸ್ಸಿಗೆ ಹಚ್ಚಿಕೊಳ್ಳದೇ.....

ಮನಸ್ಸಿಗೆ ಹಚ್ಚಿಕೊಳ್ಳುವ ಸಮಸ್ಯೆಯೊಂದು ಎಲ್ಲರೆದುರು ಇತ್ತು. ಅದು.....

ಬಸ್ಸಿನಲ್ಲಿದ್ದವರಿಗೆ ಸಧ್ಯಕ್ಕೆ ಬೇಕಾಗಿರುವುದು ಧರ್ಮವಲ್ಲ, ಸ್ಥಳಗಳ ಪರಿಚಯವಲ್ಲ, ಊಟ-ತಿಂಡಿಗಳ ಬಯಕೆಯ ಈಡೇರಿಕೆಯೂ ಅಲ್ಲ! ಆದರೆ ಎಲ್ಲೆಡೆ ಹರಡಿರುವ ವಾಸನೆಯಿಂದ ಮುಕ್ತಿ. ಮುಕ್ತಿ ಸಾಧನೆಗಾಗಿ ಮುನಿ - ಋಷಿಗಳು ಏನೇನೆಲ್ಲಾ ಮಾಡಿದರೋ, ಅಷ್ಟು ಅಥವಾ ಅದಕ್ಕಿಂತ ಹೆಚ್ಚಿನದನ್ನು ಪ್ರಯಾಣಿಕರು ಮಾಡಿದರು. ಕಿಟಕಿಗಳನ್ನು ತೆರೆದು ನುಗ್ಗುವ ಬಿಸಿ, ಧೂಳು ಸಹಿತದ ಗಾಳಿಗೆ ತಮ್ಮನ್ನು ತೆರೆದಿಟ್ಟರು, ಮೂಗಿಗೆ ಕರವಸ್ತ್ರ ಹಿಡಿದು ವಾಸನೆಯಿಂದ ಮುಕ್ತರಾಗುತ್ತಿದ್ದೇವೆಂಬ ಭ್ರಮೆಗೆ ಒಳಪಟ್ಟರು, ಮೈಗೆಲ್ಲಾ ಸೆಂಟನ್ನು ಸಿಂಪಡಿಸಿ ಮೂಗನ್ನು ಅದಕ್ಕೆ ಹೊಂದಿಕೊಳ್ಳುವಂತೆ ಮಾಡಿದರು..... ಆದರೂ ಆ ಕೆಟ್ಟ ವಾಸನೆ ಬೇತಾಳದಂತೆ

ಕಾಡುತ್ತಲೇ ಇತ್ತು.

ಮಕ್ಕಳು ಇಶ್ಶಿ ಮಾಡಿರಬಹುದು ಎಂದರೆ ಸಣ್ಣ ಮಕ್ಕಳು ಯಾರೂ ಇಲ್ಲ. ಅಂದಮೇಲೆ ಯಾರೊಬ್ಬರ ಕಾಲಿನ ಚಪ್ಪಲಿಗೆ ಅಥವಾ ಷೂಗೆ ಅಮೇಧ್ಯ ಅಂಟಿರಬಹುದು. ಅದನ್ನು ತಿಳಿಯದ ಅವರು ಬಸ್ಸಿನೊಳಗೆ ಹತ್ತಿರಬಹುದು.

ಯಾರೋ ಒಬ್ಬರು ಇದನ್ನು ಬಾಯಿಬಿಟ್ಟು ಹೇಳಿಬಿಟ್ಟರು. ತಕ್ಷಣ ಎಲ್ಲರೂ ತಮ್ಮ ತಮ್ಮ ಪಾದರಕ್ಷೆಯ ಕೆಳಭಾಗಗಳನ್ನು ತಿರುಗಿಸಿ ತಿರುಗಿಸಿ, ತಮ್ಮ ಕಾಲಿನಲ್ಲಿ ಇರದಿರಲಪ್ಪಾ ಅಂದುಕೊಳ್ಳುತ್ತಾ ನೋಡಿದರು. ಅದು ಶುಭ್ರವಾಗಿದ್ದರೆ ಇತರ ಎಲ್ಲಾ ಪ್ರಯಾಣಿಕರೂ ಕೊಳಕರು ಎಂದುಕೊಂಡರು. ಹಾಗಾಗಿ ಎಲ್ಲಾ ಮೂವತ್ತೈದು ಪ್ರಯಾಣಿಕರೂ ಇತರ ಮೂವತ್ತನಾಲ್ಕು ಪ್ರಯಾಣಿಕರನ್ನು ಕೊಳಕರೆಂದು ಮನಸ್ಸಿನಲ್ಲಿಯೇ ನಿರ್ಧರಿಸಿಬಿಟ್ಟರು.

ಸ್ವಲ್ಪ ಹೊತ್ತಿನಲ್ಲಿ ಆ ಮೂಗು ಅದಕ್ಕೆ ಹೊಂದಿಕೊಂಡಿತು. ಆದರೂ ಅದರ ಮೂಲ ಯಾವುದೆಂಬುದು ಎಲ್ಲರಿಗೂ ಕೊನೆಯ ತನಕ ತಿಳಿಯಲೇ ಇಲ್ಲ. ಶಾಮಣ್ಣನವರ ಹೊರತು.

★★★

ದೆಹಲಿಯಿಂದ ಸಿಮ್ಲಾ ಮಾರ್ಗವಾಗಿ, ಸಿಮ್ಲಾದಿಂದ 90 ಕಿ.ಮೀ. ಹಿಂದೆ ಪಿಂಜೋರ್ ಎಂಬ ಒಂದು ಪೌರಾಣಿಕ ಪ್ರಸಿದ್ಧವಾದ ಸ್ಥಳವಿದೆ. ಪಾಂಡವರು ತಮ್ಮ ಹನ್ನೆರಡು ವರ್ಷಗಳ ವನವಾಸದ ಅವಧಿಯಲ್ಲಿ ಇಲ್ಲಿದ್ದರು. ಇದರ ಅಂದಿನ ಹೆಸರು ಪಂಚಪುರ ಆಗಿತ್ತು ಎಂಬುದು ಪುರಾಣ. ಈಗ ಇಲ್ಲಿ ಒಂದು ಮನರಂಜನಾ ತೋಟ, ಹೋಟೆಲುಗಳು ಇದ್ದು ಮೈಸೂರಿನ ಕೃಷ್ಣರಾಜಸಾಗರ ನೋಡಿದವರಿಗೆ ಇದು ಸಪ್ಪೆ. ಇದು ಹಿಮಾಚಲಪ್ರದೇಶ ರಾಜ್ಯದ ಗಡಿ ಕೂಡಾ ಆಗಿದೆ. ಇಲ್ಲಿಂದ ಬೆಟ್ಟಗಳ ಪ್ರದೇಶ ಪ್ರಾರಂಭವಾಗುತ್ತದೆ. ಸಿಮ್ಲಾಕ್ಕೆ ಇಲ್ಲಿಂದ ನಾಲ್ಕು ಗಂಟೆಗಳ ಪ್ರಯಾಣ.

ಪ್ರಯಾಣಿಕರು ರಸ್ತೆಯ ದಾಬಾದೆದುರು ತಿಂದಿದ್ದ ತಿಂಡಿಯ ಲವಲೇಶವೂ ಈಗ ಹೊಟ್ಟೆಯಲ್ಲಿ ಉಳಿದಿರಲಿಲ್ಲ. ಪ್ರಯಾಣ, ಸ್ಥಳದರ್ಶನ ಎಲ್ಲಾ ಹಸಿವಿನೆದುರು ಪರಿಗಣಿಸಲಿಕ್ಕೆ ಅರ್ಹವಾಗುವುದಿಲ್ಲ.

ಎಲ್ಲಾ ಬೆಳಿಗ್ಗೆಯೇ ಮಾಡಿ, ಆಗಲೇ ತಂಗುಳಾಗಿದ್ದ ಆಹಾರವನ್ನು ಬಕಾಸುರನ ಹಾಗೆ ತಿನ್ನುತ್ತಿದ್ದರೆ, ಶಾಮಣ್ಣ ಎಲ್ಲಿ?

ಬಸ್ಸಿನಿಂದ ಇಳಿಯುತ್ತಲೇ ಶಾಮಣ್ಣ ಹುಡುಕಿದ್ದು ಶೌಚಾಲಯವನ್ನು. ಹತ್ತಾರು ಕಡೆ ಹುಡುಕಿದರೂ ಸರಿಯಾದ ಸ್ಥಳ ಇಲ್ಲ. ಇಲ್ಲಿಯ ಜನಕ್ಕೆ ಹೊರಕ್ಕೆ ಹೋಗುವ ಅಭ್ಯಾಸವೇ ಇಲ್ಲವೋ ಏನೋ ಎಂದು ಚಿಂತಿಸುತ್ತಾ, ಕೊನೆಗೊಂದು ಮನೆಗೆ ಹೋಗಿ, ತಮಗೆ ಬರುವ ಏಕೈಕ ಭಾಷೆ ಕನ್ನಡದಲ್ಲಿ ತಮ್ಮ ಸಮಸ್ಯೆಯನ್ನು ಅವರಿಗೆ ತಿಳಿಸಿ ಹೇಳುವಲ್ಲಿ ಕೊನೆಗೂ ಸಫಲರಾಗಿ, ತಮ್ಮ ನೋವನ್ನು ಪರಿಹರಿಸಿಕೊಂಡು ವಾಪಾಸು ಬರುವಷ್ಟರಲ್ಲಿ, ಮಧ್ಯಾಹ್ನದ ಊಟದ ಪಾತ್ರೆಗಳು ಬರಿದೋ ಬರಿದು!

ಹಿಂದಿ ಬಂದಿದ್ದರೆ ಇಂತಹ ಸಮಸ್ಯೆ ಆಗುತ್ತಲೇ ಇರಲಿಲ್ಲ. ಹಿಂದಿಯ ಕಲಿಕೆ ಅವಶ್ಯಕ, ಕನ್ನಡ ಬರದಿದ್ದರೂ ಪರವಾಗಿಲ್ಲ ಎಂಬ ಖಚಿತ ತೀರ್ಮಾನಕ್ಕೆ ಅವರು ಬರಲು ಇದೇ ಕಾರಣ.

ಅವರ ಹೊಟ್ಟೆಯೇನೂ ಗಲಾಟೆ ಮಾಡದೆ ಸುಮ್ಮನಿರಲಿಲ್ಲ. ಅಲ್ಲಿನ ಗುಡಿಸಲು ಹೋಟೆಲುಗಳಲ್ಲಿ ಸಪ್ಪೆ ಸಪ್ಪೆ ಪಕೋಡ, ಕಡಲೆ ಹಿಟ್ಟಿನ ತಗಡಿನಂತಹ ತಿಂಡಿಗಳನ್ನು ಬಿಟ್ಟರೆ ಬೇರೇನೂ ಇಲ್ಲ. ಆ ಪರೋಟ, ರೋಟಿಗಳನ್ನು ತಿನ್ನುವುದಾದರೂ ಹೇಗೆ? ಶಾಮಣ್ಣ ಬರೀ ಐಸ್‌ಕ್ರೀಮ್‌ಗಳನ್ನೇ ತಿಂದರು. ಏನೇ ಹೇಳಿ, ಕರ್ನಾಟಕದ ಇಡ್ಲಿ-ವಡೆ ಸಾಂಬಾರುಗಳಿಗೆ ಸರಿಸಮವಾದ ತಿಂಡಿ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಇಲ್ಲ.

★★★

ಹಿಮಾಲಯದ ತಪ್ಪಲಿನ ಈ ನಗರ ಶಿಮ್ಲಾವನ್ನು ಶಿಖರಗಳ ರಾಣಿ ಎಂದು ಕರೆಯುತ್ತಾರೆ. ಶಾಮಲಾ ದೇವಿಯ ನೆನಪಿನ ಹೆಸರು ಇದು. ಹಿಂದೆ ಹನುಮಂತನು ಲಕ್ಷ್ಮಣನನ್ನು ಬದುಕಿಸಲು ಇಲ್ಲಿಂದ ಸಂಜೀವಿನೀ ಪರ್ವತವನ್ನು ಕೊಂಡೊಯ್ದ ಪ್ರಯುಕ್ತ, ಆ ಸಿಂಹಳ ಎಂಬ ಹೆಸರಿನ ಮೂಲ, ಶಿಮ್ಲಾ ಎಂದಾಯಿತು ಎಂದು ಮಾರ್ಗದರ್ಶಿ ಕೃಷ್ಣಮೂರ್ತಿ ಹೇಳಿದ. 2130 ಮೀಟರುಗಳ ಎತ್ತರದ, ಈ ಪುಟ್ಟ ಊರಿನಲ್ಲಿ ಟಿಬೆಟಿಯನರ ಸಂಖ್ಯೆ ಬಹಳ. ಇಲ್ಲಿನ ಹೆಚ್ಚಿನವರ ಬದುಕು ಬರಿಯ ವ್ಯಾಪಾರದಿಂದಲೇ ನಡೆಯುತ್ತದೆ. ಹಿಮಾಚಲಪ್ರದೇಶವು ಸೇಬಿಗೆ ಪ್ರಸಿದ್ಧವಾದರೂ ಏಪ್ರಿಲ್‌ನಲ್ಲಿ ಮರಗಳಲ್ಲಿ ಗೋಲಿಗಾತ್ರದ ಕಾಯಿಗಳಷ್ಟೇ ಕಾಣುತ್ತವೆ. ಇಲ್ಲಿ ನೋಡಬೇಕಾದ ಅನೇಕ ಪ್ರೇಕ್ಷಣೀಯ ಸ್ಥಳಗಳಲ್ಲಿ ಜಾಖು ಬೆಟ್ಟ, ಸ್ಕ್ಯಾಂಡಲ್ ಪಾಯಿಂಟ್, ಕ್ರೈಸ್ಟ್ ಚರ್ಚ್, ಅನ್ನಂದಾಲೆ, ಚಾಡ್‌ವಿಕ್ ಫಾಲ್ಸ್ ಮುಂತಾದವುಗಳನ್ನು ಹೆಸರಿಸಬಹುದು. ಇಲ್ಲಿಯ ಮರಗಳು ಮುಖ್ಯವಾಗಿ ಓಕ್, ಪೈನ್ ಮತ್ತು ಫಿರ್. ಬೆಟ್ಟವನ್ನು ಏರುತ್ತಿರುವಾಗ ಮಳೆ ಆರಂಭವಾಯಿತು. ಬೆಂಗಳೂರಿನವರು ಮೇಲಿನಿಂದ ಕೆಳಕ್ಕೆ ಬೀಳುವ ಮಳೆಯನ್ನು ನೋಡಿದ್ದರು. ಅವರಿಗೆ ಕೆಳಗಿನ ಕಣಿವೆಗೆ ಬಾಣದಂತೆ ಸಾಗುತ್ತಿರುವ ಮಳೆಯ ಹನಿಗಳನ್ನು ನೋಡುವ ಒಂದು ಅಪೂರ್ವ ಅವಕಾಶ ಸಿಕ್ಕಿತು.

1904ರಲ್ಲಿ ಲಾರ್ಡ ಕರ್ಜನ್ ಸ್ಥಾಪಿಸಿದ ಮಿನಿ ರೈಲು ಕಲ್ಕದಿಂದ ಸಿಮ್ಲಾವನ್ನು 109 ಸುರಂಗಗಳನ್ನು ದಾಟಿ, ಸಿಮ್ಲಾವನ್ನು ಏಳು ಗಂಟೆಯ ಅವಧಿಯಲ್ಲಿ ತಲುಪುತ್ತದೆ. ಇದರಲ್ಲಿ ಪ್ರಯಾಣ ಒಂದು ಸ್ಮರಣೀಯ ಅನುಭವ.

ಕುಫ್ರಿ ಇಲ್ಲಿಂದ 16 ಕಿ.ಮೀ. ದೂರದಲ್ಲಿದೆ. ಎತ್ತರ ಸಮುದ್ರ ಮಟ್ಟದಿಂದ 2622 ಮೀಟರುಗಳಷ್ಟು ಇಲ್ಲಿ ಒಂದು ಚಳಿಗಾಲದಲ್ಲಿ ಸ್ಕೈ ಮಾಡವವರಿಗೆ ಸ್ವರ್ಗ. ಒಂದು ಮಿನಿ ಮೃಗಾಲಯ, ಒಂದು ಕೃತಕ ವನ್ಯಧಾಮ ಇದೆ. ಅದರೊಳಗೆ ಹುಲಿ, ಸಿಂಹವೇ ಮಂತಾದ ಅನೇಕ ಪ್ರಾಣಿಗಳಿವೆ. ಯಾರೋ ಹೇಳಿದರು, ನನಗೆ ಸಿಂಹ ಅಂದರೆ ತುಂಬಾ ಭಯ ಎಂದ.

ಸುರೇಶ ಪ್ರತಿಕ್ರಿಯಿಸಿದ, 'ನನಗೆ ಇಲ್ಲ. ಯಾಕೆಂದರೆ ನನಗೆ ಈಗಾಗಲೇ ಮದುವೆಯಾಗಿದೆ.'

★ ★★

ಡ್ರೈವರನ ಕ್ಯಾಬಿನಿನಲ್ಲಿ ಕುಳಿತು ಕೃಷ್ಣಮೂರ್ತಿ ಹೇಳುತ್ತಿರುವುದು ಅಸ್ಪಷ್ಟವಾಗಿ ಇತರರಿಗೆ ಕೇಳಿಸುತ್ತಿತ್ತು. ಲೆಫ್ಟ್‌ಸೈಡ್ ನೋಡಿ... ರೈಟ್ ಸೈಡ್ ನೋಡಿ.... ಎಂದೆಲ್ಲಾ ಹೇಳುವಾಗ ಅದನ್ನು ಅನುಸರಿಸುವ ಪ್ರಯಾಣಿಕರು ಮೋಸಹೋಗಿದ್ದೇ ಜಾಸ್ತಿ. ಆ ಮೂರ್ತಿ ಯಾವ ಕಡೆ ಮುಖಮಾಡಿ ಕುಳಿತಿದ್ದಾನೆ, ಅವನ ಎಡ-ಬಲಗಳು ಯಾವುವು ಎಂಬುದನ್ನು ಮೊದಲು ತಿಳಿದು, ನಂತರವೇ ಅವರು ಕತ್ತನ್ನು ತಿರುಗಿಸಬೇಕಿತ್ತು. ಕಡಿದಾದ ತಿರುವುಗಳಿಂದಾಗಿ ಅವನ ಲೆಫ್ಟ್ ರೈಟ್‌ಗಳು ಬದಲಾಗಿಬಿಡಬಹುದಿತ್ತು.

ಸಿಮ್ಲಾನಗರ ದೂರದಿಂದ ನೋಡುವಾಗ ಕಣ್ಣಿಗೆ ಹಬ್ಬ, ಬೆಟ್ಟದ ಕೆಳಗಿನ ಬಿಸಿ ಬಾಣಲೆಯಿಂದ ಶೀತಯಂತ್ರದ ಒಳಹೊಕ್ಕ ಅನುಭವ. ನಡು ಮಧ್ಯಾಹ್ನ ಕೂಡಾ ಸಿಮ್ಲಾ ಮೈ ನಡುಗಿಸುತ್ತದೆ. ಸೂರ್ಯ ನರಸತ್ತವನ ಹಾಗೆ ತಣ್ಣಗಿನ ಬಿಸಿಲನ್ನು ಕಕ್ಕುತ್ತಾನೆ. ಇಲ್ಲಿನ ಮಣ್ಣು ಶಿಥಿಲವಾದ ಕಾರಣ ಯಾವುದೇ ಕಟ್ಟಡಗಳಿಗೂ ತಳಪಾಯ ಹಾಕಿದ ಹಾಗೆ ಕಾಣಿಸುವುದಿಲ್ಲ. ಹೆಚ್ಚಿನ ಮನೆಗಳ ಒಂದು ಭಾಗ ಆಗಲೇ ಕುಸಿದಿರುತ್ತದೆ. ಇಲ್ಲಿಯ ಮನೆಗಳ ತುದಿ ಚೂಪು. ಅಗಲಕ್ಕೆ ಹರಡಿದ ಮರಗಳು ಇಲ್ಲವೇ ಇಲ್ಲ. ಮೇಲೆ ಬಿದ್ದ ಮಂಜುಗಡ್ಡೆ ಕೆಳಗೆ ಜಾರಿ ಬೀಳಲು ಸುಲಭವಾಗುವಂತೆ ಪ್ರಕೃತಿ ಮರಗಳನ್ನು ಕೂಡಾ ರೂಪಿಸಿದೆ.

ಸೂಟ್‌ಕೇಸ್‌ಗಳಲ್ಲಿ ಬೆಚ್ಚಗೆ ಮಲಗಿದ್ದ ಸ್ವೆಟರ್‌ಗಳು, ಶಾಲುಗಳು ಹೊರಬಂದವು. ಬಿಸಿ ಬಿಸಿ ಎಂದು ನರಳುತ್ತಿದ್ದವರು ಚಳಿಚಳಿ ಎಂದು ನಡುಗ ತೊಡಗಿದರು. ದೂರ ದೂರ ಕುಳಿತ ಗಂಡು-ಹೆಣ್ಣುಗಳು ಹತ್ತಿರ ಹತ್ತಿರ ಬಂದವು.

ಸಮಾರು ನೂರು ಮೀಟರುಗಳ ಡಾಲಿ ಸುರಮಗದಲ್ಲಿ ಬಸ್ಸು ಹೋಗುವಾಗ ಒಳಗೆಲ್ಲಾ ಕೃತಕ ಕತ್ತಲೆ. ಆಗ ಎಲ್ಲರಿಗೂ ಸ್ಫುಟವಾಗಿ ಯಾರೋ ಯಾರ ಕೆನ್ನೆಗೋ ಹೊಡೆದ ಶಬ್ದ ಕೇಳಿಸಿತು.

ಇಲ್ಲಿಯ ಹೋಟೆಲುಗಳಲ್ಲಿ ಬಾಡಿಗೆ ದುಬಾರಿ. ನಗರವನ್ನು ಹತ್ತಿ-ಇಳಿಯಬೇಕು. ನೇರವಾದ, ಸಮತಟ್ಟಾದ ರಸ್ತೆಗಳು ತಂಬಾ ಕಡಿಮೆ. ಅಂಗಡಿಗಳು ಬೆಂಕಿಗೂಡಿನ ಗಾತ್ರದವು. ಇಷ್ಟೆಲ್ಲಾ ಆದರೂ ಇಲ್ಲಿ ಐಸ್‌ಕ್ರೀಮ್ ಕೊಳ್ಳುವವರು, ತಿನ್ನುವವರಂತೂ ಕಡಿಮೆ ಇಲ್ಲ.

ಕರ್ನಾಟಕದ ಸಾರಿಗೆ ಬಸ್ಸಿನ ಕಂಡಕ್ಟರರುಗಳಿಗೆ ಒಂದು ಹೆಮ್ಮೆಯ ವಿಷಯ. ಇಲ್ಲಿನ ಸಿಟಿ ಬಸ್‌ಗಳಲ್ಲಿಯೂ ಪ್ರಯಾಣ ಮಾಡುವಾಗ ಕಂಡಕ್ಟರ್ ಟಿಕೆಟ್ ಕೊಡುವುದಿಲ್ಲ. ಟಿಕೆಟ್ ಕೇಳಿದರೆ ಹೆಚ್ಚು ಹಣ ತೆರಬೇಕಾಗುತ್ತೆ.

ಇಲ್ಲಿ ರಿಕ್ಷಾ ಎತ್ತಿನ ಗಾಡಿಗಳು, ಟ್ಯಾಕ್ಸಿಗಳು ಇಲ್ಲವೇ ಇಲ್ಲ ಎನ್ನಬಹುದು.

ನಡೆಯಲಿಕ್ಕೆ ತ್ರಾಸಪಡುವ ಪ್ರಯಾಣಿಕರ ಬೆನ್ನಮೇಲೆ ಹೆಣಭಾರ ಹೊತ್ತು ಮೇಲೇರುವುದನ್ನ ಕಂಡರೆ ಆಶ್ಚರ್ಯವಾಗತ್ತದೆ.

ಕುಫ್ರಿಗೆ ಮರದಿನದ ಪ್ರಯಾಣ. ಅಲ್ಲಿಂದ ಹಿಮಾಲಯದ ವಿವಿಧ ಶಿಖರಗಳನ್ನು ನೋಡಲು ಹೋಗಲು ಕುದುರೆಯನ್ನು ಏರಬೇಕು. ತಲೆಗೆ ನೂರೈವತ್ತು ಹೇಳಿ ಕೊನೆಗೆ ಚರ್ಚೆಯ ನಂತರ ನೂರು ರೂಪಾಯಿಗಳಿಗೆ ಬರಲು ಒಪ್ಪುತ್ತಾರೆ. ಬರಿಯ ಅರ್ಧ ಗಂಟೆಯ ಅಶ್ವಯಾನ. ಆ ಕುದರೆಗಳು ದಿನಾ ಅದೇ ದಾರಿಯಲ್ಲಿ ಹೋಗಿ ಬರುತ್ತವಾದ ಕಾರಣ, ಅವುಗಳ ಜೀವನವೆಲ್ಲಾ ಅಲ್ಲೇ ಕಳೆದುಹೋದ/ಗುವ ಕಾರಣ ಅವಕ್ಕೆ ಬೇರೆ ಸ್ಥಳಗಳ ಪರಿಚಯವಿಲ್ಲ. ತಮ್ಮ ಬೆನ್ನಮೇಲೆ ಯಾರಾದರೂ ಕುಳಿತಿರಲಿ, ಇಲ್ಲ ಭಾರವಿರಲಿ, ಯಾರೊಬ್ಬರ ಅಣತಿಯೂ ಬೇಕಿಲ್ಲದಂತೆ ಹೊರಡುತ್ತವೆ.

ಶಿಖರಗಳನ್ನು ನೋಡಲು ದೂರದರ್ಶಕಗಳು ಸಿಗುತ್ತವೆ. ಒಂದು ಶಿಖರವನ್ನು ನೋಡಲು ಮೂರು ರೂಪಾಯಿ. ಕನಿಷ್ಟ ಮೂವತ್ತು ರೂಪಾಯಿಗಳನ್ನು ವೆಚ್ಚಮಾಡಿ, ಅಯ್ಯೋ.... ಇಷ್ಟೇನಾ ಅನ್ನಲು ನೀವು ತಯಾರಿರಬೇಕು. ಅಲ್ಲಿ ಹಿಮಾಚಲಪ್ರದೇಶದ ಸಾಂಪ್ರದಾಯಿಕ ಉಡುಗೆಗಳು ಬಾಡಿಗೆಗೆ ಸಿಗುತ್ತವೆ. ಅವನ್ನು ಧರಿಸಿ, ಫೋಟೋ ತೆಗೆಸಿಕೊಳ್ಳಲು ಆಸಕ್ತಿಯಿದ್ದವರು ಆ ತುಸು ವೇಳೆಗೇ ಹತ್ತು ರೂಪಾಯಿ ಕೊಡಬೇಕಾಗುತ್ತದೆ. ಆ ಉಡುಗೆಗಳಲ್ಲಿಯ ಉಣ್ಣೆಗಳು ಕಚ್ಚಿದಾಗಲೂ ಕೂಡಾ ಫೋಟೋಗ್ರಾಫರನೆದರು ನಗುವ ಮುಖ ತೂರಬೇಕಾಗುತ್ತದೆ. ಹಿಮಾಲಯದ ಯಾಕ್‌ಗಳೂ ಇಲ್ಲಿ ನಿಮ್ಮೊಡನೆ ಫೋಸ್ ಕೊಡುತ್ತವೆ. ಆದರೆ ಅವು ಸ್ಮೈಲ್ ಎಂದಾಗ ನಗುವುದಿಲ್ಲ.

★★★

ಮೂವತ್ತೈದು ಜನರನ್ನು ಒಂದು ಹಾಲ್‌ನಲ್ಲಿ ತಂಗಲು ವ್ಯವಸ್ಥೆ ಮಾಡಲಾಗಿತ್ತು. ಎಲ್ಲರಿಗೂ ಸೇರಿ ಇರುವುದು ಬರಿಯ ನಾಲ್ಕೇ ಸ್ನಾನಗೃಹಗಳು. ಗೀಸರ್ ಸ್ವಿಚ್ ಹಾಕಿ ಅರ್ಧ ಗಂಟೆಯಾದರೂ ನೀರು ಬಿಸಿಯೇ ಆಗುವುದಿಲ್ಲ. ಬಿಸಿ ನೀರು ಬಂದರೂ ಮತ್ತೆ ಸ್ವಲ್ಪ ಹೊತ್ತಿನಲ್ಲಿ ಮೈ ಕೊರೆಯುವ ಥಂಡಿ ನೀರು ಬಂದು, ಸೋಪು ಹಚ್ಚಿಕೊಂಡವರು ಅದನ್ನು ತೊಳೆಯಲಾಗದೆ ಪರದಾಡಿದ್ದು, 'ಆಯ್ತೇನ್ರೀ... ಬೇಗ ಬನ್ನಿ', ಎಂದು ತಮ್ಮ ಸರದಿಗಾಗಿ ಜನ ಕಾಯುತ್ತಿರುವುದು ಅಲ್ಲಿದ್ದ ಮೂರು ದಿನಗಳಲ್ಲೂ ಸರ್ವೇಸಾಮಾನ್ಯವಾಗಿತ್ತು. ಕೆಲವರು ಸ್ನಾನಮಾಡದೇ ಹಾಗೆಯೇ ಇದ್ದದ್ದೂ ಇತ್ತು. ಯಾಕೆಂದರೆ ಅಲ್ಲಿ ಮೈ ಬೆವರುವುದೇ ಇಲ್ಲ.

ಸಿಮ್ಲಾದಲ್ಲಿ ಮಾತ್ರವಲ್ಲ, ಹಿಮಾಚಲಪ್ರದೇಶದ ಯಾವುದೇ ನಗರಗಳಲ್ಲಿ ವಿದ್ಯುತ್ ಕಂಬಗಳೇ ಕಡಿಮೆ. ಹುಗಿದ ಕಂಬಗಳು ಬಹುಕಾಲ ಇರುವುದಿಲ್ಲ. ಆದುದರಿಂದ ಪ್ಲಾಸ್ಟಿಕ್ ಹೊರಕವಚವಿರುವ ತಂತಿಗಳನ್ನು ಮರದಿಂದ ಮರಕ್ಕೆ, ಮನೆಯ ಕಂಬಗಳ ಮೂಲಕ ಸಾಗಿಸಿರುತ್ತಾರೆ. ತಂತಿಗಳು

ಸಮಾನಾಂತರವಾಗಿರುವುದಿಲ್ಲ, ಬದಲಿಗೆ ಒಂದರ ಕೆಳಗೆ ಇನ್ನೊಂದಿರುತ್ತವೆ. ಇಲ್ಲಿ ವಿದ್ಯುತ್ ಕಡಿತ, ಫೋನ್ ಸಂಪರ್ಕ ಕಡಿತ, ಇವೆಲ್ಲಾ ಮಾಮೂಲು. ಅವುಗಳನ್ನು ಬಹುಬೇಗ ರಿಪೇರಿ ಮಾಡುತ್ತಾರೆ ಕೂಡಾ.

ಅವತ್ತು ರಾತ್ರಿಯೂ, ಸುಮಾರು ಹತ್ತು - ಹನ್ನೊಂದರ ಸುಮಾರಿಗೆ, ಹೀಗೇ ಆಯಿತು - ವಿದ್ಯುತ್ ಹೋದ ಕೂಡಲೇ ಹೋಟಲಿನ ಡಾರ್ಮೆಟರಿಯಲ್ಲಿ ಸೇರಿದ ಜನರಲ್ಲಿ ಹಾಹಾಕಾರ. ಮೇಣದ ಬತ್ತಿಗಳನ್ನು ತಂದು ಅಲ್ಲಲ್ಲಿ ಉರಿಸಿದರೂ ಮಂಕು ಬೆಳಕು. ಬೀಸುವ ಗಾಳಿಯಲ್ಲಿ ದೀಪಗಳನ್ನು ಆರದಂತೆ ಉಳಿಸಿಕೊಳ್ಳುವಷ್ಟರಲ್ಲಿ ಸಾಕು ಸಾಕಾಯಿತು. ಸ್ವಲ್ಪ ಹೊತ್ತಿನಲ್ಲಿ....

ಮಿಥಿಲಾ ಎದ್ದವಳು ತೂರಾಡುತ್ತಾ ಬಚ್ಚಲಿನ ಕಡೆಗೆ ಓಡಿದಳು. ಹೋಗುವ ಮೊದಲೇ ಗವ್ ಎಂದು ವಾಂತಿ ಮಾಡಿದಳು. ಅವಳ ಚಿಕ್ಕಪ್ಪ ಸಿದ್ಧರಾಮಯ್ಯ ಮತ್ತು ಅವರ ಪತ್ನಿ ಏನೂ ಅರ್ಥವಾಗದೇ ಮಿಕ ಮಿಕ ನೋಡಿದರು. ಅವಳ ಆರೋಗ್ಯ ಕೆಟ್ಟರೆ ತಾಪತ್ರಯ. ನಾಳೆ ಬೆಳಿಗ್ಗೆಯೇ ಮತ್ತೆ ಪ್ರಯಾಣ ಮುಂದುವರಿಸಬೇಕು. ಏನಾಯ್ತೋ ಎನ್ನುತ್ತಾ ವಿಚಾರಿಸಿದರೂ ಅವಳಿಂದ ಸರಿಯಾದ ಉತ್ತರವಿಲ್ಲ. ಅವಳ ಮುಖಮಾರ್ಜನೆ ಮಾಡಿಸಿ ಮತ್ತೆ ಹಾಸಿಗೆಯಲ್ಲಿ ತಂದು ಮಲಗಿಸಿದರೂ ಅವಳ ಕೆಂಪುಗಣ್ಣುಗಳು, ಅವಳ ಅಸ್ಪಷ್ಟ ಅಸಂಬದ್ಧ ಮಾತುಗಳು ಆ ಕತ್ತಲೆಯಲ್ಲಿ ಭಯಂಕರವಾಗಿ ಕಾಣಿಸಿತು. ಇವಳಿಗೆ ಯಾವುದೋ ದೆವ್ವ ಮೈಮೇಲೆ ಬಂದಿರಬಹುದು ಎಂದು ಹೆಚ್ಚಿನವರು ತೀರ್ಮಾನಿಸಿದರು. ರಾಜ್ ಉರುಫ್ ಅಂತೋನಿ ರಾಜ್, ಘೋಷಿಸಿದ, ಸರ್ವ ಶಕ್ತ ದೇವರನ್ನು ಪ್ರಾರ್ಥಿಸಿ. ಎಲ್ಲವೂ ಪರಿಹಾರವಾಗುವುದು ಎಂದು. ಎಲ್ಲವೂಗಳಲ್ಲಿ ಯಾವುದಾವುದು ಸೇರಿವೆ ಎಂಬುದು ಅವನಿಗೆ ಮಾತ್ರ ಗೊತ್ತು.

★★★

ಸುದ್ದಿ ಎಲ್ಲಿಂದ ಹುಟ್ಟಿತೋ ಗೊತ್ತಿಲ್ಲ, ಪ್ಲೇಗ್ ರೋಗಾಣುಗಳ ತರಹ ಬಹುಬೇಗ ಹರಡಿತು. ಮಿಥಿಲಾ ಗುಣ ಅಷ್ಟಕ್ಕಷ್ಟೇ, ಸ್ತ್ರೀ ಸಹಜವಾದ ಗಾಂಭೀರ್ಯ, ನಾಜೂಕು, ಇವಾವುದೂ ಇಲ್ಲ. ಹೆತ್ತವರು ಅವಳನ್ನು ಬಹು ಸಲಿಗೆಯಿಂದ ಬೆಳೆಸಿದ್ದಾರೆ. ಅದಕ್ಕೇ ಹೇಳುವವರು - ಕೇಳುವವರು ಯಾರೂ ಇಲ್ಲದೆ ಏನೋ ಮಾಡಿಕೊಂಡಿದ್ದಾಳೆ. ಅವಳ ಚರ್ಯೆಯನ್ನು ಕೆಲದಿನಗಳಿಂದ ನೋಡುತ್ತಿಲ್ಲವೇ ಎಲ್ಲರೂ. ಗಂಡುಗಳೂ ಅಂದ್ರೆ ಅದೇನು ಮೈಮೇಲೆ ಬೀಳ್ತಾಳೆ! ತಲೆಗೆ ಹಾಕಿದ ನೀರು ಕಾಲಿಗೆ ಬೀಳದೆ ಇರುತ್ತದೆಯೇ?

ಈ ಸುದ್ದಿಗಳೆ ಹಾಗೆ; ಹರಡುತ್ತಾ ಹರಡುತ್ತಾ ಹೆಚ್ಚು ಹೆಚ್ಚು ರಂಜನೀಯ ಅಂಶಗಳನ್ನು ತನ್ನಲ್ಲಿ ಮೈಗೂಡಿಸಿಕೊಳ್ಳುತ್ತಾ, ವಿಸ್ತಾರವಾಗುತ್ತಾ ಹೋಗುತ್ತವೆ. ಕೊನೆಗೆ ಮೂಲ ವಿಷಯ ಯಾವುದು ಎಂಬುದೂ ಮರೆತುಹೋಗುತ್ತದೆ. ಆದರೆ ಮಿಥಿಲಾಗೇನಾಯಿತು ಎಂಬುದು ರಾಮಕೃಷ್ಣನಿಗೆ ಮಾತ್ರ ಗೊತ್ತು. ಅದನ್ನು ಅವನು

ಕೊನೆಗೆ ಬಾಯಿಬಿಡಲಿಲ್ಲ. ಬಿಟ್ಟರೆ ಎಲ್ಲಕ್ಕೂ ಅವನೇ ಕಾರಣೀಭೂತನಾಗುತ್ತಾನೆ, ಎಲ್ಲರ ಕೋಪಕ್ಕೆ ಪಾತ್ರನಾಗುತ್ತಾನೆ.

ಏನೇ ಆಗಿರಲಿ, ಇದರಿಂದ ಹೆಚ್ಚು ಸಂತೋಷಪಟ್ಟವರೆಂದರೆ ಮಕ್ಕಿತ್ತಾಯರು. ತನ್ನನ್ನ ಅಂಕಲ್ ಎಂದು ಕರೆದಳಲ್ಲವೇ ಲೌಡಿ.... ಇವಳಿಗೆ ಹೀಗೇ ಆಗಬೇಕು!

★★★

ಕಿರು ನಗರ ಕುಲು, (ಇಂಗ್ಲೀಷಿನಲ್ಲಿ ಕುಲ್ಲು ಎಂದು ಬರೆಯುತ್ತಾರೆ) ದಸರಾ ಹಬ್ಬಗಳಿಗೆ ಸುಪ್ರಸಿದ್ಧ. ನಮ್ಮ ಕರ್ನಾಟಕವನ್ನು ಬಿಟ್ಟರೆ ಅತ್ಯಂತ ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುವವರು ಇವರು. ಉತ್ತರ ಭಾರತದಲ್ಲಿ ಇತರ ದೇವರುಗಳಿಗಿಂತ ದೇವಿಯರೇ ಹೆಚ್ಚು ಪ್ರಸಿದ್ಧ. ನಂತರದ ಸ್ಥಾನದಲ್ಲಿ ರಾಮಚಂದ್ರ ಬರುತ್ತಾನೆ. ಇದೊಂದು ಕಣಿವೆ. ಇಲ್ಲಿ ರಥಯಾತ್ರೆ ವರ್ಣರಂಜಿತ. ಮಂಡಿಯಿಂದ ಕುಲುವಿನ ತನಕ ಸಾಗುತ್ತದೆ ಪಾರ್ವತಿ ನದಿ. ಇದು ನಗರದ ಏಕೈಕ ಕಿರಿದಾದ ಬೀದಿಯ ಪಕ್ಕದಲ್ಲಿಯೇ ಹರಿಯುತ್ತದೆ. ಅದರ ಬಲ-ಎಡಕ್ಕೆ ಬೆಟ್ಟಗುಡ್ಡಗಳು. ಚಳಿಗಾಲಕ್ಕೆ ಉಪಯುಕ್ತವಾದ ಉಣ್ಣೆಯ ಬಟ್ಟೆಗಳು ಇಲ್ಲಿ ಕಡಿಮೆ ಬೆಲೆಯಲ್ಲಿ ದೊರೆಯುತ್ತವೆ. ಸಿಮ್ಲಾಕ್ಕೆ ಹೋಲಿಸಿದರೆ ಇಲ್ಲೇ ವಾಸಿ. ರಾತ್ರಿಯ ಬೆಳಕಿನಲ್ಲಿ ನದೀ ತೀರದಲ್ಲಿ ಕುಳಿತಿರುವ ಆನಂದ ವರ್ಣಿಸಲಸದಳ. ನೀರವತೆಯನ್ನು ಕಲಕುವ ನದಿಯ ಕಲರವ ಕಿವಿಗೆ ಆಹ್ಲಾದಕಾರಿ. ಸಿಮ್ಲಾಕ್ಕೆ ಹೋಲಿಸಿದರೆ ಇಲ್ಲಿ ಚಳಿ ಕಡಿಮೆ.

★★★

ಮೂವತ್ತೈದು ಜನರನ್ನು ಒಂದೇ ಕೋಣೆಯಲ್ಲಿ ತಂಗಲು ವ್ಯವಸ್ಥೆ ಮಾಡಲಾಗಿತ್ತು. ದಿನವಿಡೀ ಪ್ರಯಾಣಿಸಿ ದಣಿದಿದ್ದ ಪ್ರಯಾಣಿಕರು, ಅವರಲ್ಲಿಯೂ ಹೆಂಗಸರು ಅದಾಗಲೇ ತಮ್ಮ ತಾಳ್ಮೆಯನ್ನು ಕಳೆದುಕೊಂಡಿದ್ದರು. ತಾವು ಇರಬೇಕಾದ ಧರ್ಮಛತ್ರವನ್ನು ಹೊರಗಿನಿಂದ ನೋಡಿದವರೇ ಎಲ್ಲರೂ ಇಳಿಯಲು ಪ್ರತಿಭಟಿಸಿದರು. ಇಲ್ಲಿ ನಾವಿರಲು ಸಾಧ್ಯವಿಲ್ಲ. ಬೇರೆ ಒಂದು ಒಳ್ಳೆಯ ವ್ಯವಸ್ಥೆ ಮಾಡಿ ಎಂದು ಕೂಗುತ್ತಲೇ ಮೇಸ್ತ್ರಿ ಟ್ರಾವೆಲ್ಸ್‌ಗೆ ಧಿಕ್ಕಾರ ಎಂದು ಕೂಗತೊಡಗಿದರು. ಎಲ್ಲರ ಮುಖದಲ್ಲಿಯೂ ಕ್ರೋಧ ಉಕ್ಕುತ್ತಿತ್ತು.

ಜೊತೆಯಲ್ಲಿಯೇ ಬಂದಿದ್ದ ಮೇನೇಜರ್ ಕಂ ಗೈಡ್ ಮೂರ್ತಿ ಒಮ್ಮೆಲೇ ನಿರಾಶನಾದ. ಪ್ರವಾಸಿ ಸಂಸ್ಥೆಗೆ ಹೆಚ್ಚು ಬಿಲ್ ಕೊಟ್ಟು ಕೆಲವಾರು ಸಾವಿರಗಳನ್ನಾದರೂ ಪ್ರತೀ ಬಾರಿ ತನ್ನದಾಗಿಸಿಕೊಳ್ಳುತ್ತಿದ್ದವನು ಇಲ್ಲಿ ಕೈಬಿಚ್ಚಬೇಕಾಗಿ ಬಂದುದಕ್ಕೆ ಏನು ಮಾಡಲೂ ತೋಚದೆ ಒಂದು ಕ್ಷಣ ನಿಂತ. 'ಈ ಹೊತ್ತಿನಲ್ಲಿ ಈ ಊರಿನಲ್ಲಿ ಎಲ್ಲಿಯೂ ರೂಮು ಸಿಗೋಲ್ಲ. ನೋಡಿ.... ನಾನು ಮೊದಲೇ ಸಾವಿರ ರೂಪಾಯಿ ಕೊಟ್ಟು ಬುಕ್ ಮಾಡಿಸಿದ್ದರೂ ಬೇರೆಯವರಿಗೆ ಕೊಟ್ಟಿದ್ದಾರೆ. ಏನು ಮಾಡೋದು.... ಈವಾಗ ಅಡ್ಜಸ್ಟ್ ಮಾಡೋದರ ವಿನಃ ಬೇರೆ ದಾರಿಯೇ ಇಲ್ಲ' ಎಂದು ಮನದಟ್ಟು ಮಾಡಲು ಯತ್ನಿಸಿದ. ಅವನು ಹೇಳಿದ ಮಾತೆಲ್ಲಾ ಸುಳ್ಳೆಂದು ಪ್ರಯಾಣಿಕರಿಗೆ ಆಗಲೇ

ಅರಿವಾಗಿತ್ತು. ಈಗ ತಮಗೆ ಬೇರೆ ವ್ಯವಸ್ಥೆ ಮಾಡದಿದ್ದರೆ ಪೋಲೀಸ್ ಸ್ಟೇಷನ್‌ಗೆ ಹೋಗುತ್ತೇವೆ... ಕನ್ಸೂಮರ್ಸ್ ಫೋರಂಗೆ ತಿಳಿಸುತ್ತೇವೆ, ಬೆಂಗಳೂರಿಗೆ ಫೋನ್ ಮಾಡಿ ಮೇಸ್ತ್ರಿ ಟ್ರಾವೆಲ್ಸ್ ಮಾಲಿಕರಿಗೆ ವಿಷಯ ವಿವರಿಸುತ್ತೇವೆ ಎಂದೆಲ್ಲಾ ಕೂಗಿದರು. ಬೆಳಿಗ್ಗೆ ಹಂಚಿ ಉಳಿದಿದ್ದ ತಿಂಡಿಯನ್ನು ಡಾಬಾ ಒಂದಕ್ಕೆ ಮಾರಿ ಹಣ ಪಡೆದಿದ್ದ. ಟ್ರಾವೆಲ್ಸ್‌ನವರು ಕೊಟ್ಟ ಹಣದಿಂದ ಉಳಿಸುವ ಯತ್ನ ಇದು ಎಂದು ಎಲ್ಲರೂ ಅರಿತಿದ್ದರು.

'ಡೌನ್ ಡೌನ್ ಮೂರ್ತಿ', ಜನ ಕೂಗತೊಡಗಿದರು. ರೂಮಿನ ವ್ಯವಸ್ಥೆ ಮಾಡಿಕೊಡದಿದ್ದರೆ ತನ್ನನ್ನು ಹೊಡೆದು ಪಾರ್ವತಿ ಹೊಳೆಗೆ ಹಾಕಿದರೂ ಹಾಕಿಯಾರು ಎಂದು ಭಯಗೊಂಡ ಮೂರ್ತಿ ನಗರದ ಹೋಟೆಲಿನಲ್ಲಿ ಎಲ್ಲರಿಗೂ ರೂಮು ಮಾಡಿಕೊಟ್ಟ. ಪ್ರಯಾಣಿಕರಲ್ಲಿ ವಿಜಯದ ಹರ್ಷ ಹರಡಿತ್ತು. ಅದೇ ಪ್ರತಿಭಟನಾ ಶಕ್ತಿಯನ್ನು ಕೊನೆಯ ತನಕ ಉಳಿಸಿಕೊಂಡರು. ರಾಮಕೃಷ್ಣನಿಗೆ ನಿನ್ನೆ ರಾತ್ರಿ ದೇಹ ಬೆಚ್ಚಗೆ ಮಾಡಿಕೊಳ್ಳಲೇಬೇಕೆಂದೆನ್ನಿಸಿತು. ಚಳಿಯಲ್ಲಿ ನಡುಗುತ್ತಲೇ ಹೊರಬಂದ. ಕಣ್ಣೆದುರು ಒಂದು ವೈನ್‌ಶಾಪ್ ಕಾಣಿಸಿತು. ಹತ್ತಿರ ಹೋಗಿ ಒಳಗೆ ಸಪ್ಲೈ ಇದೆಯೇ ಎಂದು ಕೇಳಿದ. ಅವನ ಹಿಂದಿ ಅವನಿಗೆ ಮಾತ್ರ ಅರ್ಥವಾಗಬೇಕು. ಕನ್ನಡದ ಒಂದುಪದ ಕೂಡಾ ಅಲ್ಲಿನವರಿಗೆ ತಿಳಿಯದು. ಕೊನೆಗೂ ಪರದಾಡಿ, ಪರದಾಡಿ, ಅರ್ಧ ಕೈ ಸನ್ನೆಯ ಮೂಲಕ, ಇನ್ನರ್ಧ ಮಾತಿನ ಮೂಲಕ ಅಂಗಡಿಯವನಿಗೆ ವಿವರಿಸಲು ಶಕ್ತನಾದ ರಾಮಕೃಷ್ಣ. ನಾವು ಬರೀ ಮಾರ್ತೀವಿ. ಕುಡಿಯೋಕೆ ನೀವೇ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದನು ಅಂಗಡಿಯವನು. ಕೊನೆಗೆ ಉಪಾಯಮಾಡಿ ಒಂದು ಕ್ವಾರ್ಟರ್ ಜಿನ್ ಕೊಂಡ. ಒಂದು ಬಿಸ್ಲೇರಿ ಬಾಟಲಿ ಕೊಂಡು ಅದರಲ್ಲಿದ್ದ ಸ್ವಲ್ಪ ನೀರನ್ನು ಖಾಲಿ ಮಾಡಿ, ಅದಕ್ಕೆ ಜಿನ್ ಸುರಿದ. ಅದನ್ನು ತೆಗೆದುಕೊಂಡು ಲಾಡ್ಜಿಗೆ ಹೋಗಿ, ಸ್ವಲ್ಪ ಕುಡಿದು, ಮಂಚದ ಕೆಳಗೆ ಇಟ್ಟ. ವಿದ್ಯುತ್ ಹೋದ ಸಮಯದಲ್ಲಿ, ಅದನ್ನೇ ನೀರು ಎಂದುಕೊಂಡು ಕುಡಿದ ಮಿಥಿಲಾ ಪಟ್ಟಪಾಡು ಈಗಾಗಲೇ ನಿಮ್ಮ ಗಮನಕ್ಕೆ ಬಂದಿದೆ. ಹೀಗೆ ನಡೆಯಿತೆಂದು ರಾಮಕೃಷ್ಣನೇ ಕಲೆವರೊಂದಿಗೆ ಅಂದರೂ ಅದು ಎಲ್ಲೆಡೆ ಹರಡಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ.

★★★

ಮರುದಿನ ಕುಲುವಿನಿಂದ 44 ಕಿ.ಮೀ. ದೂರದ ಮಣಿಕರ್ಣಕ್ಕೆ ಏರುಮುಖ ಪ್ರಯಾಣ. ಕೆಳಗೆ ಪ್ರಪಾತದಲ್ಲಿ ಹರಿಯುವ ಹಾಲು ನದಿ, ದೂಧ್ ಗಂಗಾ. ಇನ್ನೊಂದೆಡೆ ಎತ್ತರದ, ಯಾವತ್ತೂ ಕುಸಿದು ಮೇಲೆ ಬೀಳಬಹುದೆನಿಸುವ ಬೆಟ್ಟಗಳು. ಕಿರಿದಾದ ರಸ್ತೆ ಅಲ್ಲಲ್ಲಿ ಕುಸಿದಿರುತ್ತದೆ. ಅದನ್ನು ನಿರಂತರವಾಗಿ ರಿಪೇರಿ ಮಾಡುತ್ತಿರಬೇಕಾಗುತ್ತದೆ. ನದಿಯ ಪಾತ್ರ ದಿನದಿನಕ್ಕೂ ವಿಸ್ತರಿಸುತ್ತಾ ಇಂದು ಇಲ್ಲಿ ಇದ್ದ ಸೇತುವೆ, ಮನೆ, ರಸ್ತೆಗಳು ಮರುದಿನವೇ ಕೊಚ್ಚಿಹೋಗಬಹುದು. ರಸ್ತೆ

ಕುಸಿಯದಂತೆ ಕಲ್ಲುಗಳನ್ನು ಪೇರಿಸಿ, ಅದನ್ನು ತಂತಿಗಳ ಜಾಲದಲ್ಲಿ ಕಟ್ಟಿದರೂ ಕೂಡಾ ಕುಸಿತವನ್ನು ತಡೆಯಲು ಆಗುತ್ತಿಲ್ಲ. ಮುರಿದು ಬಿದ್ದ ಮರ-ಕಂಬಗಳು, ಭಾಗಶಃ ಕುಸಿದ ಮನೆಗಳು ಸರ್ವೇ ಸಾಮಾನ್ಯ. ಯಾವುದೇ ರಸ್ತೆ ಯಾವಾಗ ಬೇಕಾದರೂ ಕೆಳಗುರುಳಬಹುದು. ಬಿದ್ದ ವಾಹನಗಳನ್ನು ಮೇಲೆತ್ತುವುದೂ ಅಸಾಧ್ಯವೆನಿಸುವಷ್ಟು ಕಿರು ರಸ್ತೆಗಳು. ಬಸ್ಸು ಬದಿಯಲ್ಲಿ ಸಾಗುವಾಗ ಅಳ್ಳೆದೆಯವರು, ಹೆಂಗಸರು ಭಯದಿಂದ ನಡುಗುತ್ತಿದ್ದರು. ಮೊದಲು ಯಾವುದೇ ಸ್ಥಾನಿಕ ದೇವರ ಹೆಸರನ್ನು ಮೂರ್ತಿ ಹೇಳಿದಾಗಲೂ ಜೈ ಅನ್ನದಿದ್ದ ಬಸ್ಸಿಗರು ಈಗ ಪ್ರಾಣ ರಕ್ಷಣೆಗಾಗಿ ಎಲ್ಲಾ ಮೂವತ್ತಮೂರು ಕೋಟಿ ಪ್ಲಸ್ ಒಂದು - ಖುಷ್ಬುದು - ದೇವರನ್ನು ನೆನಸುವಷ್ಟು ಹೆದರಿದ್ದರು. ಆಪಾದಿಸುವವರು, ಗೊಣಗುವವರು ಬಸ್ಸಿನಲ್ಲಿ ಉದ್ಭವಿಸಿದರು.

ಅಲ್ಲಲ್ಲಿ ಹಗ್ಗದ ತೂಗು ಸೇತುವೆಗಳು, ಸಾಮಾನುಗಳನ್ನು ಸಾಗಿಸಲಿಕ್ಕೆ ಕಬ್ಬಿಣದ ರೋಪ್‌ವೇಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿದ್ದರು. ದಿನನಿತ್ಯವೂ ಅಭದ್ರತೆಯ ಜೀವನ, ಹೋರಾಟದ ಬದುಕು ಇಲ್ಲಿನವರದು.

ನದಿ, ನದಿಯ ಪಕ್ಕದ ದೇವಸ್ಥಾನಗಳ ಪಕ್ಕದಲ್ಲಿ ಬಿಸಿನೀರಿನ ಪ್ರಾಕೃತಿಕ ಚಿಲುಮೆ ಮಣಿಕರ್ಣದ ವೈಶಿಷ್ಟ್ಯ. ಸದಾ ಕುದಿಯುವ ನೀರು ಬುಗ್ಗೆಯಿಂದ ಹೊರಬರುತ್ತದೆ. ತೊಳೆದ ಅಕ್ಕಿಯನ್ನು ಐದು ನಿಮಿಷಗಳ ಕಾಲ ಅದರಲ್ಲಿ ಇಟ್ಟರೆ ಅನ್ನವಾಗುತ್ತದೆ. ಈ ನೀರು ಹಲವಾರು ಚರ್ಮರೋಗಗಳನ್ನು ಗುಣಪಡಿಸಬಹುದೆಂಬ ಹೇಳಿಕೆಯೂ ಇದೆ. ಹಾಗಾಗಿ ಸಮಪ್ರಮಾಣದಲ್ಲಿ ಬಿಸಿ-ತಣ್ಣನೆಯ ನೀರನ್ನು ಬೆರೆಸಿ, ಸ್ನಾನಕ್ಕೆ ಹದಮಾಡಿದ ವ್ಯವಸ್ಥೆಯೂ ಇದೆ. ಇಂತಹ ಕುದಿವ ನೀರು ಮನಾಲಿ, ಕುಲುಗಳಲ್ಲಿ ಕೂಡಾ ಉದ್ಭವಿಸುತ್ತದೆ. ಇದಕ್ಕೆ ಪೌರಾಣಿಕ ವಿವರಣೆಯನ್ನು ಕೂಡಾ ನೀಡಲಾಗಿದೆ. ಅಂತೆಯೇ ಇದು ಮಹಾಭಾರತದ ಕಾಲಕ್ಕೆ ನಮ್ಮನ್ನು ಹಿಂದೆ ಕರೆದೊಯ್ಯುತ್ತದೆ. ತಮ್ಮ ಜೀವದ ಮಹತ್ವ ಎಷ್ಟು ಎಂಬುದನ್ನು, ತಮ್ಮ ಪ್ರಾಣ ಎಷ್ಟು ಅಮೂಲ್ಯ ಎಂಬುದನ್ನು ತಿಳಿದುಕೊಳ್ಳಬೇಕೆನಿಸಿದರೆ ಇಂತಹ ಪ್ರದೇಶಗಳಲ್ಲಿ ತಿರುಗಾಡಿ ಮೈನವಿರೇಳಿಸುವ ಅನುಭವಗಳನ್ನು ಪಡೆಯಬೇಕು.

★★★

ಸದಾ ನೆನಪಿನಲ್ಲಿ ಉಳಿಯುವ ಇನ್ನೊಂದು ಸ್ಥಳ ಎಂದರೆ ರೊಹಟಂಗ್ ಪಾಸ್. ಇಲ್ಲಿ ಲಹಾ ಉಲ್ ಮತ್ತು ಸ್ಪಿತಿ ಕಣಿವೆಗಳು ಇದ್ದು ಇಲ್ಲಿನ ಎತ್ತರ ಸಮುದ್ರಮಟ್ಟದಿಂದ 3978 ಅಡಿಗಳು. ಜೂನ್‌ನಿಂದ ಅಕ್ಟೋಬರ್ ತನಕ ಮಾತ್ರ ಪಾಸ್ ತೆರೆದಿರುತ್ತದೆ. ಆ ಸಮಯದಲ್ಲಿ ಮಂಜು ಕರಗಿರುತ್ತದೆ. ಏಪ್ರಿಲ್‌ನಲ್ಲಿ ಅಲ್ಲಲ್ಲಿ ಚದುರಿದಂತೆ ಹರಡಿರುವ ಮಂಜುಗಡ್ಡೆಯ ಮೇಲೆ ಜಾರುವುದು ಒಂದು ಅವಿಸ್ಮರಣೀಯ ಅನುಭವ.

ದಾರಿಯಲ್ಲಿಯ ಒಂದು ಅಂಗಡಿಯ ಮುಂದೆ ಬಸ್ ನಿಂತಿತು. ಅಲ್ಲಿ ಗಂ ಬೂಟುಗಳು, ಕೋಟುಗಳು, ಹ್ಯಾಂಡ್ ಗ್ಲವ್‌ಸುಗಳನ್ನು ಬಾಡಿಗೆಗೆ ಕೊಡಲಾಗುತ್ತದೆ.

ಚೌಕಾಶಿ ಮಾಡಿ, ಬೂಟುಗಳನ್ನು ಹತ್ತು ರೂಪಾಯಿ ಬಾಡಿಗೆಗೆ, ಕೋಟನ್ನು ಇಪ್ಪತ್ತಕ್ಕೆ ಮತ್ತು ಗ್ಲವ್‌ಸುಗಳನ್ನು ಐದು ರೂಪಾಯಿ ಬಾಡಿಗೆಗೆ ನಿಗದಿಪಡಿಸಲಾಯಿತು. ಅಂಗಡಿಯವನು ಸ್ವಲ್ಪ ದೂರ ಬಸ್ಸಿನಲ್ಲಿಯೇ ಬಂದು ಎಲ್ಲರಿಂದ ಹಣ ವಸೂಲಿ ಮಾಡಿದ.

ಭಾರತೀಯರ ಯೋಚನೆ ಸದಾ ಕೊಂಕು ಎನ್ನುತ್ತಾರೆ. ನಾವು ಇವನ್ನು ವಾಪಾಸು ಮಾಡದಿದ್ದರೆ ಹೇಗೆ ಎಂದು ಕೆಲವರು ಹೇಳಿದರು ಕೂಡಾ. ಆ ತೊಡುಗೆಗಳಿಗೆ ಬೆಲೆ ಕಡಿಮೆ ಇರಬಹುದು. ಆದರೂ ಅವನಿಗೆ ಅದು ಬೇಕೇ ಬೇಕು. ಆದರೆ ಹಾಗಾಗಲಿಲ್ಲ, ವಾಪಾಸು ಬರುವಾಗ ಬಸ್ಸಿನವನು ಅಲ್ಲಿಯೇ ಪುನಃ ನಿಲ್ಲಿಸಿದ. ಡ್ರೈವರ್ 250 ರೂಪಾಯಿಗಳ ಕಮಿಷನ್ ಅನ್ನು ಅವನಿಂದ ತಪ್ಪದೇ ಪಡೆದ.

ಪಾಸ್ ದಾರಿಯಲ್ಲಿ ಮಂಜಿನ ಬೆಟ್ಟ ಇದ್ದ ಕಾರಣ ಹೆಚ್ಚು ಮೇಲಕ್ಕೆ ಬಸ್ ಹೋಗಲಾಗಲಿಲ್ಲ. ದಾರಿಯಲ್ಲಿ ನಿಂತ ಬಸ್ಸಿನಿಂದ ಇಳಿಯುವಾಗ ಉತ್ಸಾಹದಿಂದ ಇದ್ದವರು ತುಸುವೇ ಮೇಲಕ್ಕೆ ಏರುತ್ತಲೇ ಏದುಸಿರು ಬಿಡತೊಡಗಿದರು. ಮರಳಿನಲ್ಲಿ ನಡೆಯುವುದು ಹೇಗೆ ಕಷ್ಟವೋ ಹಾಗೆಯೇ ಮಂಜು ಗಡ್ಡೆಯ ಮೇಲೆ ಸಾಗುವುದು. ಕಾಲು ಪದೇ ಪದೇ ಜಾರುತ್ತದೆ. ಮಣ್ಣಿರುವ ಜಾಗ ನೀರಿನಿಂದ ಒದ್ದೆಯಾಗಿ ಕೆಸರಾಗಿತ್ತು. ಅಷ್ಟು ಮಾತ್ರವಲ್ಲ, ಮೇಲಕ್ಕೆ ಕರೆದುಕೊಂಡು ಹೋಗಲು ಅಲ್ಲಿ ದೊರೆಯುತ್ತಿದ್ದ ಕುದುರೆಗಳ ಲದ್ದಿ ಕೂಡಾ ಮಂಜಿನ ಹಾಸುಗೆಯನ್ನು ಕೊಳಕಾಗಿಸಲು ತನ್ನ ಪಾತ್ರವನ್ನು ವಹಿಸಿತ್ತು. ಕೆಳಗೆ ಮಾರುತ್ತಿದ್ದ ಮೀಟರ್ ಉದ್ದದ ಕೋಲುಗಳನ್ನು ಎರಡು ರೂಪಾಯಿ ಉಳಿಸುವ ಉದ್ದೇಶದಿಂದ ಕೆಲವರು ಕೊಂಡಿರಲಿಲ್ಲ. ಹಾಗಾಗಿ ದೇಹವನ್ನು ನಿಯಂತ್ರಿಸುತ್ತಾ ಸ್ವಲ್ಪ ದೂರ ಮಾತ್ರ ಸಾಗಿದವರು ಕೆಲವರು. ಕನಿಷ್ಠ ಎರಡು ಕಿಲೋ ಭಾರದ ಷೂವನ್ನು ಹೊರುವುದು ಕೂಡಾ ಕೆಲವರಿಗೆ ಹಿಂಸೆಯಾಯಿತು.

ಎಲ್ಲರೂ ಒಟ್ಟಿಗೇ ಹೊರಟರೂ ಕನಿಷ್ಠ ನೂರು ಮೀಟರುಗಳನ್ನು ಏರಿದವರು ಕೆಲವೇ ಮಂದಿ. ಅವರಲ್ಲಿ ಮಿಥಿಲಾ ಒಬ್ಬಳು ಮತ್ತು ಇನ್ನೊಬ್ಬ ಸುರೇಶ. ಕೊನೆಗೆ ಅವರಿಬ್ಬರೂ ಕೈಕೈ ಹಿಡಿದುಕೊಂಡು ಮೇಲೆ ಮೇಲೆ ಏರಿ, ಕೊನೆಗೆ ಮಂಜಿನಲ್ಲಿ ಜೊತೆಗೇ ಜಾರಿ ಕೆಳಗೆ ಬಂದಾಗ ಕೆಲವರ ಕಣ್ಣುಗಳು ಕೆಂಪಾದವು. ಕೆಲವರು ಮತ್ಸರದಿಂದ, ಕೆಲವರು ಅಸಹ್ಯದಿಂದ ಮೂಗು ಮುರಿದರು. ಅವನಿಗಂತೂ ನಾಚಿಕೆ ಇಲ್ಲ, ಇವಳಿಗಾದರೂ ಇರಬಾರದೇ... ಗಂಡು ಹುಡುಗನ ಜೊತೆ ನಿಲ್ಲೋದೇನು, ಹರಟೆ ಕೊಚ್ಚೋದೇನು, ಫೊಟೋ ತೆಗೆಸಿಕೊಳ್ಳೋದೇನು... ಜಾರೋದೇನು.... ಸುರೇಶನಿಗೆ ಒಳಗೊಳಗೇ ನಗು. ಇತರರ ಭಾವನೆಗಳನ್ನು ಕಲ್ಪಿಸಿ ಕಲ್ಪಿಸಿ ಆನಂದಿಸಿದ. ಬೇರೆಯವರು ಕರುಬುವಂತೆ ಮಾಡುವುದರಲ್ಲಿ ಕೂಡಾ ಮಜಾ ಇರುತ್ತದೆ.

ಸೊಳ್ಳೆಗೆ ಹೆದರಿದ ವಿಷ್ಣು ಕ್ಷೀರಸಾಗರದಲ್ಲಿ ಮಲಗಿದಂತೆ, ಈಶ್ವರ ಕೈಲಾಸ ಪರ್ವತಕ್ಕೇರಿದನಂತೆ. ನಿಜ..... ಚಳಿಯ ಹವೆಯಲ್ಲಿ ಸೊಳ್ಳೆಗಳು ಕಾಣಸದಿದ್ದರೂ

ನೊಣಗಳು ಮಾತ್ರ ವಿಪರೀತ. ರೊಹಟಂಗ್ ಪಾಸ್‌ನಲ್ಲಿ ಬಿಸಿ ಬಿಸಿ ಚಹಾಕ್ಕೆ ಸಾಲಾಗಿ ಬಂದು ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವ ನೊಣಗಳ ದಂಡೇ ಇದೆ. (ಆತ್ಮಹತ್ಯಾದಳ?) ಅದೇನು ಫ್ಯಾಷನ್ನೋ ಅವಕ್ಕೆ! ಇಲ್ಲಿ ಕೂಡಾ ಐಸ್‌ಕ್ರೀಂ, ತಣ್ಣನೆಯ ಬಾಟಲಿ, ಕಾಗದದ ಹೊರಮೈಯ ಪಾನೀಯಗಳು ದೊರೆಯುತ್ತವೆ. ಅವುಗಳನ್ನು ಅಲ್ಲೇ ಸಿಗುವ ಮಂಜುಗಡ್ಡೆಯಲ್ಲಿ ಮುಳುಗಿಸಿ ಇಡುತ್ತಾರೆ. ಇಲ್ಲಿ ಬಂದು ರೆಫ್ರಿಜರೇಟರನ್ನು ಮಾರಲು ಯಾರಾದರೂ ಶಕ್ತನಾದರೆ ಅವನೇ ನಿಜವಾದ ಸೇಲ್ಸ್‌ಮನ್ ಎಂದು ಹೇಳಬಹುದು.

★★★

ಮತ್ತೆ ಶುರುವಾಯಿತು ಪ್ರಯಾಣ - ಮನಾಲಿಗೆ, ಕಣ್ಣು ನೋಯುವಷ್ಟು ಪ್ರಕೃತಿಯ ದೃಶ್ಯಗಳನ್ನು ನೋಡಿದ ಕೆಲವರು ನಿದ್ರಿಸತೊಡಗಿರುವಾಗ ರಾಜ್ ಮತ್ತೆ ತನ್ನ ಕ್ರೈಸ್ತ ಧರ್ಮದ ಮಹತ್ವವನ್ನು ಹೇಳತೊಡಗಿದ.

'ದೇವರ ಪವಾಡಗಳನ್ನು ನಾನು ಕಣ್ಣಾರೆ ಕಂಡೆ. ಸುವಾರ್ತಾ ಕೂಟದಲ್ಲಿ ಕ್ಯಾನ್ಸರ್ ರೋಗಿಯೊಬ್ಬನು ಪ್ರಾರ್ಥನೆ ಮಾತ್ರದಲ್ಲಿ ಗುಣಹೊಂದಿದ.'

'ನೋಡಿ... ನೋಡಿ. ನಿಮ್ಮ ದೇವರು ಇಷ್ಟೊಂದು ಪವಾಡಗಳನ್ನು ತೋರಿಸುತ್ತಾನೆ. ಹೀಗೇ ಮುಂದುವರಿದರೆ ಪ್ರಪಂಚದಲ್ಲಿ ಡಾಕ್ಟರುಗಳ ಅವಶ್ಯಕತೆಯೇ ಇರುವುದಿಲ್ಲ. ನಮ್ಮ ಜನಕ್ಕೆ ಬುದ್ಧಿ ಇಲ್ಲ. ಲಕ್ಷ ಲಕ್ಷ ಕೊಟ್ಟು ಎಂ.ಬಿ.ಬಿ.ಎಸ್. ಅದೂ ಇದೂ ಓದುವ ಬದಲು ನಿಮ್ಮ ದೇವರನ್ನೇ ನೆನೆದರೆ ಸಾಕಲ್ಲ.' ಪಕ್ಕದಲ್ಲಿ ಕುಳಿತ ಮಹೇಶ ಮತ್ತೆ ಕೊಂಕು ನುಡಿದ. ರಾಜ್ ನಿರಾಶನಾಗಲಿಲ್ಲ.

'ಪಶ್ಚಾತ್ತಾಪ ಪಟ್ಟರೆ ಪಾಪಗಳನ್ನೂ ಕ್ಷಮಿಸುತ್ತಾನೆ ದೇವರು. ಧರ್ಮಿಷ್ಠನಿಗೆ ಎರಡು ಜನ್ಮ ಮತ್ತು ಒಂದು ಸಾವು ಇರುತ್ತದೆ. ಪಾಪಿಗೆ ಒಂದು ಹುಟ್ಟು ಎರಡು ಸಾವುಗಳು.'

'ಒಂದು ಸಲ ಹುಟ್ಟಿಯೇ ಯಾಕೆ ಹುಟ್ಟಿದೆವೋ ಅನಿಸಿಬಿಟ್ಟಿದೆ. ಇನ್ನು ಎರಡು ಸಲ ಹುಟ್ಟುವ ಕರ್ಮ ಯಾರಿಗೆ ಬೇಕು ಹೇಳಿ. ಸರಿ... ಇದು ಮನುಷ್ಯರಿಗೆ ಮಾತ್ರವೋ ಅಲ್ಲ ಪ್ರಾಣಿಗಳಿಗೂ ಅನ್ವಯವಾಗುವುದೋ?' ಮತ್ತೆ ಕೇಳಿದ ಮಹೇಶ.

'ಇಲ್ಲ... ಇದು ಪ್ರಾಣಿಗಳ ಅನ್ವಯವಾಗುವುದಿಲ್ಲ.' ವಾದ ಹೀಗೆ ಮುಂದುವರಿಯಿತು. ಆದರೆ ರಾಜ್‌ನ ದನಿಯಲ್ಲಿ, ಮುಖದಲ್ಲಿ ತೃಣಮಾತ್ರವೂ ನಿರಾಶೆಯು ಕಾಣಿಸಿಕೊಳ್ಳಲಿಲ್ಲ.

★★★

ಮನಾಲಿಯು ಕುಲು ಕಣಿವೆಯ ಉತ್ತರದಲ್ಲಿದೆ. ಇಲ್ಲಿಂದ ಮಂಜು ಮುಸುಕಿದ ಪರ್ವತಗಳು, ಹಸಿರು ಬಣ್ಣ ಬಳಿದಂತೆ ತೋರುವ ಇಳಿಜಾರು ಬೆಟ್ಟಗಳು ಬಹು ಸುಂದರವಾಗಿ ಕಾಣುತ್ತವೆ. ಇಲ್ಲಿನ ಮಹತ್ವದ ಹಿಡಿಂಬಾ ದೇವಸ್ಥಾನ. ಈ

ದೇವಾಲಯವನ್ನು ಮಹಾರಾಜ ಬಹಾದ್ದೂರ್ ಸಿಂಗ್ 1553ರಲ್ಲಿ ನಿರ್ಮಿಸಿದನೆಂದು ಹೇಳಲಾಗುತ್ತದೆ. ಇಲ್ಲಿನ ಮಾರುಕಟ್ಟೆಯಲ್ಲಿ ಟಿಬೆಟಿಯನ್ ಜಮಖಾನಗಳು, ಕರಕುಶಲ ವಸ್ತುಗಳು ದೊರೆಯುತ್ತವೆ. ಇಲ್ಲಿಂದ 5 ಕಿ.ಮೀ ದೂರದಲ್ಲಿ ಅರ್ಜುನ್ ಗುಫಾ ಎಂಬ ಗುಹೆ, 16 ಕಿ.ಮೀ. ದೂರದಲ್ಲಿ ರಹ್ಲಾಫಾಲ್ಸ್ ಇದೆ. ಮೇಸ್ತ್ರಿ ಟ್ರಾವೆಲ್ಸ್‌ನವರು ಅವೆರಡನ್ನೂ ತೋರಿಸುವ ಕೃಪೆ ತೋರಲಿಲ್ಲ.

ಸಂಪೂರ್ಣ ಮನಾಲಿ ಹಿಡಿಂಬಾಮಯ. ಹೋಟೆಲು, ಆಟಿಕೆಯ ಅಂಗಡಿ, ಬಟ್ಟೆ ಮಾರುವ ಸ್ಥಳ, ಪಾರ್ಕ್, ಹೀಗೆ ಎಲ್ಲಕ್ಕೂ ಹಿಡಿಂಬೆಯ ಹೆಸರೇ. ಮುಖ್ಯ ಚೌಕದಿಂದ ಸುಮಾರು ಅರ್ಧ ಮೈಲು ನಡೆಯಬೇಕು ಹಿಡಿಂಬಾ ದೇವಸ್ಥಾನಕ್ಕೆ. ಹತ್ತು ನಿಮಿಷಗಳ ಹಿಂದೆಯಷ್ಟೇ ಊಟ ಮುಗಿಸಿದ್ದ ಪ್ರಯಾಣಿಕರು ದುಸುದುಸು ಅನ್ನುತ್ತಾ ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲಲ್ಲಿಯೇ ಕುಸಿದು ಕುಳಿತರು. ತಾಕತ್ತಿದ್ದವರು ಹತ್ತಿದರೂ ಹಾಳುಬಿದ್ದ ದೇವಸ್ಥಾನವನ್ನು ಕಂಡು, ಅದರ ಕಿರು ಬಾಗಿಲೊಳಗೆ ತೂರಿ, ಅಲ್ಲಿನ ದೇವರ ಹೆಸರಿನ ಕಲ್ಲನ್ನು ಕಂಡು, ನಿರಾಶರಾದರು.

ದೂರದಲ್ಲಿಯೇ ಕುಳಿತಿದ್ದ ರಾಜ್‌ನನ್ನು ಮಹೇಶ ಕೇಳಿದ, 'ಯಾಕೆ.... ಬರೋಲ್ಲವೇ?'

'ಇಲ್ಲ... ನಮಗೆ ಮೂರ್ತಿ ಪೂಜೆಯಲ್ಲಿ ನಂಬಿಕೆಯಿಲ್ಲ.'

'ಮನಸ್ಸನ್ನು ಕೇಂದ್ರೀಕರಿಸಲು ಒಂದು ವಸ್ತು ಬೇಕು. ಅದು ದೇವರ ಬೊಂಬೆ ಇರಬಹುದು, ಪ್ರಾಣಿಯೇ ಇರಬಹುದು, ಕುರ್ಚಿ-ಮೇಜೂ ಆಗಿರಬಹುದು. ಅದಿಲ್ಲದಿದ್ದರೆ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ಓಡುತ್ತದೆ. ರಾಜಾಜಿ ಹೇಳಿದ್ದಾರೆ, ದೇವರೆಂಬುವನೊಬ್ಬನಿಲ್ಲ. ಆದರೆ ದೇವರೊಬ್ಬರಿರಬೇಕು', ಮಹೇಶನ ಮಾತುಗಳು ರಾಜ್‌ನ ಧೋರಣೆಯನ್ನು ಬದಲಿಸಿದಂತೆ ಕಾಣಲಿಲ್ಲ.

ಮಾತುಗಳು ಹಲವಾರು ತಿರುವುಗಳನ್ನು ಕಂಡು ಸುರೇಶ ವಾದಿಸಿದ, 'ನಾವು ಪ್ರಕೃತಿಯನ್ನು ದೇವರೆಂದು ಕಾಣಬೇಕು. ಅದರ ವೈಶಿಷ್ಟ್ಯಗಳನ್ನು ಆನಂದಿಸಬೇಕು. ಸುತ್ತ ನೋಡಿ, ಈ ಬೆಟ್ಟ, ಗುಡ್ಡ, ಮರ, ಮಂಜು-ಹಿಮ, ತಂಗಾಳಿ.... ಇವೆಲ್ಲಾ ಎಷ್ಟು ಸುಂದರ ನೋಡಿ? ಇದನ್ನು ಪೋಷಿಸುವ, ರಕ್ಷಿಸಿ ಆನಂದಿಸುವುದನ್ನು ಬಿಟ್ಟು ನಾವು ಧರ್ಮ, ಜಾತಿ, ದೇವರು ಎಂದು ಹೊಡೆದಾಡುತ್ತೇವೆ. ನಿಮ್ಮ ದೇವರೇ ಒಬ್ಬ ದೇವರಾದರೆ ಅವನು ಜಗತ್ತಿನಲ್ಲಿ ಇತರ ಧರ್ಮಗಳನ್ನು ಏಕೆ ಸೃಷ್ಟಿಸಿದ?.... ಕಲಹ, ದ್ವೇಷ, ಕೊಲೆ, ಮುಂತಾದ ಅನಿಷ್ಟಗಳನ್ನು ಏಕೆ ಉಂಟುಮಾಡಿದ? ಮನುಷ್ಯ ಮೊದಲು ತನ್ನನ್ನು, ನಂತರ ಇತರರನ್ನು ಪ್ರೇಮಿಸುವ ಪ್ರವೃತ್ತಿ ಬೆಳೆಸಿಕೊಂಡರೆ ಎಲ್ಲೆಡೆ ಸುಖ-ಶಾಂತಿ ನೆಲೆಸುತ್ತದೆ.'

ರಾಜ್ ಅದನ್ನು ಒಪ್ಪುತ್ತಾನೊ ಇಲ್ಲವೋ ತಿಳಿಯಲಿಲ್ಲ.

★★★

ಮನುಷ್ಯನನ್ನು ಉದ್ದೀಪನಗೊಳಿಸುವ ವಸ್ತುಗಳು ಚರಸ್, ಗಾಂಜಾ, ಮದ್ಯ, ತಂಬಾಕುಗಳು ಮಾತ್ರವಲ್ಲ, ಇದನ್ನು ಮೀರಿಸಿದ ಇನ್ನೊಂದಿದೆ, ಅದು ಹೆಣ್ಣು. ಮಿಥಿಲಾ ಜೊತೆ ಮಾತನಾಡಬೇಕು, ಅವಳ ಜೊತೆ ನಗಬೇಕು ಎಂಬ ಪ್ರವೃತ್ತಿ ಗಂಡುಗಳಲ್ಲಿ ಕಾಣುತ್ತಿದ್ದರೆ, ಅವಳು ಇನ್ನೊಬ್ಬರೊಡನೆ ಹಾಗೆಯೇ ನಡೆದುಕೊಂಡಾಗ ಮನಸ್ಸಿನಲ್ಲಿ ಮೆಣಸಿನಕಾಯಿ ಕಿವಿಚಿದಂತೆ ಆಗುತ್ತದೆ ಎಂಬುದೂ ಸುಳ್ಳಲ್ಲ. ಮಿಥಿಲಾ ಯಾವ ಕೆಟ್ಟ ಅಭಿಪ್ರಾಯವೂ ಇಲ್ಲದೆಯೇ ವ್ಯವಹರಿಸಿರಬಹುದು, ಆದರೆ ಅದನ್ನು ವಿಕೃತಗೊಳಿಸುವ ಅರ್ಥ ಹಚ್ಚಿ ಹಿಂದಿನಿಂದ ಮಾತನಾಡುವ ಆನಂದ ಹೆಚ್ಚಿನವರದು. ಅವಳಿಗೆ ತನ್ನ ವಿಳಾಸವನ್ನು ಕೊಡುವವರೇನು, ಅವಳ ವಿಳಾಸವನ್ನು ಕೇಳುವವರೇನು, ಅವಳೆದುರು ತನ್ನ ಸಾಮರ್ಥ್ಯವನ್ನು ಕೊಚ್ಚಿಕೊಳ್ಳುವವರೇನು!

ಇತ್ತ ಶಾಮಣ್ಣನವರು ಏನನ್ನು ತಿನ್ನಲೂ ಹೆದರುತ್ತಿದ್ದರು. ಅವರ ತಲೆಯಲ್ಲಿ ಸದಾ ಕೆಟ್ಟ ಹೊಟ್ಟೆಯ ಚಿಂತೆಯೇ ತುಂಬಿಕೊಂಡಿತ್ತು. ಕುಲುವಿನಲ್ಲಿ ಒಂದು ಕ್ಲಿನಿಕ್‌ಗೆ ಹೋದರು. ಅವರಿಗೆ ಹಿಂದಿ ಬರುವುದಿಲ್ಲ, ಇಂಗ್ಲಿಷ್ ಜ್ಞಾನ ನಾಸ್ತಿ. ಡಾಕ್ಟರಿಗೆ ಕನ್ನಡದ ಗಂಧಗಾಳಿ ತಿಳಿಯದು.


ಶಾಮಣ್ಣನಿಗೆ ತನ್ನ ಜೀವನದಲ್ಲಿ ಹೆಚ್ಚು ಸಂದಿಗ್ಧ ಪರಿಸ್ಥಿತಿ ಉಂಟಾಗಿದ್ದು ಇಲ್ಲಿಯೇ. ತನ್ನ ಪರಿಸ್ಥಿತಿಯನ್ನು ಅವರಿ(ಳಿ)ಗೆ ವಿವರಿಸಲು ಅವರು ಎಷ್ಟು ಕಷ್ಟಪಟ್ಟಿರಬಹುದೆಂಬುದನ್ನು ನಾನು ಇಲ್ಲಿ ವಿವರಿಸಿ ಹೇಳಬೇಕಿಲ್ಲ. ಕೊನೆಗೂ ಕೆಲ ಮಾತ್ರೆಗಳನ್ನು ಪಡೆದು ಸದಾ ತನ್ನ ಜೇಬಿನಲ್ಲಿ ಇಟ್ಟುಕೊಂಡಿರುತ್ತಿದ್ದರು. ಕನ್ನಡದ ಒಂದು ಜೋಕು ಇಲ್ಲಿ ನೆನಪಿಗೆ ಬರುತ್ತದೆ, 'ಬೇಧಿನೆ?... ನೀವು ತಲೆಗೆ ಹಚ್ಚಿಕೊಳ್ಳಬೇಡಿ.... ನಾನು ಗುಣ ಮಾಡ್ತೀನೆ ಎಂದಿದ್ದರಂತೆ ಒಬ್ಬ ಡಾಕ್ಟರು.

★★★

ದೆಹಲಿಯ ನಗರದ ನಡುವಿನಲ್ಲಿ ಇದ್ದರೂ, ನಗರದ ಅವಸರದ, ಕಲ್ಮಶದ ನಡುವೆಯೂ ಮನಸ್ಸನ್ನು ಸಂತೋಷಗೊಳಿಸುವ ಕೆಲ ಜಾಗಗಳೆಂದರೆ ರಾಜಘಾಟ್, ಶಾಂತಿವನ (ಜವಾಹರಲಾಲ್‌ರವರ ಸಮಾಧಿ), ವಿಜಯಘಾಟ್ (ಶಾಸ್ತ್ರಿಯವರ ಸಮಾಧಿ), ಶಕ್ತಿಸ್ಥಳ್ (ಇಂದಿರಾಗಾಂಧಿಯವರ ಸಮಾಧಿ), ಮುಂತಾದವು. ನಗರದ ಮಧ್ಯದಲ್ಲಿಯೇ ಒಂದು ಸುರಕ್ಷಿತ ಕಾಡು ಇದೆ. ಕುತುಬುದ್ದೀನ್ ಐಬಕ್ ನಿರ್ಮಿಸಿದ ಕುತುಬ್‌ಮಿನಾರ್ (ನಿರ್ಮಾಣ: ಕ್ರಿ.ಶ. 1199) ವಿಜಯ ಸ್ಥಂಭ ಇನ್ನೊಂದು ದರ್ಶನೀಯ ಸ್ಥಳ. ಕೆಂಪುಕೋಟೆ, ರಾಷ್ಟ್ರಪತಿ ವನ, ಪಾರ್ಲಿಮೆಂಟ್ ಹೌಸ್, ಹಾಲುಗಲ್ಲಿನ ಬಿಳಿಯ ಬಿರ್ಲಾಮಂದಿರ ಇವನ್ನು ನೋಡಲೇಬೇಕು. ವಿಶ್ವಭ್ರಾತೃತ್ವದ ಪ್ರತೀಕವಾದ ಬಹಾಯಿ ಧರ್ಮದವರ ಲೋಟಸ್ ಮಹಲ್ ಅನ್ನು ಕಟ್ಟಲು ಐದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ ಎನ್ನುತ್ತಾರೆ. ಕಮಲದ ಹೂವಿನ ಆಕೃತಿಯ ಈ ಬಿಳಿಯ ಕಟ್ಟಡವು ಒಂದು ಪ್ರಾರ್ಥನಾ ಗೃಹ. ಒಳಗೆ ಯಾವ ದೇವರೂ ಇಲ್ಲವಾದರೂ ಅಲ್ಲಿನ ಶಾಂತತೆ ಮನಸ್ಸನ್ನು ತಣಿಸುವುದರಲ್ಲಿ ಸಂದೇಹವಿಲ್ಲ.

ಬಿರ್ಲಾಹೌಸ್, ಇಂಡಿಯಾ ಗೇಟ್, ತೀನ್‌ಮೂರ್ತಿ ಭವನ (ಪಂಡಿತ ನೆಹರೂರವರ ಸ್ಮಾರಕ ಮಂದಿರ) ಇವು ಇನ್ನೂ ಕೆಲವು ದರ್ಶನೀಯ ಜಾಗಗಳು. ಇನ್ನೂ ಅನೇಕ ಸ್ಥಳಗಳು ದರ್ಶನ ಯೋಗ್ಯವಾಗಿದ್ದರೂ ಮೇಸ್ತ್ರಿ ಟ್ರಾವೆಲ್ಸ್‌ನವರು ಕೃಪೆ ತೋರಲಿಲ್ಲವಾದ ಕಾರಣ ಅವನ್ನು ಮುಂದಿನ ಬಾರಿಗೆ ಮುಂದೂಡಲಾಯಿತು. ಕೊನೆಗೆ ಎಲ್ಲರನ್ನು ರೈಲಿನಲ್ಲಿ ಕುಳ್ಳಿರಿಸಿದ ಮೂರ್ತಿ ಎಲ್ಲರಿಗೂ ಸೇರಿ ಶಾಪ ಹಾಕಿದ. ಯಾರದೋ ಒಂದು ಸ್ವರ ಕೇಳಿಬಂತು, ಪ್ರತಿ ಬಾರಿಯೂ ಕನಿಷ್ಠ ಹತ್ತು ಸಾವಿರವಾದರೂ ಉಳಿಸುತ್ತಿದ್ದ, ಈಬಾರಿ ಸಾಧ್ಯವಾಗಲಿಲ್ಲ, ಅದಕ್ಕೇ ಎಂಬುದು. ನಲವತ್ತನಾಲ್ಕು ಗಂಟೆಗಳ ರಗಳೆಯ ರೈಲು ಯಾನ ಬೆಂಗಳೂರಿಗೆ. ಆದರೂ ತಮ್ಮೂರನ್ನು ಸೇರುವ ಉತ್ಸಾಹದಿಂದ ಅದು ಸಹ್ಯವಾಯಿತು. ಬೆಂಗಳೂರಿನ ನಿಲ್ದಾಣದಲ್ಲಿ ರೈಲು ನಿಲ್ಲುತ್ತಲೇ ಮನೆಗೆ ಹೋಗಿ ಸೇರುವ ಆತುರದ ಜನ ಇತರರನ್ನು ಮರೆತೇಬಿಟ್ಟರು. ಶಾಮಣ್ಣ, ರಂಗೇಗೌಡ, ಜಗನ್ನಾಥ, ಸುರೇಶ, ಸಿದ್ಧಯ್ಯ, ರಾಜ್, ರಾಮಕೃಷ್ಣ ಮಕ್ಕಿತ್ತಾಯ.... ಇವರೆಲ್ಲಾ ಮನಸ್ಸಿನಿಂದ ಮರೆಯಾದರು. ಆದರೆ ಮಿಥಿಲಾ ಮಾತ್ರ ಕೆಲಕಾಲ ಕೆಲವರ ಮನಸ್ಸಿನಲ್ಲಿ ಉಳಿದಳು.

ಬರಿಯ ಸ್ಥಳಗಳ ವೀಕ್ಷಣೆ ಮಾತ್ರ ಪ್ರಯಾಣವಲ್ಲ. ಹಲವಾರು ಅಭಿಪ್ರಾಯಗಳ, ಹಲವಾರು ಪ್ರವೃತ್ತಿಗಳ ಜನರ ವಿವಿಧ ಮುಖಗಳನ್ನು ನೋಡುವ, ಅವರೊಡನೆ ಬೆರೆಯುವ ಆನಂದ ಇಂತಹ ಪ್ರಯಾಣಗಳಲ್ಲಿ ಮಾತ್ರ ಸಾಧ್ಯ. ಒಬ್ಬರೋ ಇಬ್ಬರೋ ಪ್ರಯಾಣ ಮಾಡಿದರೆ ಈ ಆನಂದ ಖಂಡಿತಾ ದೊರಕುವುದಿಲ್ಲ.



With Best Compliments From:

S.U. SWAMI

Manufactures of
Engraved/Printed on Metal
Aluminium & Plastic
Label/Number Plates
Computer Engraving

FIRST TIME IN BANGALORE

VINYL LETTER CUTTING
(Near Urvashi Theatre)

For information call:

S.U. SWAMI INDUSTRIES

No.1106, LB Road Cross 27, Bangalore.
Phone: 2220238

ಜಂಬದ ಕಾವೇರಿ

- ಸಿ.ಆರ್. ಸತ್ಯ

ಈಚೇ ಮನೆ ಕಾವೇರೀಗೆ
ಜಂಬ ಅಂದ್ರೆ ಜಂಬ
ಮಗಳ ಮದುವೆ ಸೆಟ್ಲಾಯ್ತೂಂತ
ತಡೀಲಾರದ ಜಂಬ

ದಿನಾ ಬೆಳಿಗ್ಗೆ- ಆದ್ರೆ-ಸಾಕು
ಭಾವಿ ಅಳಿಯನ ಧ್ಯಾನ
ನ್ಯುಜರ್ಸಿಗೆಲ್ಲಾ ಅವನೊಬ್ನೇ ಅಂತೆ
ಸಾಫ್ಟ್‌ವೇರ್‌ನಲ್ಲಿ ಜಾಣ

ಕಾವೇರಿ- ಮಗ್ಳು- ಅಂತ- ಅಂದ್ರೆ
ರೋಡಿನೋರ್ಗೆಲ್ಲಾ ಗೊತ್ತು
ಬಣ್ಣ ಕಪ್ಪು - ಗಾತ್ರ ಜಾಸ್ತಿ
ಹುಡುಗ್ರಲ್ಲಿ ಕಾಣೋ ಗತ್ತು!

ಈ ಹುಡ್ಗೀಗೆ ಲೈಫ್‌ನಲ್ಲಿದ್ದಿದ್ದಂದ್ರೆ
ಒಂದೆ ಒಂದ್ರಲ್ ಹುಮ್ಮಸ್ಸು
ಕೀ ಬೋರ್ಡ್, ಮೋಡಮ್, ಪ್ರಿಂಟರ್
ಕಂಪ್ಯೂಟರ್- ಹಾರ್ಡ್ವೇರ್- ವೈರಸ್!

'ಲವ್' ಅನ್ನೋ ಬಾಣಾ ಹೊಡೆದದ್
E-ಮೈಲ್ ಮೂಲಕ ಅಂತೆ
ಮದುವೆ ವಿಷಯ ಸೆಟ್ಲಾಗಿದ್ದೆಲ್ಲಾ
ಇಂಟರ್‌ನೆಟ್ನಲ್ಲಂತೆ

ಕಾವೇರಿಗೆ ಖುಶ್ಯೋ ಖುಶಿ
ಖರ್ಚು-ಕಮ್ಮಿ-ಅಂತ
ಮೋಡಮ್ ಮೂಲ್ಕ ಮದುವೇ ಮಾಡಿ
ಹಾಯಾಗಿರೋಣಂತ

ತಕ್ಷಣ ಹುಡುಗ E -ಮೈಲ್ ಹೊಡ್ದ
''ಬರ್‍ತೀನ್-ಅಲ್ಲೇ-ಮಾಡಿ-ಮದ್ವೆ
ಡೌರಿ ಹಣ - ಮೋಡಮ್ ಮೂಲ್ಕ
ಸಾಗಿಸೋದು ಕಷ್ಟ-ಅಲ್ವೆ?''

ಇಷ್ಟೆಲ್ಲಾ ಆದರೂ,
ಈಚೇ ಮನೆ ಕಾವೇರಿಗೆ
ಜಂಬ ಅಂದ್ರೆ ಜಂಬ
ಮಗಳ ಮದುವೆ ಸೆಟ್ಲಾಯ್ತೂಂತ
ತಡೀಲಾರದ ಜಂಬ

(ಕವಿಮಾತು: ಮೇಲ್ಕಂಡ ಕವನದಲ್ಲಿ ಕಂಪ್ಯೂಟರ್‌ಗೆ ಸಂಬಂಧಿಸಿದ ಕೆಲವು ಪದಗಳು ಹಳೇಕಾಲದ ಓದುಗರಿಗೆ ಅರ್ಥವಾಗದೇ ಇರಬಹುದು. ಯೋಚನೆ ಮಾಡಬೇಡಿ; ನಿಮ್ಮನೆ ಮುಂದೆ ಹೋಗ್ತಾ ಇರೋ ಯಾವುದಾದರೂ ಐದು ವರ್ಷದ (ಅಥವಾ above) ಮಗೂನ ಕೇಳಿ ಹೇಳುತ್ತೆ.)

ದತ್ತೋಪಂತನ ಪತ್ತೆದಾರಿ

- ಶ್ರೀನಿವಾಸ ವೈದ್ಯ (ಶೀನೂ)

''ಮೂರು ತಿಂಗಳಿನಿಂದ ನಾಯಿಗಳು ಪಟ ಪಟ ಬಿದ್ದು ಸಾಯಾಕ ಹತ್ಯಾವ, ನಿನಗೇನಾದರೂ ಅದರ ಖಬರ್ ಐತೇನು ದತ್ತೂ?''

ನಿಗಮದ ನಾನ್ ಆಫೀಸಿಯಲ್ ಛೇರಮನ್(ಕೆಬಿನೆಟ್ ರ್‍ಯಾಂಕ)ರಾದ ಭಾಲ್ಕೀ ಬಾಪೂಶೆಟ್ಟಿಯವರು ಕೋಪಾವಿಷ್ಟರಾಗಿ ಸೆಕ್ಯೂರಿಟಿ ಆಫೀಸರ ದತ್ತೋಪಂತನ್ನ ಸಿಕ್ಕಾಪಟ್ಟೆ ತರಾಟೆಗೆ ತೊಗೊಂಡಿದ್ದರು ಅವತ್ತು.

''ಸರ್.... ಇದು ಕಾರ್ಪೊರೇಶನ್‌ದವರ ಸಮಸ್ಯೆಯಲ್ಲವೇ?'' ಎಂದು ಗಾಬರಿಯಲ್ಲಿ ದತ್ತೋಪಂತ ತೊದಲುತ್ತಿದ್ದಂತೆಯೇ, ಭಾಲ್ಕೀ ಬಾಪೂಶೆಟ್ಟಿ (ಭಾ. ಬಾ) ಇನ್ನಷ್ಟು ರೇಗಿ, ''ನಾನು ಬಿಡಾಡಿ ಬೀದಿ ನಾಯಿಗಳ ವಿಷಯ ಮಾತಾಡೂದಿಲ್ಲ.... ನಮ್ಮ ಆಫೀಸಿನ ನಾಯಿಗಳ ಕತಿ ಹೇಳಾಕಹತ್ತೇನಿ. ಮೂರು ತಿಂಗಳಾತು ನಾಯಿ ಸಾಯಾಕ ಹತ್ತಿ... ವಾಚ್‌ಮನ್ ವಾಜೀದ ಅಲೀದು ಮೂರು ನಾಯಿ ಸತ್ತೂ. ಆಮ್ಯಾಲ ಸ್ಟೋರ್ಸ ಡಿಪಾರ್ಟಮೆಂಟಿನ ಸೀತಾಪತಿದು ಅವನ್ಹಂಗs ಅಳಬುರಕ ಮೋತೀದು ಛಂದನ್ನ ಝೂಲುನಾಯಿ,... ಈಗ ಒಂದು ವಾರದ ಕೆಳಗೆ ಅಕೌಂಟ್ಸ್ ಡಿಪಾರ್ಟ್‌ಮೆಂಟಿನ ಉರಿಮಾರಿ ಮದ್ದೂರಾಯನದು ಮುಧೋಳನಾಯಿ, ಮೊನ್ನೆ ಕಂಪ್ಯೂಟರ್ ಆಪರೇಟರ್ ಕಪನೀಪತಿದು ಕರೇನಾಯಿ,..... ಹೀಂಗ ಯಲ್ಲಾ ನಾಯಿ ಪಟಾಪಟಾ ಬಿದ್ದು ಸಾಯಾಕ ಹತ್ಯಾವ. ನೀವು ಸೆಕ್ಯೂರಿಟಿ ಡಿಪಾರ್ಟ್‌ಮೆಂಟಿನವರು ಏನ್ ಮಾಡಾಕಹತ್ತೀರಿ'' ಎಂದರು.

ದತ್ತೊಪಂತ ಸ್ವಲ್ಪ ಹಟದಲ್ಲಿ ''ಸರ್.... ನಾವು ಮೊದಲಿನಿಂದ, ಸ್ಟಾಫಿನವರು ತಮ್ಮ ಸಂಗಡ ಶುನಕಸಂಗಾತಿಗಳನ್ನ ಆಫೀಸಿಗೆ ತರೋದನ್ನ ವಿರೋಧಿಸುತ್ತಾ ಇದ್ದೇವೆ. ಇದು ಡಿಪಾರ್ಟ್‌ಮೆಂಟಿನ ಕೆಲಸಲ್...' ಎನ್ನುತ್ತಿದ್ದಂತೆಯೇ ಭಾ. ಬಾ. ಇನ್ನಷ್ಟು ಕೆರಳಿ ''ಅಲ್ಲೋ ದತ್ತೋಪಂತ, ನಿನ್ನ ತಲಿಗಿಲಿ ಕೆಟ್ಟೈತೇನು?.... ಮುಂದಿನ ತಿಂಗಳ ಅಖ್ಯೆರಿಗೆ 'ಆಲ್ ಕರ್ನಾಟಕ ಕ್ವಿನಾಯಿನ್ ಶೋ' ಐತಿ ಗೊತ್ತಿಲ್ಲs.....''

ದತ್ತೋಪಂತ: ''ಸರ್... ಕ್ವಿನಾಯಿನ್ ಶೋ ಎಂದರೆ''....?

ಭಾ. ಬಾ: ''ಹೌದ ಔದ..... ಅದs.... ಆಲ್ ಕರ್ನಾಟಕ ಕ್ವಿನಾಯಿನ್ ಶೋ....''

ದತ್ತೋಪಂತ: ''ಕ್ವಿನಾಯಿನ್ ಶೋ ಅಂದ್ರೇನು ಸರ್?''

ಭಾ. ಬಾ: ಅದsಪಾ, ಮ್ಹಾರಾಯಾ... ಡಾಗ್... ಡಾಗ್; ಡಾಗ್ ಶೋ....''

ದತ್ತೋಪಂತ:-''ಓ... ಕ್ಯಾನಾಯಿನ್ ಶೋ....''

ಭಾ. ಬಾ: ''ಯಾಡ್ಡೂ ಒಂದs.... ಅಂತೂ ಆಲ್ ಕರ್ನಾಟಕ ಡಾಗ್ಯಾನ್ ಶೋದಾಗ ಎರಡ ವರ್ಷದಿಂದ ನಮ್ಮ ನಿಗಮಕ್ಕ ಪ್ರೈಜು ಬರಾಕ ಹತ್ಯಾವ.... ಬರಾಕ್ ಹತ್ಯಾವೋ... ಇಲ್ಲೋ... ನೀನs ಹೇಳು... ಈಗ ಆ ಡಾಗ್ ಕೋಚರ್ ದೌಲತರಾವ್

ಸಿಂಘೆ, 'ನಾ ಮನೀ ಮನೀಗೆ ಹೋಗಿ ಕೋಚರ್ ಆಗೂದಿಲ್ಲ..... ನನಗ ಅಷ್ಟು ಟಾಯಿಮು ಇಲ್ಲಾ..... ನಿಮ್ಮ ನಿಗಮಾದ ಎಲ್ಲಾ ನಾಯಿಗಳನ್ನೂ ಇಲ್ಲೇ ಆಫೀಸಿಗೆ ಕರಕೊಂಡು ಬರ್ರಿ - ಅಂದ್ರ ಎಲ್ಲಾ ನಾಯಿಗೋಳಿಗೂ ಒಮ್ಮೇ ಕೋಚರ್ ಆಗತೇನಿ, ಟಾಯಿಮ್ ಉಳೀತೈತಿ' ಅಂದಾ.... ಅದಕ್ಕಂತ ನಾನs ಎಲ್ಲಾರಿಗೂ ನಿಮ್ಮ ನಿಮ್ಮ ನಾಯಿ ನಿಮ್ಮ ಜತೇನs ಆಫೀಸಿಗೆ ತಗೊಂಬರ್ರಿ ಅಂತ ಹೇಳಿದ್ನಿ.... ಹಂತಾದರಾಗ ಈಗ ಡಾಗಗಳೆಲ್ಲ ಪಟ ಪಟಾ ಬಿದ್ದು ಸಾಯಾಕ ಹತ್ತಿದರ.... ಕೋಚಮನ್‌ನ ತಗೊಂಡು ಏನ್ ಸುಡೂದೈತಿ? ಅದಕ್ಕ ನಿನಗ ಒಂದು ವಾರ ಟೈಮು ಕೊಡತೇನಿ... ವಾರದಾಗ ನೀ ತಪಾಸಣಿ ಮಾಡಿ, ನಮ್ಮ ನಾಯಿಗೋಳು ಯಾಕ 'ಗೊಟಕ್' ಅನ್ನಾಕ ಹತ್ಯಾವ! ಇದರ ಹಿಂದ ಯಾರ್ ಕೈವಾಡ.... ಯಾರ್ ಸಾದಿಶ್.... ಯಾರ್ ಹಿಕಮತ್ ಐತಿ! ಫಾರೆನ್ ಹ್ಯಾಂಡ್ ಐತ್ಯೋ ಹೆಂಗ? ಅಂಬೋದನ್ನ ಬಡ್ಡ್ಯಾಗಿಂದ ಪತ್ತೇಮಾಡಿ.... ಇನ್ನ ಮುಂದ ನಮ್ಮ ನಾಯಿಗಳು ಸಾಯಧಾಂಗ ಏನ್ ಮಾಡಬೇಕು... ಏನ್ ಮಾಡಬಾರದು, ಈ ಎಲ್ಲಾ ಸಮಸ್ತ ಯಚ್ಚಾವತ್ ಮಾಹಿತಿ ನನಗ ಒಂದು ವಾರದಾಗನs ರಿಪೋರ್ಟ್ ಮಾಡಬೇಕು..... ಮತ್ತು ನಿನಗ ಈ ಕೆಲಸಕ್ಕ ಎಷ್ಟು ದುಡ್ಡು ದುಗಾಣಿ, ಜನಸಹಾಯ, ಕಾರುಗೋಳು - ಡ್ರಾಯವರಗೊಳು, ಸೆಕ್ರೆಟರಿಗೋಳು, ಎಷ್ಟು ಬೇಕು - ಏನ್ ಬೇಕು - ಭಿಡೆಯಿಲ್ಲದೇ ತಗೊ..... ಮತ್ತೇನಪಾ ಅಂದ್ರ ಈ ಪ್ರಾಜೆಕ್ಟಕ್ಕ ''ಆಪರೇಶನ್ ಕ್ವಿನಾಯಿನ್'' ಅಂತ ಕೋಡ ಇಟ್ಟೈತಿ, ಈ ಫಾಯಿಲ ತಗೊ.... ನಿನಗೆ ಎಲ್ಲಾ ಅಥಾರಿಟಿ ಕೊಟ್ಟೈತಿ... ಯು ಆರ್ ಇವ್ಹನ್ ಲಾಯಿಸೆನ್ಸಡ ಟು ಕಿಲ್... ಟಾಪ್ ಪ್ರಯಾರೀತಿ ಮ್ಯಾಗ... ''ಬಾಂಡನ ಗತೆ.... ಹೌದು - ಥೇಟ್ ಜೇಮ್ಸ ಬಾಂಡನ ಗತೆ, ಅಂದ್ರ 007 ನ ಗತೆ ಕೆಲಸ ಮಾಡಿ, ಒಂದೇ ಒಂದು ವಾರದಾಗ ನನಗ ರಿಪೋರ್ಟ ಮಾಡು....'' ಎನ್ನುತ್ತ ಮಾತು ಮುಗಿಸಿ ಭಾ. ಬಾ ಎದ್ದು ನಿಂತು ದತ್ತೋಪಂತನಿಗೆ ಹಸ್ತಲಾಂಛವ ನೀಡಿ "Best of luck" ಎಂದು ಹೇಳಿ, ತಾವು ಗೋಡೆಯ ಕಡೆ ಮುಖ ಮಾಡಿ, ಗೋಡೆ ತುಂಬ ಹರಡಿದ್ದ ವಿಶ್ವದ ನಕಾಶೆಯಲ್ಲಿ ಕಣ್ಣು ನೆಟ್ಟು..... ''ಗುಲ್ಬರ್ಗಾ - ಬೀದರ್ - ಭಾಲ್ಕಿ ಎಲ್ಲಾ ಎಲ್ಲೆ ಬರತಾವ'' ಎಂದು ನೋಡ ತೊಡಗಿದರು.

★★ ★

ದತ್ತೋಪಂತನಿಗೆ ತಾನು 'ಜೇಮ್ಸ ಬಾಂಡ್ ಆಪರೇಶನ್ ಕ್ವಿನಾಯಿನ್‌ದ ಇನ್‌ಚಾರ್ಜ.... ಲಾಯಿಸೆನ್ಸಡ ಟು ಕಿಲ್' ಎಂದೆಲ್ಲ ಕೇಳಿ ತಲೆ 'ಭಂವ್' ಎಂದು ಸುತ್ತಿದಂತಾಯಿತು. ಛಾತಿ ಎಂಟು ಇಂಚು ಅಗಲ ಆಧಂಗಾತು, ಆರು ಇಂಚು ಎತ್ತರ ಬೆಳಧಂಗಾತು.

ದತ್ತೋಪಂತ ಜೇಮ್ಸ ಬಾಂಡನ ಹಾಗೇನೇ ಮುಚ್ಚಿದ ಕಿಸಬಾಯಲ್ಲಿ ಬದು ಕುತ್ಸಿತ ನಗಿ ನಕ್ಕೋತ, ಪ್ಯಾಂಟಿನ ಜೇಬಿನಲ್ಲಿ ಕೈ ಇಳಿಬಿಟ್ಟ, ಸಿಳ್ಳು ಹಾಕುತ್ತ ಭಾ. ಬಾ. ನ ಕೇಬಿನ್ನಿನಿಂದ ಹೊರಗೆ ಬಂದ. ಅಲ್ಲಿ ಎಡಗಡೆಗೆ ಮೂಲೆಯಲ್ಲಿ ಭಾ. ಬಾನ ಸೆಕ್ರೆಟರಿ - ಒಬ್ಬ ಎಳೆಯ ಚಲುವೆ. ಏನೋ ಟೈಪ್ ಮಾಡುತ್ತ ಕುಳಿತಿದ್ದಳು. ದತ್ತೋಪಂತ ಒಳ್ಳೇ

ಗತ್ತಿನಿಂದ, ಠೀವಿಯಿಂದ, ಜೇಮ್ಸ ಬಾಂಡನ ಶೈಲಿಯಲ್ಲಿ ತನ್ನ ಪ್ಯಾಂಟಿನ ಗರಿಗರಿಯಾದ ಮಡಿಕೆಯನ್ನು ಹಿಡಕೊಂಡು, ಆ ಚಲುವೆ ಸೆಕ್ರೆಟರಿಯ ಟೇಬಲ್ ಮೇಲಕ್ಕೆ ಸರಿಯುತ್ತ ''ಹಾಯ್ ಬೇಬಿ, ನ್ಯೂ ಅಸಾಯಿನ್‌ಮೆಂಟ - ಆಯ್ ಬಿಗಿನ್ ವರ್ಕ ರೈಟ ಹಿಯರ್'' ಎನ್ನುತ್ತ ಅವಳನ್ನೆಳೆದುಕೊಂಡು ಮುತ್ತಿಡಲಿಕ್ಕೆ ಹೋದರೆ, ಆ ಹುಚ್ಚು ಬೇಬಿ ಕಿಟಾರನೆ ಕಿರುಚಿಕೊಂಡು 'ಲಬೋ ಲಬೋ' ಎಂದು ಶಂಖವಾದ್ಯ ನಡೆಸಿದಳು.

★★★

ನಮ್ಮ ದರಿದ್ರ ದೇಶದಲ್ಲಿ ಯಾರೇ ಶಂಖವಾದ್ಯ ಹೊಡೆದರೂ ನೂರು ಜನ ಸೇರುತ್ತಾರೆ. ಇನ್ನು ಒಬ್ಬ ಎಳೆ ಚಲುವೆಯ ಮಂಜುಳ ದನಿಯ ಶಂಖವಾದ್ಯ ಕೇಳಿ ಸುಮ್ಮನಿದ್ದಾರೆಯೇ? ಕ್ಷಣಾರ್ಧದಲ್ಲಿ ಇಡೀ ಆಫೀಸಿಗೆ ಆಫೀಸೇ ಕಿತಗೊಂಡು ಬಂದು ಭಾ.ಬಾನ ಕೇಬಿನ್ನಿನ ಬಳಿ ಗದ್ದಲಗಟ್ಟತೊಡಗಿತು. ಸರಿಯಾಗಿ ಅದೇ ಸಮಯಕ್ಕೆ ಜೆ. ಜಾಂಬುವಂತಿ ಎಲ್ಲಿಂದಲೋ ಬಂದಳು. ಜಾಂಬುವಂತಿ ಸುಮಾರು ಆರಡಿ ಎತ್ತರದ, ಸಾಕಷ್ಟು ಸುತ್ತಳತೆಯ ಸೀನಿಯರ್ ಮೋಷ್ಟ ಸಿಬ್ಬಂದಿ. ಅವಳು ಮಹಿಳಾವಾದಿ, ಮಾನವತಾವಾದಿ, ಸಮಾಜವಾದಿ, ಕಾರ್ಮಿಕವಾದಿ, ದಲಿತವಾದಿ, ಇತ್ಯಾದಿ ವಾದ ಇದ್ದಲ್ಲೆಲ್ಲ ಇರುವ ಛಲವಾದಿ. ಈ ಪ್ರತಿವಾದಿ ಭಯಂಕರಳಾದ ಜಾಂಬುವಂತಿ ಕಾರ್ಮಿಕ ಚಳುವಳಿಯ ಮುಖಂಡಿ. ಆಫೀಸಿನ ಕಾರ್ಮಿಕ ಯೂನಿಯನ್ನಿನ ಕಾರ್ಯದರ್ಶಿ. ಒಮ್ಮೆ ತಲೆಗೂದಲಿಗೆ ಕೆಂಪು ಡೈ ಬಳಿದುಕೊಳ್ಳುತ್ತಿದ್ದಾಗ ಆ ಡೈ ಮೈ-ಮುಖದ ಮೇಲೆಲ್ಲ ಬಿದ್ದು, ಮೊದಲೇ ಶಾಮಲ ವರ್ಣದವಳಾದ ಜಾಂಬುವಂತಿ ನೇರಳೆ ವರ್ಣಕ್ಕೆ ತಿರುಗಿದ್ದಳು. ಅಂತೂ ಇಂಥ ಅನ್ವರ್ಥಕ ಜಾಂಬುವಂತಿ ಮೆಲ್ಲನೆ ದರ್ಪದಲಿ ಐತಂದು ಪರಿಸ್ಥಿತಿಯ ಚಾರ್ಜ ತೆಗೆದುಕೊಳ್ಳುತ್ತಿದ್ದಾಗ, ಉಳಿದ ಹುಲುಮಾನವರು ಆಚೀಚೆ ಸರಿದು ಅವಳಿಗೆ ಸಾಕಾಗುವಷ್ಟು ಸ್ಥಳಾವಕಾಶ ಮಾಡಿಕೊಟ್ಟರು. ಜಾಂಬುವಂತಿ ಒಮ್ಮೆ ಸುತ್ತಲೂ ಕಣ್ಣಾಡಿಸಿ ದತ್ತೋಪಂತನ ಕಡೆಗೆ ಹೊರಳಿ ''ಏನೋ ದತ್ತೂ, ಏನು ಗಲಾಟೆ ನಡೆಸಿದೇಯಾ?'' ಎಂದು ದರ್ಪಿಸಿದಳು.

ದತ್ತೋಪಂತ ''ಜಾಂಬೂ, ನೀನೇ ಹೇಳು.... ಬಾಸು ಭಾ.ಬಾ ನನಗೆ ಒಂದು ಅತಿ ಅಪಾಯಕಾರಿ ಕೆಲಸ ವಹಿಸಿಕೊಟ್ಟು, ಇದನ್ನ ಅರ್ಜಂಟಾಗಿ, ಟಾಪ್ ಪ್ರಾಯಾರಿಟಿ ಮೇಲೆ ಥೇಟ್ ಜೇಮ್ಸ ಬಾಂಡನ ತರಾನ ಕೆಲಸ ಮುಗಿಸಲಿಕ್ಕೆ ಹೇಳಿದ್ದರು. ಜೇಮ್ಸಬಾಂಡ್ ಹೆಂಗ ಬಾಸ್‌ನ ಕೇಬಿನ್ನಿನಿಂದ ಹೊರಗೆ ಬಿದ್ದಾವನು ಬಾಸನ ಸೆಕ್ರೆಟರಿಗೆ ಮುತ್ತುಕೊಟ್ಟು ಕೆಲಸ ಸುರುಮಾಡತಾನೋ ಹಂಗ ನಾನೂ ಮಾಡಲಿಕ್ಕೆ ಹೋದರ, ಈ ಹುಡುಗಿ - ಸೆಕ್ರೆಟರಿ ಸುಮ್ಮ - ಸುಮ್ನೆ ರಾಂಗ್ ಆಗತಾಳಲ್ಲ....? ಆಫೀಸಿನ ನಮ್ಮ ಕಾಮ್ರೇಡ್‌ಗಳೇ ನಮಗೆ ಕೋ ಆಪರೇಶನ್ ಕೊಡದಿದ್ದರೆ ಹೆಂಗ? ಇಷ್ಟೂ ಮಿನಿಮಮ್ ಸೌಕರ್ಯಗಳಿರಲಿಲ್ಲ ಅಂದ್ರ ನಮ್ಮಂತಹ ಸೀನಿಯರ್ ಕೆಲಸಗಾರರು ಹೆಂಗ ಕೆಲಸ ಮಾಡಬೇಕು! ನೀನೇ ಹೇಳು'' ಅಂದ.

ಅವನಿಗೂ ಕೋಪ ಬಂದಿತ್ತು.

ಜಾಂಬುವಂತಿಗೆ ಈಗ ನಡೆದ ಘಟನೆಗಳೆಲ್ಲ ವಿಶದವಾಗಿ ತಿಳಿದು, ಅವಳು, ''ದತ್ತೂ, ನನಗ ಈಗ ಎಲ್ಲಾ ತಿಳೀತು. ನೀ ಹೇಳುದು ಕರೆಕ್ಟ.... ಈ ಹುಡುಗಿ ಕಿರುಚಿಕೊಂಡು ಬೊಬ್ಬೆ ಹೊಡೆದದ್ದೂ ಕರೆಕ್ಟೇ''..... ಎಂದಳು.

''ಅದು ಹೆಂಗ? ಜಾಂಬೂ'' ಎಂದ ದತ್ತೋಪಂತ.

''ನೋಡು, ಈ ಹುಡುಗಿಗೆ ಜೇಮ್ಸ ಬಾಂಡನ ಕೆಲಸದ ರೂಲ್ಸು, ರೆಗ್ಯುಲೇಶನಗಳು ಏನೂ ಗೊತ್ತಿಲ್ಲ.... ಯಾತಕ್ಕೆಂದ್ರೆ ಅವಳು ಭಾಬಾನ ಸೆಕ್ರೆಟರೀನೇ ಅಲ್ಲ!'' ಎಂದಳು ಜಾಂಬು.

''ಏನು, ಹಾಗಂದ್ರೆ!'' ಕೇಳಿದ ದತ್ತೂ.

''ಅವಳು ಯಾರೋ ಒಬ್ಬ ಜರ್ನಾಲಿಸ್ಟು.... ಬೆಳಿಗ್ಗೆ ಭಾಬಾನ ಇಂಟರ್‌ವ್ಯೂ ತೊಗೊಳ್ಳಿಕ್ಕೆ ಬಂದವಳು. ಅವಳಿಗೆ ಏನ್ ತಿಳೀತೈತಿ ಅಂತ ಇಂಟರವ್ಯೂ ಕೊಡತಾನೋ - ಇವಳೇನು ಬರಕೋತಾಳೋ ದೇವರಿಗೇ ಗೊತ್ತು, ಇಂಟರವ್ಯೂ ಟೈಪ್ ಮಾಡಿಕೊಳ್ಳೊದಕ್ಕೋಸ್ಕರ ಇಲ್ಲಿ ಕುಂತವಳೆ, ಅಷ್ಟೇ!'' ಎಂದು ಜಾಂಬುವಂತಿ ಹೇಳುತ್ತಿದ್ದಂತೆಯೇ ದತ್ತೋಪಂತ ಉತ್ಕಂಠಿತನಾಗಿ

''ಹಾಂಗಾದರೆ ಭಾಬಾನ ಸೆಕ್ರೆಟರಿ ಯಾರು?'' ಎಂದು ಕೇಳಿದ.

ಜಾಂಬುವಂತಿ ಸೆರಗು ಬಿಗಿದು ಕಟ್ಟಿ, ಎದೆ ತಟ್ಟಿಕೊಳ್ಳುತ್ತ ''ನಾನೇ'' ಎಂದಳು.

ದತ್ತೋಪಂತನಿಗೆ ಜಂಘಾಬಲವೇ ಉಡುಗಿದಂತಾಗಿ, ಕೈಕಾಲು ನಡುಕ ಸುರುವಾಗಿ ಪೆಚ್ಚು ಪೆಚ್ಚಾಗುತ್ತ ''ತಮಾಷೆ ಮಾಡಬೇಡ ಜಾಂಬೂ... ನೀ ಈ ಕುರ್ಚಿಮ್ಯಾಲ ಕೂತದ್ದನ್ನು ಯಾವಾಗಲೂ ನೋಡೆ ಇಲ್ಲ'' ಎಂದು ಉಗ್ಗಿದ.

''ಅಯ್ಯೋ ಪೆಕರ ಮುಂಡೇದ್ದೇ ನಾ ಲೇಬರ್ ಯೂನಿಯನ್ನಿನ ಸೆಕ್ರೆಟರಿ ಅಲ್ಲವೇನೊ - ಯಾವದೇ ಆಫೀಸಿನ್ಯಾಗ ಯೂನಿಯನ್ ಸೆಕ್ರೆಟರಿ ಆದವರು ಕುರ್ಚಿಮ್ಯಾಲ ಕುಂತು ಕೆಲಸ ಮಾಡಿದ್ದು ನೋಡೀಯಾ? ಇರಲಿ, ಈಗ ನಿನ್ನ ಕೆಲಸಕ್ಕ ತೊಂದರೆಯಾಗಬಾರದಲ್ಲ? ನಾ ಹೋಗಿ ಕುರ್ಚಿಮ್ಯಾಲ ಕುಂತಗೋತೇನಿ, ನೀ ಬಾ'' ಎನ್ನುತ್ತ ಜಾಂಬುವಂತಿ ಬಾಸ್ ಭಾಬಾನ ಸೆಕ್ರೆಟರಿಯ ಸ್ಥಾನವನ್ನಲಂಕರಿಸಿ ತೋಳು ಚಾಚಿದಳು.

ಇತ್ತ ಜೇಮ್ಸ ಬಾಂಡನಿಗೆ ಮೈಯೆಲ್ಲ ಬೆವರು ಕಿತ್ತಿಬಂತು. ಗರಿಗರಿಯಾದ ಪ್ಯಾಂಟು ತುಸು ತುಸವೇ ಒದ್ದೆಯಾಗತೊಡಗಿತು. ನಾಲಿಗೆಯ ದ್ರವ ಆರತೊಡಗಿತು. ಅಂತಹದರಲ್ಲಿಯೇ ಧೈರ್ಯ ತಂದುಕೊಂಡು ಆ ಬಾಂಡೊಪಂತ, ಒಂದೊಂದೇ ಹೆಜ್ಜೆ ಹಿಂದೆ ಸರಿಯುತ್ತಾ ''ಇರಲಿ ಬಿಡಕ್ಕೋ.... ಇದೆಲ್ಲ ನಮ್ಮ ಭಾರತೀಯ ಸಂಸ್ಕೃತಿಗೆ ಹೇಳಿದ್ದಲ್ಲ'' ಎನ್ನುತ್ತ ಲೇಬರ್ ಲೀಡರ್ ಜಾಂಬುವಂತಿಗೆ ಒಂದು ರೆಡ್ ಸೆಲ್ಯೂಟ್ ಹಾಕಿ ಹಿಮ್ಮೆಟ್ಟುತ್ತ ಅವರಿವರನ್ನು ನೂಕಿ ತಳ್ಳಿ ಗದ್ದಲದಲ್ಲಿ ದಾರಿ

ಮಾಡಿಕೊಳ್ಳುತ್ತ ಓಟಕಿತ್ತ.

★★ ★

ಇದೊಂದು ಪ್ರಥಮ ಚುಂಬನದ ದಂತಭಗ್ನವನ್ನು ಬಿಟ್ಟರೆ ಮುಂದೆ ದತ್ತೋಪಂತನ ಪತ್ತೆದಾರಿ ಸುಗಮವಾಗಿಯೇ ಸಾಗಿತೆನ್ನಬೇಕು. ಅವ ಮೊಟ್ಟಮೊದಲನೆಯದಾಗಿ ಮೂರು ನಾಯಿಗಳನ್ನ ಕಳೆದುಕೊಂಡ, ವಾಚ್‌ಮನ್ ವಾಜೀದ ಅಲೀನ್ನ ಕರೆಸಿದ ವಿಚಾರಣೆಗೆ.

ವಾಜೀದ ಅಲೀ ಬರುತ್ತಲೂ ದತ್ತು ಶುರು ಮಾಡಿದ:

''ಕೆತ್ತೆ ಕುತ್ತೆ ಅತ್ತೆ''? ದತ್ತಾ ಕೇಳಿದ.

''ಏನು ಸರ್, ಏನಂದಿರಿ?'' ವಾಜೀದ ಅಲೀ ಹೌಹಾರಿದ.

''ಓಽಽಚ್ ತುಮಾರಾ ಕುತ್ತೆ ಯಾನೆ ಡಾಗ್ಸ್, ಕೆತ್ತೆ ಅತ್ತೆ?'' ಎಂದ ದತ್ತೂ.

''ಓಽ, ನಾಯಿಗಳೇ ಮೂರು ಇದ್ದವು ಸರ್, ಮೂರಕ್ಕೆ ಮೂರೂ ಸತ್ತು ಹೋದವು ಸರ್'' ಎಂದ ವಾಜೀದ ಅಲಿ.

ಈ ರೀತಿ ದತ್ತೋಪಂತ ತುರಕೀ ಭಾಷೆಯಲ್ಲಿ ಲಗಾಟೆ ಹೊಡೆಯುವುದೂ ವಾಜೀದ ಅಲಿ ಶುದ್ಧ ಕನ್ನಡದಲ್ಲಿ ಉತ್ತರ ಹೇಳುವುದೂ ನಡೆದಿತ್ತು.

''ತೀನೋ ಕುತ್ತೆ ಕೈಸೆ ಸತ್ತೆ?'' ದತ್ತೂನ ವಾಗ್‌ವೈಖರಿಯನ್ನು ತಿಳಿಯಲಾರದೇ ವಾಜೀದಲಿ ಎಲ್ಲ ವಿಷಯಗಳನ್ನು ಸವಿಸ್ತಾರವಾಗಿ ವಿವರಿಸಿದ.

''ಸರ್, ಮೊದಲನೇ ನಾಯಿ ಯು.ಪಿ.ಯಿಂದ ನನ್ನ ತಮ್ಮ ಕಳಿಸಿದ್ದು ಸರ್, ಒಳ್ಳೆ ಗುಂಡಾ ನಾಯಿಸರ್, ಬರೀ ಬೊಗಳುವದೂ, ಕಚ್ಚುವದೂ, ಕಿತ್ತಾಡುವದೂ ಇದರಲ್ಲೇ ದಿನಗಳೆದು ಸತ್ತುಹೋಯಿತು..... ಎರಡನೇದನ್ನ ನಮ್ಮ ದೋಸ್ತ ಆಂಧ್ರ ಪ್ರದೇಶದಿಂದ ಕಳಿಸಿದ್ದ ಸರ್, ಒಳ್ಳೇ ವಿಚಿತ್ರ ನಾಯಿ ಸರ್, ಇದ್ದ-ಬಿದ್ದದ್ದನ್ನೆಲ್ಲ ''ಗುಳುಂ ಗುಳುಂ'' ಅಂತ ನುಂಗಿ ಮತ್ತ ತನಗೇನು ಗೊತ್ತೇ ಇಲ್ಲದವರ ಹಂಗ ಪಿಳಿ ಪಿಳಿ ಕಣ್ಣು ಬಿಡುತ್ತ ಸುಮ್ಮನೇ ಕೂತು ಬಿಡುತ್ತಿತ್ತು ಸರ್.... ಒಂದು ದಿವ್ಸ ಪಾಪ, ಏನ್ 'ಗುಳುಂ' ಮಾಡಿತ್ತೋ ಏನೋ ಸತ್ತು ಹೋತು ಸರ್.... ಮೂರನೇದ್ದು ಹೆಣ್ಣುನಾಯಿ ಸರ್, ಮದ್ರಾಸಿನಿಂದ ನಮ್ಮ ಬೀಗರು ಕಳಿಸಿದ್ದು... ಬಾರೀ ನಾಯಿ ಸರ್, ಕೋಟು ಜಾಕೀಟು ಹಾಕಿಕೊಳ್ಳದೆ ಹೊರಗೇ ಬರುತ್ತಿದ್ದಿಲ್ಲ ಸರ್. ಅದೂ ಸತ್ತು ಹೋಯಿತು ಸಽರ್.....''

''ಈ ನಾಯಿಗಳೆಲ್ಲ ಹೆಂಗ ಸತ್ತವು ವಾಜೀದಲೀ?'' ದತ್ತೂನ ಪ್ರಶ್ನೆ.

''ಗೊತ್ತಿಲ್ಲ ಸರ್'' ವಾಜೀದ ಅಲಿ ಹೇಳತೊಡಗಿದ 'ಮೊದಲನೇ ನಾಯಿ ಸತ್ತಾಗ ನಾ ಮುಂಜಾನೇ ನಮಾಜ ಮಾಡಿ ಅದಽ ಹೊರಗ ಬಂದಿದ್ದೆ, ನಾಯಿ ಸತ್ತು ಬಿದ್ದಿತ್ತು, ಎರಡನೇ ನಾಯಿ ನಾ ಮಧ್ಯಾನ್ನದ ನಮಾಜ ಮುಗಿಸಿ ಮಕ್ಕೊಂಡಿದ್ದೆ ಆವಾಗ

ಸತ್ತು ಹೋಗಿತ್ತು- ಇನ್ನ ಮೂರನೇದೂ ಹಂಗS ಸಾ ಸಂಜೀ ನಮಾಜ ಮುಗಿಸಿ ಬಂದು ನೋಡತೀನಿ ಚರಂಡೀ ಹತ್ತರ ಸತ್ತು ಬಿದ್ದಿತ್ತು.'' ವಾಜೀದ ಅಲೀ ತನ್ನ ಹೇಳಿಕೆಯನ್ನು ಮುಗಿಸಿದ.

ದತ್ತೂನಿಗೆ ವಾಜೀದಲೀ ಹೇಳಿಕೆಯಿಂದ ವಿಶೇಷ ಉಪಯೋಗವೇನೂ ಆಗಲಿಲ್ಲ. ಆದರೂ ಒಂದು ಮಾತ್ರ ನಿಶ್ಚಿತವಾದಂತಾಗಿತ್ತು. ದತ್ತೂ ಅದನ್ನೇ ತನ್ನ ಪತ್ತೇದಾರಿ ಡಾಯರಿಯಲ್ಲಿ ಸ್ಫುಟವಾಗಿ ಬರೆದುಕೊಂಡ.

''ನಮಾಜ ಮಾಡಿದರೆ ನಾಯಿಗಳು ಸಾಯುತ್ತವೆ''

★★★

ಅದೇ ಮಧ್ಯಾಹ್ನ ದತ್ತೂ ಅಕೌಂಟ ಡಿಪಾರ್ಟ್‌ಮೆಂಟಿನ ಉರಿಮಾರಿ ಮದ್ದುರಾಯನ ಹತ್ತರ ಹೋಗಿ, ಅತ್ಯಂತ ಅನುನಯದಿಂದ ''ಸರ್, ನಿಮಗೆ ಸ್ವಲ್ಪ ಪುರುಸೊತ್ತಿದ್ದರೆ ನಿಮ್ಮ ನಾಯಿ ಬಗ್ಗೆ....'' ಎಂದು ಕೇಳುತ್ತಿದ್ದಂತೆಯೇ ಮದ್ದುರಾಯ ಕೋಪದಿಂದ ಕೆಂಡಕೆಂಡವಾಗಿ, ''ನಿನಗೆ, ನಿಮ್ಮ ಆ ಚೇರಮನ್ ಭಾಬಾಗ ಮಾಡಲಿಕ್ಕೆ ಕೆಲಸ ಇಲ್ಲ..... ಆಫೀಸಿನ ತುಂಬ ನಿಮ್ಮಂತಹ ಕೆಲಸಗಳ್ಳ ಲಫಂಗರS ತುಂಬ್ಯಾರ.... ಎಂಟು ದಿವ್ಸ ಆತು, ಆ ಕಾಂಟಿನ್‌ಜನ್ಸಿ ಅಕೌಂಟು ಟ್ಯಾಲಿ ಆಗವಲ್ಲವು.... ಇನ್ನೊಂದೆರಡು ದಿವ್ಸಕ್ಕ 'ಆಡಿಟ್' ಬರತSದ..... ಹಂತಾದರಾಗ ನಾಯೀ ತಂದಾನ ಸಾಯೀ.... ಹೆಂಗೋ ಸತ್ತಿತ್ತು - ಏನ್ ಸುಡಗಾಡು ತಿಂದಿತ್ತೋ, ಏನೋ, ಸತ್ತುಹೋತು.... ತಿನಬಾರದ್ದು ತಿಂದು ಮನಿಶ್ಯಾರು ಕೊಬ್ಬತಾರ.... ಪಾಪ, ನಾಯಿ ಸಾಯತಾವ.....'' ಎಂದು ಸಿಕ್ಕಾಪಟ್ಟೆ ಝಾಡಿಸಿ ದತ್ತೂನ ನೀರು ಇಳಿಸಿ ಕಳಿಸಿಬಿಟ್ಟ.

ಹೀಂಗಾಗಿ ಮದ್ದೂರಾಯನಿಂದಲೂ ದತ್ತೂಗ ವಿಶೇಷ ಫಾಯದೇ ಆಗಲಿಲ್ಲ. ಅವ ತನ್ನ ಪತ್ತೇದಾಗಿ ಡಾಯರಿಯಲ್ಲಿ ಬರಕೊಂಡ:

''ಮದ್ದುರಾಯನಂಥ ತಲೆತಿರುಕನ ಹತ್ತರ ನಾಯಿ ಕೂಡ ಸತ್ತುಹೋಗ್ತಾವೆ.''

★★★

ಆಮೇಲೆ ದತ್ತೋಪಂತ ಸ್ಟೋರ್ಸ್ ಡಿಪಾರ್ಟ್‌ಮೆಂಟಿನ ಸೀತಾಪತೀನ್ನ ಕರೆಸಿದ. ಸೀತಾಪತಿ ಮಾತ್ರ ಎಲ್ಲ ಮಾಹಿತಿ ಸವಿಸ್ತಾರವಾಗಿ ಕೊಟ್ಟರೂ ನಾಯಿ ಹೇಗೆ ಸತ್ತಿತೆಂದು ಹೇಳಲಾರದವನಾಗಿದ್ದ.

ಪಾಪSS..... ಎಂತಹ ಚಲುವಾದ ಗಂಡು ಜೂಲು ನಾಯಿ. ಸೀತಾಪತಿ ಅದಕ್ಕ ದಿನಾಲು ಸ್ವಂತ ಕೈಯಿಂದ ಸ್ನಾನ ಮಾಡಿಸುತ್ತಿದ್ದ. ಬಾಚಣಿಕೆಯಿಂದ ಕೂದಲು ಹಿಕ್ಕುತ್ತಿದ್ದ. ನಾಯಿಗೆ ದ್ರಾಕ್ಷಿ, ಬಾದಾಮಿ ಹಾಲು, ಆ್ಯಪಲ್ ಜೂಸು ಎಲ್ಲಾ ಅವನೇ ಕೊಡತಿದ್ದಾ, ಬಹಳ ಒಳ್ಳೇ ನಾಯಿ. ಒಂದೇ ದುರ್ಗುಣ ಅಂದ್ರೆ, ಎಲ್ಲೇ ಹೆಣ್ಣನಾಯಿ ನೋಡಿದರೂ ಬಿಡದಲೇ ಅಟ್ಟಿಸಿಕೊಂಡು ಹೋಗಿ ಗಲಾಟೆ ಮಾಡಿಬಿಡತ್ತಿತ್ತು.

''ಈ ನಾಯಿಯನ್ನ ಎಲ್ಲಿಂದ ತಂದಿದ್ದಿರಿ?'' ದತ್ತೂ ಕೇಳಿದ.

''ನನ್ನ ಭಾವಮೈದುನ ಒಬ್ಬ ಚೀಫ ಮಿನಿಸ್ಟರ ಖಾಸಗೀ ಕಾರ್ಯದರ್ಶಿಯಾಗಿ ಕೆಲಸ ಮಾಡತಾನೆ. ಅವನಿಗೆ ಚೀಫ ಕೊಟ್ಟರಂತೆ... ಅವ ನನಗ ಕೊಟ್ಟ.''

ಅವತ್ತು ದತ್ತೂನ ಪತ್ತೇದಾರಿ ಡಾಯರಿಯಲ್ಲಿ ಇನ್ನೊಂದು ಎಂಟ್ರೀ ಬಿತ್ತು.

''ನಾಯಿಗಳು ಬಲು ಬೇಗನೆ ಮನುಷ್ಯಬುದ್ಧಿಯನ್ನು ಕಲಿತುಕೊಂಡು ಬಿಡುತ್ತವೆ.''

★★★

ಎರಡು ದಿನ ಇಂತಹ ಪ್ರಶ್ನೋತ್ತರಗಳಲ್ಲಿಯೇ ಕಳೆದು ಹೋಯಿತು. ದತ್ತೂನ ಪತ್ತೇದಾರಿ ಮಂದಗತಿಯಿಂದಲೇ ಸಾಗಿತ್ತು.

ಮೂರನೆಯ ದಿನ ದತ್ತೂ ಆಫೀಸಿಗೆ ಬರುತ್ತಿದ್ದಂತೆಯೇ ಆಫೀಸಿನ ಇನ್ನೊಂದು ಭಾಗದಲ್ಲಿ ಏನೋ ಗದ್ದಲ, ಗಡಿಬಿಡಿ-ಗೌಜಿ ನಡೆದದ್ದನ್ನು ಕಂಡು, ಅತ್ತ ನಡೆದ.

ಪಬ್ಲಿಸಿಟಿ ಡಿಪಾರ್ಟಮೆಂಟಿನ ಮಾಡೆಲ್ ಡಾಲಿ ಡಿಸೋಜಾಳ ನಾಯಿ ಸತ್ತು ಬಿದ್ದಿತ್ತು.

ನಿಗಮದ ನಾಯಿಗಳ ಸಾವಿನ ಪ್ರಕರಣ ನಗರದ ಕುತೂಹಲವನ್ನೇ ಕೆಣಕಿತ್ತೆಂತಲೋ ಏನೋ, ವಿವಿಧ ಪತ್ರಿಕೆಯವರೂ, ಫೋಟೋಗ್ರಾಫರುಗಳೂ, ದೂರದರ್ಶನಿಗಳೂ ಡಾಲಿ ಡಿಸೋಜಳನ್ನು ಸುತ್ತುವರಿದು, ಅವಳ ಮತ್ತು ಅವಳ ಸತ್ತ ನಾಯಿಯ ಫೋಟೋಗಳನ್ನು ಛಕಾಛಕ್ಕೆಂದು ಕ್ಲಿಕ್ಕಿಸತೊಡಗಿದ್ದರು. ಡಾಲಿ ಸತ್ತ ನಾಯಿಯನ್ನು ಎದೆಗಪ್ಪಿಕೊಂಡು ವಿವಿಧ ಭಂಗಿಗಳಲ್ಲಿ ಮೋಹಕವಾಗಿ ಅಳುತ್ತ ಕೆಮರಾಗಳಿಗೆ ಪೋಜು ಕೊಡುತ್ತಿದ್ದಳು. ಒಮ್ಮೆ ಎಡಗಡೆಯ ಕೂದಲನ್ನೆಲ್ಲ ಬಲಗಡೆ ಹಣೆಯ ಮೇಲೆ ಚಲ್ಲಿ, ಇನ್ನೊಮ್ಮೆ ಬಲಗಡೆಯ ಕೂದಲನ್ನೆಲ್ಲ ಎಡಗಡೆ ಹಣೆಯ ಮೇಲೆ ಚಲ್ಲಿ, ಒಮ್ಮೆ ಕಪ್ಪು ಕನ್ನಡಕದಲ್ಲಿ, ಇನ್ನೊಮ್ಮೆ ಕನ್ನಡಕವಿಲ್ಲದೇ, ನೋವಿನ ಆದರೆ ಮಾದಕ ಭಂಗಿಯಲ್ಲಿ ಕೆಮರಾಗಳನ್ನು ಕೆಣಕುತ್ತಿದ್ದಳು. ಅಂತೂ ಡಾಲಿ ಡಿಸೋಜಾಳ ನಾಯಿ ಸತ್ತದ್ದು ಫೋಟೋಗ್ರಾಫರರಿಗೆ ಸಂತಸ ತಂದಿತ್ತು. ಇಲ್ಲದಿದ್ದರೆ ಯಾವನಾದರೊಬ್ಬ ದರಿದ್ರ ಮುಖದ ಮುನಿಯಪ್ಪನದೋ, ಚಿಕ್ಕತಾಯಮ್ಮನದೋ ನಾಯಿ ಸತ್ತಿದ್ದರೆ ಏನು ಮಾಡುವ ಹಾಗಿತ್ತು?

ಒಂದಿಬ್ಬರು ಪತ್ರಿಕೆಯವರು ಆಗಲೇ ಡಾಲಿಯ ಇಂಟರ್‌ವ್ಯೂ ತೆಗೆದುಕೊಳ್ಳಲು ಆರಂಭಿಸಿದ್ದರು.

''ನಿಮಗೆ ಬಾಲ್ಯದಿಂದಲೂ ನಾಯಿಗಳ ಮೇಲೆ ಪ್ರೀತಿಯೇ?''

''ಅಥವಾ ನಾಯಿಗಳಿಗೇ ನಿಮ್ಮ ಮೇಲೆ ಪ್ರೀತಿಯೋ?''

''ನಿಮ್ಮ ಆಫೀಸಿನಲ್ಲಿ ಒಟ್ಟು ಎಷ್ಟು ನಾಯಿಗಳಿವೆ?''

''ನೀವು ಬರೀ ನಾಯಿಗಳನ್ನೇ ಪ್ರೀತಿಸುವಿರೋ ಅಥವಾ ಕತ್ತೆ ಕೋಣಗಳನ್ನೂ

ಪ್ರೀತಿಸುವಿರೊ?''

''ಮುಂದೆ ಏನು ಮಾಡಬೇಕೆಂದಿರುವಿರಿ?''

''ನಿಮ್ಮಂತೆ ನಾಯಿ ಸತ್ತವರಿಗೆ ನಿಮ್ಮ ಸಂದೇಶವೇನು?''

ಈ ರೀತಿ ಅಂದು ನಾಯಿಯನ್ನು ಕಳೆದುಕೊಂಡ ಡಾಲಿ ಉತ್ಸವ ಮೂರ್ತಿಯಾಗಿ ಅಳುತ್ತಳುತ್ತ ನಲಿದಾಡುತ್ತಿರಬೇಕಾದ ಸಮಯಕ್ಕೆ ಸರಿಯಾಗಿ ದತ್ತೂಪಂತ ಅಲ್ಲಿಗೆ ಬಂದ. ಬಂದವನೇ ''ಡಾಲಿ, ನಿನ್ನ ಜತೆ ಸ್ವಲ್ಪ ಕಾನ್ಫಿಡೆನ್ಶಿಯಲ್ ಆಗಿ ಮಾತಾಡುವದಿದೆ, ಬಾ'' ಎನ್ನುತ್ತ ಅವಳನ್ನು ಎಲ್ಲರಿಂದ ದೂರ ಇನ್ನೊಂದು ಮೂಲೆಗೆ ಎಳೆದೊಯ್ದ. ಉಳಿದೆಲ್ಲರ ಕಿವಿಯಳತೆಯಿಂದ ಸಾಕಷ್ಟು ದೂರ ಬಂದಮೇಲೆ ದತ್ತೂವಿಗೆ ಮಾತಾಡಲು ಬಿಡದೇ ಡಾಲಿಯೇ ''ದತ್ತೂ ಡಿಯರ್, ಪ್ಲೀಜ ಒಂದು ಹೆಲ್ಪ ಮಾಡುವಿಯಾ? ಈ ಪ್ರೆಸ್ಸಿನವರನ್ನs ದೂರದರ್ಶನದವರನ್ನ ಕೊಂಚ ಗಿಲೀಟು ಮಾಡಿ, ನನ್ನದೊಂದು ಒಳ್ಳೇ ಇಂಪ್ರೆಸಿವ್ ಆಗಿ ಬಂದದ್ದು ಫೋಟೊನೆ ಹಾಕಲಿಕ್ಕೆ ಹೇಳತೀಯಾ ಯು....ನೋ? ಕರ್ವ್ಸ ಆಂಡ್ ಕೌಂಟೂರ.... ಯು... ನೋ.. ಯಾರಿಗೆ ಗೊತ್ತು? ಬ್ರೇಕ್ ಯಾವಾಗ ಎಲ್ಲಿಂದ ಬರುತ್ತದೆಯೆಂದು?...'' ಎಂದು ಅಂಗಲಾಚುತ್ತ ''ಈ ಸ್ಟುಪಿಡ್ ನಾಯಿ ಇವತ್ತೇ ಅಂದರೆ ನಾನು ಸೀರೆ ಉಟ್ಟಕೊಂಡು ಬಂದ ದಿನವೇ ಸಾಯಬೇಕಿತ್ತೆ..... ಮೊದಲೇ ಗೊತ್ತಿದ್ದರೆ ಜೀನ್ಸ್. ಟೀಶರ್ಟು ಹಾಕ್ಕೊಂಡು ಬರುತ್ತಿದ್ದೆನಲ್ಲೋ....'' ಎಂದು ಗೋಳಾಡಿದಳು. ಡಾಲಿಯಂತಹ ಚಲುವೆಯ ಗೋಳಾಟವನ್ನು ಕಂಡು ದತ್ತೋಪಂತ ಇಷ್ಟಿಷ್ಟಾಗಿ ಇಷ್ಟಿಷ್ಟಾಗಿ ಕರಣಿ ಕರಣಿಯಾಗಿ ಕರಗಲಿಕ್ಕೆ ಹತ್ತಿದ್ದ. ಆದರೆ ಭಾಬಾನ ಒಂದು ವಾರದ ಗಡುವು ನೆನಪಾಗಿ ಮತ್ತೆ ಕಾರ್ಯಪ್ರವೃತ್ತನಾದ.

''ಡಾಲೀ.... ನೀ ಮನೆಯಿಂದ ದಿನಾಲೂ ಲಂಚ್‌ಬಾಕ್ಸ ತರುವೆಯಲ್ಲ.... ಇವತ್ತೇನಾದ್ರೂ ಪುಳಿಯೋಗರೆ ತಂದಿದ್ದೆಯಾ?'' ಎಂದು ಕೇಳಿದ.

''ಇಲ್ಲವಲ್ಲ'' ಎಂದಳು ಡಾಲಿ.

★★★

ದತ್ತೋಪಂತನಿಗೆ ಭಾಬಾ ವಿಧಿಸಿದ ಒಂದು ವಾರದ ಗಡುವಿನಲ್ಲಿ ನಾಲ್ಕುದಿನ ಕಳೆದುಹೋಗಿತ್ತು. ಅವನ ಪತ್ತೇದಾರಿ ಕುಂಟಿ ಕುಂಟಿ ಕುಂಟುತ್ತಿತ್ತು. ಅಂದು ಡಾಲಿಯ ನಾಯಿ ವಾಂತಿ ಭೇದಿಯಿಂದ ಸತ್ತದ್ದನ್ನೂ ಮತ್ತು ವಾಂತಿಯಲ್ಲಿ ಪುಳಿಯೋಗರೆಯ ಅಂಶಗಳು ಇದ್ದುದನ್ನೂ ಕಂಡಮೇಲೆ, ಅಲ್ಲೊಬ್ಬರು ಇಲ್ಲೊಬ್ಬರು ಮೊದಲು ಸತ್ತ ನಾಯಿಗಳೂ ಪುಳಿಯೋಗರೆ ತಿಂದೇ ಸತ್ತಿರಬಹುದೆಂದೂ ತಾವು ನೋಡಿದುದಾಗಿಯೂ ತಮ್ಮ ನೆನಪು ಕೆದರಿ ತೊಡಗಿದ್ದರು.

ಅಂತೂ ನಿಗಮದ ನಾಯಿಗಳು ಪುಳಿಯೋಗರೆ ತಿಂದು ವಾಂತಿಭೇದಿ ಮಾಡಿಕೊಂಡು ಸಾಯುತ್ತಿರಬಹುದಾದ/ಸತ್ತಿರಬಹುದಾದ ಸಾಧ್ಯತೆಗಳನ್ನು

ಅಲ್ಲಗಳೆಯುವಂತಿರಲಿಲ್ಲ.

ಆದರೆ ಆಫೀಸಿಗೆ ಯಾರು ಪುಳಿಯೋಗರೆ ತರುತ್ತಾರೆ? ಈ ನಾಯಿಗಳು ಆ ಪುಳಿಯೋಗರೆಯನ್ನು ಯಾಕೆ ತಿನ್ನುತ್ತವೆ? ಪುಳಿಯೋಗರೆಯಲ್ಲಿ ವಿಷ ಬೆರೆಸಿರುತ್ತಾರೆಯೆ? ಏನಿದೆಲ್ಲ ಎಂದು ತಿಳಿಯದೇ ದತ್ತೋಪಂತ ಕಂಗೆಟ್ಟ. ಎರಡು ದಿನ ಊಟದ ಬಿಡುವಿನಲ್ಲಿ ಎಲ್ಲರ ಟೇಬಲ್ ಬಳಿ ಅಡ್ಡಾಡಿದ. ಆದರೆ ಪುಳಿಯೋಗರೆಯ ಸುಳಿವೇ ಇಲ್ಲ! ಜನರೆಲ್ಲ ಹುಳಿತ ದೋಸೆ, ಹಳಸಿದ ಇಡ್ಲಿ, ಕಟಕ ಚಪಾತಿ, ಬಿರಿತ ಮೊಸರನ್ನಗಳ ಡಬ್ಬಿ ತೆಗೆದು ತಿನ್ನುತ್ತಿದ್ದರೇ ಹೊರತು ಪುಳಿಯೋಗರೆಯ ಗಂಧಗಾಳಿ ಇದ್ದಿಲ್ಲ.

ವಾರದ ಗಡುವಿಗೆ ಇನ್ನೆರಡು ದಿನ ಉಳಿದಿತ್ತು. ಈಗ ದತ್ತೋಪಂತ ನಿಜಕ್ಕೂ ನರ್ವ್ಹಸ್ ಆಗತೊಡಗಿದ.

★★ ★

ಅವತ್ತು ಭಾನುವಾರ. ದತ್ತೋಪಂತ ಬೆಳಗಿನ ವಾಯುವಿಹಾರಕ್ಕೆಂದು ಯಾವದೋ ಪಾರ್ಕಿಗೆ ಬಂದು. ಒಂದು ಕಲ್ಲು ಬೆಂಚಿನ ಮೇಲೆ ಕುಳಿತಿದ್ದ. ಇವನು ಕುಳಿತಿದ್ದ ಬೆಂಚಿನ ಮುಂದೆಯೇ ಅನತಿ ದೂರದಲ್ಲಿ ಒಂದು ಕಾಲುದಾರಿ - ಜಾಗಿಂಗಕ್ಕೆಂದೇ ಹೇಳಿ ಮಾಡಿಸಿದಂತಹದು - ವರ್ತುಲಾಕಾರವಾಗಿ ಪಾರ್ಕಿನ ಸುತ್ತಲೂ ಚಾಚಿಕೊಂಡಿತ್ತು. ಆಗಲೇ ವಾಕಿಗರು ಒಬ್ಬೊಬ್ಬರಾಗಿ ಇಬ್ಬಿಬ್ಬರಾಗಿ ಕಾಲುದಾರಿಯ ಮೇಲೆ ಓಡುತ್ತಲೋ, ಏದುತ್ತಲೋ, ಏದುಸಿರು ಬಿಡುತ್ತಲೋ, ತನ್ಮಯತೆಯಿಂದ, ನಿಷ್ಠೆಯಿಂದ ಪ್ರದಕ್ಷಿಣೆಗೆ ತೊಡಗಿದ್ದರು.

ದತ್ತೂ ಅನ್ಯಮನಸ್ಕನಾಗಿ, ಚಿಂತಾಕ್ರಾಂತನಾಗಿ, ಶೂನ್ಯವನ್ನು ನಿಟ್ಟಿಸುತ್ತ ಕುಳಿತಿದ್ದವನು, ಇದ್ದಕ್ಕಿದ್ದಂತೆ ಕಿವಿ ನಿಮಿರಿಸಿ ಸೆಟೆದು ಕುಳಿತುಕೊಂಡ. ಯಾರೋ ಇಬ್ಬರು ಮಹಿಳೆಯರು ಪ್ರದಕ್ಷಿಣೆ ಹಾಕುತ್ತ ಮಾತಿನಲ್ಲಿ ಮಗ್ನರಾಗಿ ನಡೆದರು ಪದೇ ಪದೇ 'ಪುಳಿಯೋಗರೆ.... ಪುಳಿಯೋಗರೆ' ಎಂದು ಪುನರುಚ್ಚರಿಸುತ್ತ ನಡೆದಿದ್ದರೆ. ದತ್ತೂ ಕಣ್ಣು ಬಿಟ್ಟು ನೋಡಿದ. ಒಬ್ಬಳು ಅತಿ ವಿಶಾಲಾಂಗಿ, ಇನ್ನೊಬ್ಬಳು ತೀರ ಕೃಶಾಂಗಿ. ಲಾರೆಲ್-ಹಾರ್ಡಿಗಳು ಸ್ತ್ರೀರೂಪ ಧಾರಣ ಮಾಡಿ ಬಂದಂತವರಿದ್ದರು. ದತ್ತೂ ತನ್ನ ಕಲ್ಲು ಬೆಂಚಿನಿಂದ ಎದ್ದು ಈ ನಾರೀಮಣಿಗಳನ್ನು ಹಿಂಬಾಲಿಸಿದ. ಪುಣ್ಯಕ್ಕೆ ಎಲ್ಲ ಗಂಡಸರಂತೆ ಈ ವಿದ್ಯೆಯಲ್ಲಿ ಅವನೂ ನಿಷ್ಣಾತನಾಗಿದ್ದ!

ಪಹಿಲವಾನ ಪಿಪಾಯಿ ಒಂದೇ ಸಮನೆ ಬಿಟ್ಟೂ ಬಿಡದೇ ವಡ-ವಡ ಮಾತಾಡುತ್ತಿದ್ದಳು. ಪಾಪದ ಪೀಂಚು ಬರೀ ಹೂಂಗುಟ್ಟುತ್ತ ನಡೆದಿದ್ದಳು. ಮಾತೆಲ್ಲ ಪುಳಿಯೋಗರೆಮಯವಾಗಿತ್ತು. ನಾರೀದ್ವಯರನ್ನು ಹಿಂಬಾಲಿಸಿ ಅರ್ಧ ಪ್ರದಕ್ಷಿಣೆ ಮುಗಿಸುವ ಹೊತ್ತಿಗೆ ದತ್ತುನ ತಲೆಯಲ್ಲಿ ನಿಚ್ಚಳ ಬೆಳಕು ಬೀಳುವಷ್ಟು ವಿಷಯ ಸಂಗ್ರಹಣೆಯಾಗಿತ್ತು. ಅದೇನಂದರೆ:

ಧಿಬಲೋತ್ತಮೆ ತಿಂಗಳಿಗೊಮ್ಮೆ ಇಪ್ಪತ್ತು ಕೆ.ಜಿ. ಪುಳಿಯೋಗರೆ ಮಾಡಿ ಫ್ರಿಜ್‌ನಲ್ಲಿಟ್ಟು ಬಿಡುತ್ತಿದ್ದಳು. ಆಮೇಲೆ ದಿನಾಲು ಗಂಡನಿಗೆ ಅದೇ ಪುಳಿಯೋಗರೆಯನ್ನು ಅವನು ಆಫೀಸಿಗೆ ಹೋಗುವಾಗ ಲಂಚಡಬ್ಬದಲ್ಲಿ ಹಾಕಿ ಕಳುಹಿಸುತ್ತಿದ್ದಳು. 'ದಿನಾಲೂ ಯಾರು ಅಡುಗೆ ಮನೆಯಲ್ಲಿ ಕೊಳೆಯುತ್ತಾರೆ.... ಮೊದಲೇನೋ ಪತಿರಾಯ ಹಾರಾಡಿದ..... ಈಗ ಅವನಿಗೂ ಅದೇ ಅಭ್ಯಾಸವಾಗಿದೆ'' ಇತ್ಯಾದಿ ಇತ್ಯಾದಿ.

ದತ್ತೋಪಂತನ ತಲೆಯೆಂಬುದು ಪುಳಿಕುರುಕ್ಷೇತ್ರವಾಗಿತ್ತು. 'ಈ ಧಿಬಲೋತ್ತಮೆ ಯಾರು!.... ಪ್ರತಿದಿನ ಬಿಟ್ಟೂ ಬಿಡದೆ ಪುಳಿಯೋಗರೆ ತಿನ್ನುತ್ತಿರುವ ಅವಳ ಆ ನತದೃಷ್ಟ ಗಂಡ ಯಾರು?.... ಆ ಪುಳಿಯೋಗರೆ ಹೇಗಿರುತ್ತೆ? ಆ ಗಂಡ ಇನ್ನೂ ಬದುಕಿರಬಹುದೇ?.... ಪುಳಿಯೋಗರೆ ಸಿಕ್ಕರೆ ಅದನ್ನು ಕೆಮಿಕಲ್ ಪರೀಕ್ಷೆಗೆ ಕಳುಹಿಸಬೇಕೋ ಹೇಗೆ?' ಇತ್ಯಾದಿ ಪ್ರಶ್ನೆಗಳು ದತ್ತೂನನ್ನು ಮುತ್ತಿ ಕಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಅವನ ಹಳೆಯ ಗೆಳೆಯ ಮುನಿಸ್ವಾಮಿರಾಜು ಅವನೆದುರು ನಿಂತು ''ಹಲೋ.... ದತ್ತೂ.... ಏನೋ.... ನೀನಿಲ್ಲಿ? ತೋಟಗಾರಿಕೆ ಮಾಡತಾ ಇದ್ದೀಯೇನೋ? ಇನ್ನೂ ಹಳೇ ಅಭ್ಯಾಸ ಬಿಟ್ಟಿಲ್ಲಾ ಅಂತ ತೋರುತ್ತದೆ'' ಎಂದು ನಗಾಡಿದ. ದತ್ತೂ ಮುನಿಸ್ವಾಮಿ ರಾಜೂನನ್ನು ಪಕ್ಕಕ್ಕೆಳೆದು ''ಲೋ.... ಮುನಿಯಾ.... ಆ ಪುಳಿಯೋಗರೆ ಮಹಿಳೆ ಯಾರು?'' ಎಂದ.

ಮುನಿಸ್ವಾಮಿ ''ನಿನಗೆ ಯಾರು ಬೇಕು? ಆ ಲಾರೆಲ್ಲಾವತಿಯೋ..... ಏನು ಹಾರ್ಡಾಂಬಿಕೆಯೋ'' ಎಂದ.

ದತ್ತು ''ಪತಿಪ್ರಾಣ ತಿನ್ನುವ ಆ ಪುಳಿಯೋಗರೆ ಪ್ರವೀಣೆ ಹಾರ್ಡಾಂಬಿಕೆ. ಅವಳಾರು? ಬೇಗ ಹೇಳು'' ಎಂದ.

ಮುನಿಸ್ವಾಮಿ ರಾಜು ಹಾರ್ಡಾಂಬಿಕೆ ಯಾರೋ ತಿಳಿಯದೆಂದೂ ಆದರೆ ದಿನಾಲೂ ಒಂದು ಪ್ರತಿಷ್ಠಿತ ಅಂಬಾಸಿಡರ್ ಕಾರಿನಲ್ಲಿ ಬಂದು, ಪಾರ್ಕಿನಲ್ಲಿ ಸುತ್ತಿ, ಬೊಜ್ಜಿಳಿಸಿಕೊಂಡು ಹೋಗುತ್ತಾಳೆಂದೂ, ಕಾರಿನ ಡ್ರಾಯವರ್ ಇಲ್ಲೇ ಹನ್ನೊಂದನೇ ಕ್ರಾಸಿನ ಬಳಿ ಕಾರು ನಿಲ್ಲಿಸಿಕೊಂಡು ದಿನಾಲೂ ಇವಳಿಗೆ ಕಾಯುತ್ತಿರುತ್ತಾನೆಂದೂ, ಇವತ್ತು ಕೂಡ ಅವನು ಅಲ್ಲೇ ನಿಂತಿರುವನೆಂದೂ, ಇನ್ನೇನು ಈ ಅತಿವಜನಾ ಕೂಡ ಮನೆಗೆ ಹೊರಡುವ ಹೊತ್ತು ಆಯಿತೆಂದೂ ಹೇಳಿದ.

ಮುನಿಸ್ವಾಮಿರಾಜು ಇಷ್ಟು ಹೇಳುವದೇ ತಡ, ದತ್ತೂ ಜಾಗಿಂಗ್ ಕಾಲುದಾರಿಯ ಮೇಲೆ ಕಣ್ಣಾಡಿಸಿದ. ಲಾರೆಲ್ಲಾವತಿಯೂ ಹಾರ್ಡಾಂಬಿಕೆಯೂ, ವಾಕಿಂಗ್ ಮುಗಿಸಿ ಮರಳಿ ಹೊರಟಿದ್ದರು. ದೂರದಲ್ಲಿ ಆ ವಿಶಾಲೂ ಕೃಶಾಲೂಗೆ 'ಟಾ-ಟಾ' ಹೇಳುವದು ಕಾಣಿಸುತ್ತಿತ್ತು. ಅದನ್ನು ಕಂಡ ದತ್ತೂ ಸತ್ತೆನೋ - ಕೆಟ್ಟೆನೋ ಅನ್ನುತ್ತ ಹನ್ನೊಂದನೇ ಕ್ರಾಸಿಗೆ ಓಟ ಕಿತ್ತ. ಇವನು ಓಡೋಡಿ ಏದುಸಿರು ಬಿಡುತ್ತ ಹನ್ನೊಂದನೇ ಕ್ರಾಸಿಗೆ ಬರುವದಕ್ಕೂ, ಆ ಪ್ರತಿಷ್ಠಿತ ಅಂಬಾಸಿಡರ್ ಕಾರಿನ

ಡ್ರಾಯವರ್, ಯಜಮಾನಿ ಹಾರ್ಡಾಂಬಿಕೆಗೆ ಬಾಗಿಲು ತೆರೆದು ನಂತರ ತಾನು ಹೋಗಿ ತನ್ನ ಸೀಟಿನಲ್ಲಿ ಕುಳಿತು ಕಾರನ್ನು ಸ್ಟಾರ್ಟ್ ಮಾಡಿಕೊಂಡು ಹೋಗುವದಕ್ಕೂ ಒಂದರ್ಧ ಕ್ಷಣದ ಅಂತರವಿದ್ದೀತು. ಆ ಅರ್ಧ ಕ್ಷಣದಲ್ಲಿ ದತ್ತೋಪಂತ ಆ ಪ್ರತಿಷ್ಠಿತ ಅಂಬಾಸಿಡರ್ ಕಾರಿನ ಡ್ರಾಯವರನನ್ನು ನೋಡಿಬಿಟ್ಟ. ನೋಡಿ ಆಶ್ಚರ್ಯಾಘಾತದಿಂದ ಗರಹೊಡೆದವನಂತೆ ಗಕ್ಕನೇ ನಿಂತುಬಿಟ್ಟ!!

★★★

ಮರುದಿನ ಸೋಮವಾರ, ಆಫೀಸಿಗೆ ಬರುತ್ತಲೂ ದತ್ತೋಪಂತ, ನಾರಾಯಣ ನಾಯರ್‌ಗೆ ಹೇಳಿ ಕಳಿಸಿದ. ನಾರಾಯಣ ನಾಯರ್ ಬರುತ್ತಲೂ ದತ್ತೂ ಅವನನ್ನು ಸುದೀರ್ಘ ವಿಚಾರಣೆಗೆ ಗುರಿಪಡಿಸಿದ. ದತ್ತೂನ ಕೇಬಿನ್ನಿನ ಗಾಜಿನಿಂದ, ಅವ ನಾಯರ್‌ಗೆ ಏನೇನೋ ಪ್ರಶ್ನೆ ಕೇಳುತ್ತಿರುವದೂ, ಆ ಪ್ರಶ್ನೆಗಳಿಗೆಲ್ಲ ನಾಯರ್ ವಿಧೇಯನಾಗಿ ಉತ್ತರಿಸುತ್ತಿರುವದೂ ಕಾಣುತ್ತಿತ್ತೇ ಹೊರತು ಅವರ ಮಾತು ಹೊರಗಿನವರಿಗೆ ಕೇಳುತ್ತಿರಲಿಲ್ಲ. ಇದ್ದಕ್ಕಿದ್ದಂತೆ ನಾರಾಯಣ ನಾಯರ್ ಅಳುತ್ತಳುತ್ತ ದತ್ತೂನ ಕಾಲು ಹಿಡಿದುಕೊಂಡು ಏನೇನೋ ಗೋಗರೆಯುತ್ತಿದ್ದುದೂ, ದತ್ತೂ ಅವನಿಗೆ ಅಭಯವೀಯುತ್ತಿದ್ದ ದೃಶ್ಯವೂ ಗಾಜಿನಿಂದ ಕಾಣುತ್ತಿತ್ತು.

★★★

ಮುಂದೆ ಅರ್ಧಗಂಟೆ ಬಿಟ್ಟು ರಾಹುಕಾಲ ಕಳೆದುಕೊಂಡು, ದತ್ತು ಕೈಯಲ್ಲಿ 'ಆಪರೇಶನ್ ಕ್ವಿನಾಯಿನ್'ದ ಫಾಯಿಲ್ ಹಿಡಕೊಂಡು, ಒಳ್ಳೇ ಗತ್ತಿನಿಂದ ಆಢ್ಯತೆಯಿಂದ ಶಿಳ್ಳೆ ಹಾಕುತ್ತ ಚೇರ್ಮನ್ - ಭಾಲ್ಕೀ ಬಾಪೂಶೆಟ್ಟಿಯ ಕೇಬಿನ್ ಹೊಕ್ಕ.

ಭಾಬಾ ಯಥಾಪ್ರಕಾರ ಗೋಡೆಗೆ ಮುಖಮಾಡಿ ಜಗತ್ತಿನ ನಕಾಶದಲ್ಲಿ ಗುಲ್ಬರ್ಗಾ, ಬೀದರ್, ಭಾಲ್ಕಿ ಊರುಗಳೆಲ್ಲ ಎಲ್ಲೆಲ್ಲಿ ಬರುತ್ತವೆಂದು ನೋಡುತ್ತಿದ್ದವರು ಹೊರಳಿ ನೋಡಿ, ದತ್ತುನಿಗೆ ''ಬಾ, ಕುಂದರು'' ಎಂದರು.

ದತ್ತೂ ಅವರ ವಿಶಾಲ ಟೇಬಲ್ ಮೇಲೆ ಫಾಯಿಲ್ ಚಲ್ಲಿ, ಎದುರಿನ ಕುರ್ಚಿಯಲ್ಲಿ ಮೈಚಲ್ಲಿ;

''ನಿಮ್ಮ ಆಪರೇಶನ್ ಕ್ವಿನಾಯಿನ್'ದ ಕೆಲಸ ಪೂರ್ತಿಯಾಗಿದೆ ತಗೊಳ್ಳಿ' ಎಂದ.

ಭಾಬಾ ಸಂತೋಷದಿಂದ ಕಣ್ಣರಳಿಸಿ, ''ಹೌದ!.... ಭೇಷಾತು... ಭೇಷಾತು... ಹಂಗಾರ ನಾಯಿಗೊಳು ಹೆಂಗ ಸಾಯತ್ತಿದ್ದವು ತಿಳಿತೇನು?'' ಎಂದು ಕೇಳಿದರು.

ದತ್ತೂ, ''ಹೌದು.... ತಿಳೀತು..... ನಾಯಿಗಳು ಪುಳಿಯೋಗರೆ ತಿಂದು ಸಾಯತ್ತಿದ್ದುವು'' ಎಂದ.

ಭಾಬಾ, ''ಹೌದ!... ಇವನಾಪನ,... ಅಂದರ ಪುಳಿಯೋಗರೆ ಒಳಗ ಯಾರರ ವಿಷಹಾಕಿ - ನಾಯಗೆ ತಿನಸತಿದ್ದರೇನು? ಎಂದು ಕುತೂಹಲಿಗಳಾದರು. ದತ್ತೂ, 'ವಿಷ ಬೆರೆಸುವ ಕಾರಣವೇನೂ ಇಲ್ಲ.... ಆ ಪುಳಿಯೋಗರೆ ತಿಂದರೆ ನಾಯಿ ಅಷ್ಟು

ಯಾಕೆ, ಮನುಷ್ಯರು ಕೂಡ ಸಾಯತ್ತಾರ' ಎಂದ.

ಭಾಬಾ, ''ಯಾರಪ್ಪಾ, ಅವರು ಓಂತಾ ಪುಳಿಯೋಗರೆ ತಂದು ನಮ್ಮ ನಾಯಿಗಳಿಗೆ ಹಾಕೋವರು?'' ಎಂದರು.

ದತ್ತೂ, ಒಂದು ಕ್ಷಣ ಸುಮ್ಮನಿದ್ದು ಆಮೇಲೆ ನೇರವಾಗಿ, ಭಾಬಾರ ಕಣ್ಣಲ್ಲಿ ಕಣ್ಣಿಟ್ಟು, ಒಮ್ಮೆಲೇ ''ನೀವು'' ಎಂದು ಬಾಂಬು ಎಸೆದ.

ಆ ಕ್ಷಣಕ್ಕೆ ಭಾಬಾ ಒಮ್ಮೆಲೇ ಕೋಪೋದ್ರಿಕ್ತರಾಗಿ ಎರಡು ಕೈಗಳಿಂದ ಟೇಬಲ್ ಗುದ್ದಿ ಮೇಲೆದ್ದು ನಿಂತು. ದತ್ತೂನಿಗೆ, ''ನಿಂದ ತಲಿಗಿಲಿ ಕೆಟ್ಟೈತೇನು? ನಾಯಿಗಳಿಗೆ ಪುಳಿಯೋಗರೆ ತಿನಿಸಿ ಕೊಲ್ಲೂಹಂತ ಕೆಟ್ಟ ಬುದ್ಧಿ ನನಗ್ಯಾಕ ಬರಬೇಕು?'' ಎಂದರು.

ಅದಕ್ಕೆ ದತ್ತೂ,

''ಯಾಕಂದರೆs ಆ ಪುಳಿಯೋಗರೆ ಒಂದು ವೇಳೆ ನೀವು ತಿಂದಿದ್ದರೆ ನೀವೂ ಸಾಯತಿದ್ದಿರಿ.... ನೀವು ಉಳೀಬೇಕು ಅಂತ ನಾಯಿಗಳನ್ನು ಕೊಂದಿರಿ'' ಎಂದ.

ಭಾಬಾ; 'ನೀ ಏನ್ ಮಾತಾಡಕಹತ್ತೀದಿ, ನಿನಗರ ತಿಳೀತೈತೇನು?..... ಏನು? ನಿನ್ನ ತಲಿ ತಲಿಡಾಕ್ಟರ ಹತ್ಯಾಕ ತೋರಸಬೇಕೂ?'' ಎಂದೊದರಿದರು.

ದತ್ತೂ, ''ಇನ್ನೇನು.... ಎಲ್ಲಾ ಈಗ ತಾನೇ ತಿಳಿಯುತ್ತದೆ ನೋಡಿ'' ಎನ್ನುತ್ತಾ ಆಢ್ಯತೆಯಿಂದ ಎರಡು ಸಲ ಗಟ್ಟಿಯಾಗಿ ಚಪ್ಪಾಳೆ ಬಾರಿಸಿದ.

ಪೂರ್ವ ನಿಯೋಜಿತ ಯೋಜನೆಯಂತೆ, ದತ್ತೂ ಕೈತಟ್ಟುತ್ತಲೂ ನಾರಾಯಣ ನಾಯರ್ ಧಾವಿಸಿ ಒಳಗೆ ಬಂದು, ವಿಧೇಯನಾಗಿ ಮುಖ ಕೆಳಗೆ ಹಾಕಿ ನಿಂತ. ಆಗ ದತ್ತೂ ಭಾಬಾಗೆ ''ಇವರು ಯಾರು, ಗೊತ್ತೇನು ನಿಮಗೆ?'' ಎಂದ. ತುಸು ವ್ಯಂಗ್ಯ ಬೆರೆತ ದನಿಯಲ್ಲಿ;

''ಇವ ನಾರಾಯಣ ನಾಯರ್, ನಮ್ಮ ಡ್ರಾಯವರ್.... ಇಂವಗ - ನಾಯಿಗೆ - ಪುಳಿಯೋಗರಗೆ - ನನಗs ಏನ್ ಸಂಬಂಧ'' ಎಂದು ಭಾಬಾ ಹಟದಲ್ಲಿ ಹೇಳಿದರೂ ತುಸು ಚಿಂತಾಕ್ರಾಂತರಾದಂತೆ ಕಂಡರು. ಆಗ ದತ್ತೋಪಂತ, ಸಮಸ್ಯೆಯನ್ನು ಬಿಡಿಸಿದ, ಒಬ್ಬ ಸಫಲ ಪತ್ತೇದಾರನ ಆತ್ಮವಿಶ್ವಾಸದಲ್ಲಿ ಹೇಳತೊಡಗಿದ. ''ಸರ್.... ಇನ್ನು ಈ ನಾಟಕವನ್ನು ನಿಲ್ಲಿಸಿರಿ.....ನಿಮ್ಮಿಂದ ತಿಳಿದೋ... ತಿಳಿಯದೆಯೋ ಈ ನಾಯಿಗಳ ಕೊಲೆ ನಡೆದದೆ'' ಎಂದು ಹೇಳುತ್ತಿದ್ದವನು ಮಧ್ಯಕ್ಕೆ ತಡೆದು ಇನ್ನೂ ಅಲ್ಲಿಯೇ ನಿಂತಿದ್ದ ಡ್ರಾಯವರ್ ನಾರಾಯಣ ನಾಯರನನ್ನು ಹೊರಗೆ ಕಳಿಸಿ ಮತ್ತೆ ಹೇಳತೊಡಗಿದ. ''.... ಈಗ ಹೇಳಿ, ನಿಮ್ಮ ಧರ್ಮಪತ್ನಿ ಹಾರ್ಡಾಂಬಿಕೆಯವರು, ತಿಂಗಳಿಗೊಮ್ಮೆ ಇಪ್ಪತ್ತು ಕೇ.ಜಿ. ಪುಳಿಯೋಗರೆ ಮಾಡಿ ಫ್ರಿಜ್‌ನಲ್ಲಿಟ್ಟು ಅದನ್ನೇ ನಿಮಗೆ ದಿನಾಲೂ ಲಂಚ ಬಾಕ್ಸಿನಲ್ಲಿ ಕಳಿಸುತ್ತಿರಲಿಲ್ಲವೇ? - ನೀವು ಇದನ್ನು ಮೊದಲೊಮ್ಮೆ ಬಿಟ್ಟು, ಆಮೇಲೆ ಎಂದೂ ತಿಂದಿಲ್ಲ. ಏಕೆಂದರೆ ಮೊದಲ ಸಲ ಇದನ್ನ ತಿಂದಾಗ ನಿಮಗ ವಾಂತಿ ಭೇದಿಯಾಗಿ ಅದೇ ಮುಂದೆ ಜಾಂಡೀಸಿಗೆ ತಿರುಗಿ ನೀವು

ತಿಂಗಳೊಪ್ಪತ್ತು ಆಸ್ಪತ್ರೆಯಲ್ಲಿರಬೇಕಾಗಿ ಬಂದದ್ದು ಸುಳ್ಳೇ'' ಎಂದು ದತ್ತೂ ಅರ್ಧಕ್ಕೆ ನಿಲ್ಲಿಸಿ ಭಾಬಾರ ಮುಖ ನೋಡಿದ. ಭಾಬಾ ಆಶ್ಚರ್ಯಾಘಾತದಿಂದ ಸಪ್ಪೆ ಮುಖಮಾಡಿ ಬೆಪ್ಪರಂತೆ ದತ್ತೂನ ಮಾತಿಗೆಲ್ಲ ಗೋಣು ಹಾಕುತ್ತ ''ಹೌದ್.... ಹೌದ್..... ಹೌದSS'' ಎನ್ನುತ್ತ ನಿಂತಿದ್ದರು. ''ಅವತ್ತಿನಿಂದ ನೀವು ಮನೆಯಿಂದ ಆಫೀಸಿಗೆ ಬರುತ್ತಲೂ ಊಟದ ಡಬ್ಬಿಯನ್ನು ಡ್ರಾಯವರ್ ನಾರಾಯಣನಿಗೆ ಕೊಟ್ಟು, ನೀವು ಊಟಕ್ಕೆ ಕಾಮತ್ ಯಾತ್ರೀ ನಿವಾಸಕ್ಕೆ ಹೋಗುತ್ತಿದ್ದಿರಲ್ಲವೇ? ಮುಂದೆ ಕೇಳಿ, ನಾಯರ್ ಕೂಡ ಆ ಪುಳಿಯೋಗರೆಯನ್ನು ಒಮ್ಮೆ ಮಾತ್ರ ತಿಂದ, ಅವನಿಗೂ ಜಾಂಡೀಸ ಆಗಿ ಯಕೃತ್ ಕೆಟ್ಟು ಮೂರು ತಿಂಗಳು ಒದ್ದಾಡಿದ.... ಮುಂದೇನಾಯಿತು ಗೊತ್ತೇ?'' ಎಂದ ದತ್ತೂ. ಆಗ ಭಾಬಾರವರು ಮಧ್ಯ ಬಾಯಿ ಹಾಕಿ- ''ದೇವರಾಣೆ ಮಾಡಿ ಹೇಳತೇನಿ ದತ್ತೂ - ನಾ ಲಂಚಡಬ್ಬಿ ನಾರಾಯಣಗ ಕೊಡತಿದ್ದೆ - ಖರೆ, ಆದರೆ ಅಂವ ಮುಂದೆ ಏನ್ ಮಾಡತಿದ್ದಾ - ಬಿಡತಿದ್ದಾ ಒಂದೂ ಗೊತ್ತಿಲ್ಲ ನನಗ. ಸಂಜೀಕೆ - ಮನೀಗೆ ಹೋಗುವಾಗ ನಾಯರ್ ಲಂಚಡಬ್ಬಿ ಕಿಲೀನ ಆಗಿ ತೊಳೆದು ನನ್ನ ಹೆಂಡತಿಗೆ ಮುಟ್ಟಿಸುತ್ತಿದ್ದ. ಈ ನಡವ ನನಗ - ಇವನಾಪನ - ಆ ಪುಳಿಯೋಗರೆದ್ದು ಧ್ಯಾಸನS ಇಲ್ಲಿ... ಮರತSಹೋಗಿತ್ತು'' ಎಂದರು. ಆಗ ದತ್ತೂ ಮಧ್ಯೆ ಬಾಯಿ ಹಾಕಿ ''ನಾ ಹೇಳತೇನಿ - ಮುಂದಿನದನ್ನ - ನಾ ಹೇಳತೇನಿ. ಒಂದ ಸಲ ಕೆಟ್ಟ ಮೇಲೆ ನಾಯರಗೂ ಬುದ್ಧಿ ಬಂತು. ಅವ ದಿನಾಲೂ ನಿಮ್ಮ ಡಬ್ಬಿಯನ್ನು ಚರಂಡಿಯಲ್ಲಿ ಖಾಲಿ ಮಾಡಿ, ನಲ್ಲಿಯ ಕೆಳಗೆ ತೊಳೆದು, ಕೊಟ್ಟು ಬಿಡುತ್ತಿದ್ದ. ಒಮ್ಮೆ ಡಬ್ಬಿಯನ್ನು ತೆರೆದು ಇನ್ನೇನು ಚಲ್ಲಬೇಕು, ಅಷ್ಟರಲ್ಲಿ ವಾಜೀದ ಅಲೀ ನಾಯಿ ಬಂದು ಡಬ್ಬಿಗೆ ಬಾಯಿ ಹಾಕಿ - ಪುಳಿಯೋಗರೆ ತಿಂದು, ಎಲ್ಲೋ ತುಸು ದೂರ ಹೋಗಿ ಒಂದೆರಡು ಗಂಟೆ ಒದ್ದಾಡಿ, ಸತ್ತುಹೋಯಿತು. ನಾಯಿ ಪುಳಿಯೋಗರೆ ತಿಂದದ್ದಕ್ಕೂ ಸತ್ತದ್ದಕ್ಕೂ ಎರಡು ಗಂಟೆಗಳ ಅಂತರವಿದ್ದುದರಿಂದ ಮತ್ತು ಅದು ಬೇರೆಲ್ಲೋ ದೂರ ಹೋಗಿ ಸತ್ತುದರಿಂದ ನಾಯರನಿಗೂ ಕೂಡ ಪುಳಿಯೋಗರೆಗೂ ಶ್ವಾನಸಾವಿಗೂ ಇರುವ ಸಂಬಂಧ ತಿಳಿಯದೇ ಹೋಯಿತು. ಹೀಗಾಗಿ ಮುಂದೆ ಒಂದೆರಡು ನಾಯಿಗಳಿಗೆ ಅವನೇ ಪುಳಿಯೋಗರೆ ತಿನಿಸಿದ. ಕೆಲವೊಂದು ಸಲ ಪುಳಿಯೋಗರೆಯ ಉಗ್ರ ಹಳಸಿದ ವಾಸನೆಗೆ ಮೋಹಿತವಾಗಿ ನಾಯಿಗಳೇ ಸ್ವತಃ ಚರಂಡಿಗೆ ಬಾಯಿ ಹಾಕಿ ಸತ್ತಿರಲೂ ಸಾಕು... ಈಗ ಹೇಳಿ, ಕ್ವಿನಾಯಿನ್ ಶೋಗೆ ಸಿದ್ಧವಾಗುತ್ತಿದ್ದ ಈ ನಾಯಿಗಳ ಸಾವಿಗೆ ಕಾರಣರಾರು....'' ಎಂದು ದತ್ತೂ ತನ್ನ ಹೇಳಿಕೆ ಮುಗಿಸಿದ.

ಇದನ್ನೆಲ್ಲ ಕೇಳುತ್ತ, ಅಧೀನರಾಗಿ ಕಂಗೆಟ್ಟು, ತಪ್ಪಿತಸ್ಥರಂತೆ ನಿಂತಿದ್ದ ಭಾಬಾರವರು ಒಮ್ಮೆಲೆ ಕುಗ್ಗಿ ಬಗ್ಗಿ, ದಯನೀಯ ದನಿಯಲ್ಲಿ ದತ್ತೋಪಂತನ ಕೈ ಹಿಡಿದು, 'ದತ್ತೂ.... ದತ್ತೋಪಂತಾ.... ದತ್ತಣ್ಣಾ.... ದತ್ತಪ್ಪಾ. ಈಗ ನಂದು..... ನಂದಷ್ಟS ಅಲ್ಲ..... ಇಡೀ ನಮ್ಮ ಮನೆತನದ ಮಾನಾ..... ಮರ್ಯಾದಿ ಯಲ್ಲಾ ನಿನ್ನ ಕೈಯಾಗ ಐತಿ..... ಈ ಸುದ್ದಿ ಹೊರಗ ಬೀಳಧಂಗ ನೋಡಿಕೋ..... ಪುಳಿಯೋಗರೆ ಪರಿಮಳಾ ಹಬ್ಬಧಂಗ ನೋಡಿಕೋ..... ನಿನಗೆ ಬೇಡಿದ್ದ ಕೊಡ್ತೆನಂತ......

ದತ್ತಣ್ಣಾ..... ಕುಡಗೋಲು ಕುಂಬಳಕಾಯಿ ನಿನ್ನ ಕೈಯಾಗಿ ಕೊಟ್ಟೇನಿ, ಬೇಕಾರ ಉದ್ದರs ಕೊಯ್ಯಿ, - ಬ್ಯಾಡಾ ಅಡ್ಡs ಕೊಯ್ಯಿ.'' ಎನ್ನುತ್ತ ದೈನಾಸ ಬಟ್ಟಗೊಂಡರು.

ದತ್ತೋಪಂತ ಒಳ್ಳೇ ಗತ್ತಿನಿಂದ ''ಆಗಲಿ ಸರ್... ನೀವಿಷ್ಟು ಕೇಳಿಕೋತ ಇದ್ದೀರಿ ಅಂದಮೇಲೆ.... ಆಗಲಿ.... ನಾನೇನೂ ಯಾರಿಗೂ ಹೇಳೋದಿಲ್ಲ.... ಹಾಗೇ ನೀವು ಸ್ವಲ್ಪ ನಮ್ಮನ್ನ ನೋಡಿಕೊಳ್ರಿ ಸಾಕು'' ಎಂದ.

ಭಾಬಾ, ''ನಿನಗೇನು ಬೇಕು ಹೇಳೋ ಮ್ಹಾರಾಯಾ? ಕೇಳಿದ್ದು ಕೊಡತೀನಿ, ಪ್ರಮೋಶನ್ನs? ಟ್ರಾನ್ಸಫರ್s? ಸ್ಪೇಶಲ್ ಇನ್‌ಕ್ರಿಮೆಂಟ್s.....? ಏನ್ ಕೇಳ್ತೀ ಕೇಳು'' ಎಂದರು. ದತ್ತೂ, ''ನಿಮ್ಮ ಆಶೀರ್ವಾದ ಇರಲಿ ಸರ್'' ಎಂದು ಅತ್ಯಂತ ತೃಪ್ತಿಯಿಂದ ಬೀಗುತ್ತ ಜೇಮ್ಸ ಬಾಂಡ್‌ನ ಮಾದರಿಯಲ್ಲಿ ಮುಚ್ಚಿದ ಕಿಸಬಾಯಲ್ಲಿ, ಕುಲ್ಗಿತ ನಗು ನಗುತ್ತ, ಒಂದು ಕೈ ಪ್ಯಾಂಟಿನ ಜೇಬಿನಲ್ಲಿಳಿಬಿಟ್ಟು, ಇನ್ನೊಂದು ಕೈ ಬೆರಳಿನಲ್ಲಿ ಕೀಚೇನ್ ತಿರುವುತ್ತ ಭಾಲ್ಕೀ ಬಾಬೂ ಶೆಟ್ಟಿಯ ಕೇಬಿನ್‌ನ ಬಾಗಿಲು ತಳ್ಳಿಕೊಂಡು ಹೊರಗೆ ಬಂದ.


ಹೊರಗೆ ಸೆಕ್ರೆಟರಿ ಸ್ಥಾನದಲ್ಲಿ ಪ್ರತಿವಾದಿ ಭಯಂಕರ ಜಾಂಬುವಂತಿ ಕುಳಿತಿದ್ದಳು. ಅವಳು ದತ್ತೋಪಂತನನ್ನು ಕಂಡು ''ಏನೋ... ದತ್ತೂ ಮತ್ತೇನರ ಹೊಸ ಡೇಂಜರಸ್ ಕೆಲಸ ಕೊಟ್ಟಾರೇನು ಬಾಸು?'' ಎಂದು ಕೇಳಿದಳು.

ದತ್ತೋಪಂತ ಮಾತನಾಡದೇ ಇದ್ದಕ್ಕಿದ್ದಂತೆ ಹೊರಳಿ ಅಬೌಟ್ಟರ್ನ್ ಮಾಡಿ ಮತ್ತೆ ಭಾಬಾನ ಕೇಬಿನ್ನಿನ ಒಳಗೆ ಬಂದು,

''ಸರ್ ಆಗ ನೀವು..... ನನಗ ಏನು ಬೇಕು ಕೇಳು ಎಂದಿದ್ದಿರಲ್ಲ?'' ಎಂದ.

ಭಾಬಾ: ''ಹೌದು, ಕೇಳು'' ಎಂದರು ಉತ್ಸುಕರಾಗಿ.

ದತ್ತೂ: ''ಸರ್, ನಿಮ್ಮ ಈ ಸೆಕ್ರೆಟರೀನ್ನ ಚೇಂಜ ಮಾಡಿ ಇನ್ನಾರನಾದ್ರೂ ತಕ್ಕೊಳ್ಳಿ'' ಎಂದ.



ಮದುವೆ ಮನೆ ಮೋಜು

- ಕೃಷ್ಣ ಸುಬ್ಬರಾವ್

ನೂರು ಸುಳ್ಳು ಹೇಳಿ ಹೇಗಾದರೂ ಒಂದು ಮದುವೆ ಮಾಡಿಸ್ತಾರೆ ನಿಜ ಆದರೆ ಮದುವೆಮನೆಯಲ್ಲಿ ನಾವು ಪಡೆವ ಸಂತೋಷ, ಅನುಭವಿಸುವ ಸಂಭ್ರಮ, ಸಡಗರ ಎಂತಹ ಸುಳ್ಳುಗಳನ್ನು ಕ್ಷಮಿಸುವಂತಹದು. ಯಾರದೋ ಮನೆ ಮದುವೆ, ನಮ್ಮನೇಲಿ ಶುರುವಾಗುತ್ತೆ ಅವಾಂತರಗಳು ಎಷ್ಟಾದರೂ ನಾವು ಅಲ್ಲಿಯ ಆಹ್ವಾನಿತರಲ್ಲವೆ. ನಾವು ಮದುವೆ ಮನೆಗೆ ಹೋಗೋದು ಯಾಕೆ? ಬರಿ ಗಂಡು ಹೆಣ್ಣುಗಳನ್ನು ನೋಡಕ್ಕೆ ಅದ್ಕೊಂಡ್ರಾ? ಅಲ್ಲಿಗೆ ಬಂದವರೆಲ್ಲ ನಮ್ಮನ್ನು ನೋಡಕ್ಕೆ ಬರ್ತಾರೆ ಅಂತ. ಆದ್ದರಿಂದ ಚೆನ್ನಾಗಿ ಅದರಲ್ಲೂ ಬೇರೆಯವರಿಗಿಂತ ಜಾಸ್ತಿ ಚೆನ್ನಾಗಿ ಹೋಗಬೇಕು. ಅದಕ್ಕೆ ಬೇಕಾದ ತಯಾರಿ ಮಾಡಿಕೊಳ್ಳಬೇಕು ಹೊಸಬಟ್ಟೆ ಇಲ್ಲದಿದ್ದರೆ ಕಡೇಪಕ್ಷ ಅಕ್ಕಪಕ್ಕದ ಮನೆಯವರು ಅಥವಾ ನೆಂಟರ ಅಥವಾ ಸ್ನೇಹಿತೆಯರ ಸೀರೆಯನ್ನಾದರೂ ಎರವಲು ಪಡೆದು ಉಟ್ಟು ಹೋಗಬೇಕು ಎಂಬುದು ನಮ್ಮ ಹೆಂಗಸರ ಹಠ. ''ಅಲ್ವೆ, ಸೀರೆ ಯಾಕೆ ಬಾಡಿಗೆಗೆ ತೆಗೆದುಕೊಳ್ಳಬೇಕು?'' ಎಂದು ಅಕಸ್ಮಾತ್ ಗಂಡಂದಿರು ಗ್ರಹಚಾರ ತಪ್ಪಿ ಗೃಹಿಣಿಯನ್ನು ಕೆಣಕಿದರೆ ''ನಿಮಗಂತೂ ತೆಗೆದುಕೊಡಲು ಯೋಗ್ಯತೆಯಿಲ್ಲ ನಾವು ಬೇರೆ ಏರ್ಪಾಡು ಮಾಡಿಕೊಂಡರೆ ಅದಕ್ಕೂ ಆಕ್ಷೇಪಣೆ ಮಾಡೊಕ್ಕೆ ಬರ್ತೀರಾ, ನೋಡಿ ಹೆಂಗಸರ ವಿಷಯಕ್ಕೆಲ್ಲಾ ಬರಬೇಡಿ'' ಅಂತಾ ಬೈಯಿಸಿಕೊಳ್ಳುವುದು ಗ್ಯಾರಂಟಿ. ಆದ್ದರಿಂದ ಆ ವಿಷಯಕ್ಕೆಲ್ಲಾ ಬಾಯಿ ಹಾಕದಿರುವುದು ಕ್ಷೇಮ. ಸುಮ್ಮನೆ ನಮ್ಮನೇಲಿ ಯಾಕೆ ಇಲ್ಲದ ಟೆನ್‌ಷನ್. ಹೀಗೆ ನೂರಾರು ಸಂಸಾರಗಳಲ್ಲಿ ರಕ್ತದೊತ್ತಡ ತರುವ ಸಾಮರ್ಥ್ಯ ಮದುವೆ ಮನೆಗೆ ಇದೆ. ಒಂದೆರಡು ಘಂಟೆಗಳ ಕಾಲ ಎಲ್ಲಾ ಸಮಸ್ಯೆಗಳನ್ನು ಬದಿಗೊತ್ತಿ ಎಲ್ಲರೊಡನೆ ಬೆರೆತು ಕಡೇ ಪಕ್ಷ ಮೇಲುನೋಟಕ್ಕಾದರೂ ನಗುತ್ತಾ ಕಾಲ ಕಳೆಯುವ ಮದುವೆ ಮನೆ ಯಾರಿಗೆ ತಾನೆ ಇಷ್ಟವಾಗೊಲ್ಲ ಹೇಳಿ. ಒಂದೂರಿನಲ್ಲಿ ಒಬ್ಬ ಸಾಹುಕಾರ ಮುದುಕ ಇದ್ದನಂತೆ.... ಕ್ಷಮಿಸಿ, ಕಥೆ ನೀವು ಕಲ್ಪಿಸಿಕೊಂಡಷ್ಟು ದೊಡ್ಡದೇನಲ್ಲ. ಇದು ಕೇವಲ ಒಂದು ಚಿಕ್ಕ ದೃಷ್ಟಾಂತ..... ಆ ಮುದುಕ ಏನ್ ಮಾಡ್ತಾ ಇದ್ದನಂತೆ ಗೊತ್ತಾ? ಅವನು ಮದುವೆ ಸೀಸನ್‌ನಲ್ಲಿ ಯಾವುದಾದರೂ ಒಂದು ಮದುವೆಗೆ ಹೋಗಿ ಕಾಲ ಕಳೆದು ಬರುತ್ತಿದ್ದನಂತೆ. ಅವನ ಮಗ ಸೊಸೆ ಇಬ್ಬರು ಒಳ್ಳೆ ಕೆಲ್ಸದಲ್ಲಿದ್ದರಂತೆ. ಮನೆಯಲ್ಲಿ ನೆಮ್ಮದಿಯೂ ಇತ್ತಂತೆ. ''ಹೀಗೆ ಕರೆಯದೆ ಎಲ್ಲಾ ಮದ್ವೆ ಮನೆಗೂ ಹೋಗಿ ಊಟ ಮಾಡುವ ಚಪಲ ಯಾಕೆ? ನಾವೇನು ಕಮ್ಮಿ ಮಾಡಿದ್ದೀವಿ ನಿಮಗೆ, ಊಟ ಹಾಕಲ್ಲವೆ ಅಥವಾ ನಮ್ಮನೆ ಅಡಿಗೆ ಇಷ್ಟವಿಲ್ಲವೆ?' ನಮ್ಮನೆ ಮಾನ ಹರಾಜು ಮಾಡ್ತೀರಾ?'' .... ಹೀಗೆ ಮಗ ಸೊಸೆ ತರಾಟೆಗೆ ತೆಗೆದುಕೊಂಡರಂತೆ ಮುದುಕನನ್ನು. ತನ್ನ ಅಪ್ಪನನ್ನು ಒಬ್ಬ ಸೈಕ್ರಿಯಾಟಿಸ್ಟ್ ಹತ್ತಿರ ಕರೆದುಕೊಂಡು ಹೋಗುವ ತೀರ್ಮಾನವನ್ನು ಮಗ ತೆಗೆದುಕೊಂಡನಂತೆ. ಆಗ

ಮುದುಕ ಹೇಳಿದನಂತೆ ''ನೀವು ತಿಳಿದುಕೊಂಡಂತೆ ನನಗೆ ಯಾವ ಹುಚ್ಚು ಹಿಡಿದಿಲ್ಲ ಅಥವಾ ಊಟದ ಚಪಲದಿಂದ ಮದ್ವೆಮನೆಗೆ ಹೋಗೊಲ್ಲ. ನಾನು ಮದುವೆಮನೇಲಿ ಊಟ ಮಾಡೋಲ್ಲ. ನಾನು ಅಲ್ಲಿಗೆ ಹೋಗುವುದು ಅಲ್ಲಿಯ ವಾತಾವರಣ, ಸಡಗರ, ಸಂತೋಷ ನೋಡುತ್ತಾ, ನಾಲ್ಕಾರು ಜನಾನ ಮಾತನಾಡಿಸುತ್ತ ಅಲ್ಲಿಯ ಮೋಜನ್ನ ಸವಿಯುತ್ತ, ಜೀವನದಲ್ಲಿ ಆಸಕ್ತಿ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುತ್ತೇನೆ ಅಷ್ಟೆ''

ಆ ಮುದುಕನ ಕಥೆ ಮುಂದೇನಾಯಿತು ಎಂಬುದು ಮುಖ್ಯವಲ್ಲ. ಅವನ ಮಾತು ಹಾಗೂ ದೃಷ್ಟಿಕೋನ ಮುಖ್ಯ. ಅದು ಸತ್ಯ. ಜೀವನದಲ್ಲಿ ಉತ್ಸಾಹವೇನಾದರೂ ಕಮ್ಮಿಯಾಗುತ್ತಿದೆ ಅನ್ನಿಸಿದರೆ ಯಾವುದಾದರೂ ಮದ್ವೆ ಮನೆಗೆ ಬನ್ನಿ ಅಲ್ಲಿಯ ಮೋಜನ್ನು ಆನಂದಿಸಿ ಅನುಭವಿಸಿ. ಬರೀ ಮಾತಿನಲ್ಲಿ ವರ್ಣಿಸಲು ಸಾಧ್ಯವಿಲ್ಲ.

ನೀವುಗಳು ಮದ್ವೆಮನೆ ಚಪ್ಪರದ ಹತ್ತಿರ ಹೋಗುತ್ತಿದ್ದಂತೆ ಕೆಲವರು ಬಂದು ನಿಮ್ಮನ್ನು ಆತ್ಮೀಯತೆಯಿಂದ ಕೈ ಹಿಡಿದು ಒಳಗೆ ಕರೆದುಕೊಂಡು ಉಪಚರಿಸುತ್ತಾರೆ. ಈ ರೀತಿ ಸ್ವಾಗತ ನಿಮಗೆ ಬೇಕಿದ್ದರೆ ನೀವು ಎಲ್ಲರಿಗಿಂತ ಮುಂಚೆ ಅಂದ್ರೆ ಮುಹೂರ್ತಕ್ಕೆ ಬಹಳ ಮುಂಚೆ ಮದ್ವೆಮನೆಗೆ ಹೋಗಬೇಕು. ಇಲ್ಲದಿದ್ದರೆ ನೀವು ನಿಮ್ಮನ್ನು ಕರೆದವರನ್ನು ಹುಡುಕಬೇಕು. ಹೆಚ್ಚು ಜನ ಪರಿಚಯವಿಲ್ಲದವರ ಪಜೀತಿ ಬಹಳ ಚೆನ್ನಾಗಿರುತ್ತದೆ. ನೋಡುವುದಕ್ಕೆ ಜಿರಾಫೆ ಕತ್ತನ್ನು ಮಾಡಿ ಹುಡುಕುತ್ತಿರುತ್ತಾರೆ. ಹಸಮಣೆ ಮೇಲೆ ಕುಳಿತಿರುವವರು ಮಾತ್ರ ಪರಿಚಯವಿದ್ದರೆ ನೀವು ಯಾರಾದರೂ ಬಂದು ಗುರುತಿಸುತ್ತಾರಾ? ಎಂದು ಕಾದು ಕುಳಿತುಕೊಳ್ಳಬೇಕಾಗುತ್ತೆ. ಅಂತಹ ಸಮಯದಲ್ಲಿ ಬಲವಂತದಿಂದ ಕರೆದುಕೊಂಡು ಬಂದ ನಿಮ್ಮ ಮಗಳು ''ಅದಕ್ಕೆ ಅಪ್ಪ ನಾನು ಬರೊಲ್ಲ ಅಂದಿದ್ದು, ಇಲ್ನೋಡು ಯಾರು ನಮ್ಮನ್ನು ಗುರುತಿಸಿಲ್ಲ ಎಂದು ರೇಗುತ್ತಿರುತ್ತಾಳೆ ಅಲ್ವೆ. ಊಟಕ್ಕೆ ತಿಂಡಿಗಂತೂ ಯಾರಾದರೂ ಬಂದು ಬಲವಂತಪಡಿಸುತ್ತಲೇ ಇರುತ್ತಾರೆ. ಆದರೆ ವಿಪರ್ಯಾಸವೆಂದರೆ ನಮಗೆ ಹಸಿವಿಲ್ಲದಾಗ ಬೇಗ ಊಟಕ್ಕೆ ಬಲವಂತ, ನಮಗೆ ಹಸಿವಿದ್ದಾಗ ಅರ್ಜೆಂಟಾಗಿದ್ದಾಗ ನಾವೇ ನುಗ್ಗಾಡಿ ಊಟಕ್ಕೆ ಹೋಗಿ ಕುಳಿತುಕೊಳ್ಳಬೇಕು. ಇದಕ್ಕೆ ಪರಿಹಾರವೆಂದರೆ ಮುಹೂರ್ತದ ಟೈಂ ಹಾಗೂ ಅಲ್ಲಿ ಬರುವ ಜನಸಂಖ್ಯೆ ಸ್ವಲ್ಪ ಸ್ಟಡಿ ಮಾಡಬೇಕು. ಇಲ್ಲಿ ಬರಿ ಅನುಭವ ಇದ್ದರೆ ಸಾಲದು. ಸ್ವಲ್ಪ ಜಾಣತನ ಇರಬೇಕು. ಕೆಲವರು ಇರ್ತಾರೆ ನೋಡಿ ಮದುವೆಮನೇಲಿ ತಮ್ಮ ಯೋಗಕ್ಷೇಮ ಚೆನ್ನಾಗಿ ನೋಡಿಕೊಳ್ತಾರೆ. ಅವರು ತನ್ನ ಜೊತೆ ಯಾರನ್ನೂ ಕಾಯೊಲ್ಲ. ಅವರೊಬ್ಬರೆ ಊಟಕ್ಕೆ ಹೋಗ್ತಾರೆ. ಅಡಿಗೆಯವರ ಹತ್ತಿರ ಗೆಳೆತನ ಮಾಡ್ಕೊತಾರೆ. ಆಗಾಗ್ಗೆ ಕಾಫಿ ಸೇವನೆ ಮಾಡ್ತಾರೆ. ಕಾಫಿ ಕುಡಿಯುವ ಅಭ್ಯಾಸವಿಲ್ಲದಿದ್ದರೆ ಯಾವುದಾದರೂ ಮಗು ಹೆಸರಿನಲ್ಲಿ ಹಾಲು ತೆಗೆದುಕೊಂಡು ಕುಡಿತಾರೆ. ಎಷ್ಟಾದರೂ ಮದ್ವೆ ಮನೇಲಿ ನೂರು ಸುಳ್ಳು ಹೇಳಬಹುದಲ್ಲವೆ. ಅದರ

ಜವಾಬ್ದಾರಿ (ಸುಳ್ಳು ಹೇಳುವ) ಅವರ ತಲೆ ಮೇಲೂ ಇರುತ್ತದೆ.

ಮದ್ವೆಮನೆ ಸ್ವಾರಸ್ಯವೆಂದ್ರೆ ಅಲ್ಲಿ ಕಟ್ಟುವ ಬಾಜಿಗಳು ಅಲ್ಲಿ ದೂರದಲ್ಲಿ ಕಂಬವರಗಿ ನಿಂತಿರುವ ಹುಡುಗಿ ಇಂತಹವರ ಮಗಳು ಎಂದು ಒಬ್ಬ ಅಂದರೆ ಇನ್ನೊಬ್ಬ ಖಂಡಿತ ಇಲ್ಲ ಅನ್ನುತ್ತಾನೆ. ಅದಕ್ಕೆ ಅವರು ಕಟ್ಟುವ ಪಂದ್ಯ ಗೆದ್ದವನಿಗೆ ಮೂರು ಚಿರೋಟಿ. ಮದುವೆಮನೆ ಖರ್ಚು ಯಾರದ್ದೊ ಆದರೆ ಬಾಜಿ ಕಟ್ಟುವ ಹಕ್ಕು ನಮ್ಮದು. ಈ ರೀತಿ ಬಾಜಿಯಿಂದಾಗಿ ಅನೇಕ ಸಲ ಭಕ್ಷಗಳು ಎರಡನೆ ಹಾಗೂ ಮೂರನೆ ಪಂಕ್ತಿಗಳಿಗೆ ಲಭ್ಯವಾಗುವುದಿಲ್ಲ.

ಮದ್ವೆಮನೇಲಿ ಕರೆಂಟ್ ಹೋದಾಗ .... (ಇದು ಸ್ವಲ್ಪ ಔಟ್‌ಡೇಟ್ ಅನ್ನಬಹುದು ಎಲ್ಲಾ ಕಡೆ ಜನರೇಟರ್ ಇರುತ್ತೆ ಈಗ. ಆದರೂ ಜನರೇಟರ್ ಲೈಟ್ ಬರುವಷ್ಟರಲ್ಲಿ ಅನ್ನೋಣ) ಅನೇಕ ಅವಸ್ಥೆಗಳಾಗುತ್ತವೆ. ಕೆಲವು ವರ್ಷದ ಹಿಂದೆ ನನ್ನ ನಾದಿನಿ ಮದ್ವೆ ಸಂದರ್ಭದಲ್ಲಿ ಕರೆಂಟ್ ಹೋದ ಘಳಿಗೆ, ಮದ್ವೆಗೆ ಬಂದ ನೆಂಟರಿಷ್ಟರಿಗೆ ಬೀಳ್ಕೊಡುಗೆ ಸಮಯದಲ್ಲಿ ಏನಾದರೂ ಉಡುಗೊರೆ ಕೊಡಬೇಕು. ಒಬ್ಬೊಬ್ಬರನ್ನು ಕರೆದು ಕೊಡಬೇಕು ಒಂದು ಸಣ್ಣ ರೂಂನಲ್ಲಿ. ಅದಕ್ಕೆ ನನ್ನಕ್ಕನೇ ಇನ್‌ಚಾರ್ಜ್. ಅವ್ರ ಹತ್ತಿರ ಯಾರು ಯಾರಿಗೆ ಏನೇನು ಎಂಬ ಲಿಸ್ಟ್ ಕೂಡ ಇತ್ತು. ಸ್ಟೀಲ್ ಪ್ಲೇಟೊ ಅಥವಾ ಇನ್ನೇನೊ ಕೊಡಬೇಕು. ಒಂದು ಕ್ಷಣ ಕರೆಂಟ್ ಹೋಗಿತ್ತು. ನೆಂಟರಿಷ್ಟರ ಕೈಗೆ ಗಿಫ್ಟ್ ಬಂದಿತು. ಕರೆಂಟ್ ತಕ್ಷಣ ಬಂದಾಗ ಎಲ್ಲಾ ಜೋರಾಗಿ ನಕ್ಕಿದ್ದೆ ನಕ್ಕಿದ್ದು. ಅವರ ಕೈಗೆ ಅಕ್ಕಿ ಡಬ್ಬದ ಮುಚ್ಚಳ ಬಂದಿತ್ತು! ''ಅಲ್ರಿ, ಈ ಗಿಫ್ಟ್ ಚೆನ್ನಾಗಿದೆ ಆದರೆ ಇದರ ಜೊತೆಗೆ ಆ ಅಕ್ಕಿ ಡಬ್ಬವೂ ಬಂದರೆ ಕಡೇ ಪಕ್ಷ ಈ ತಿಂಗಳ ಪೂರ್ತಿ ನಿಮ್ಮ ಹೆಸರು ಹೇಳಿಕೊಂಡು ಊಟ ಮಾಡಬಹುದಿತ್ತು'' ಎಂದರು. ಯಾವ ಕುಚೇಷ್ಟೆಯೊ ಏನೊ ಅಥವಾ ಸ್ಟೀಲ್ ಪ್ಲೇಟಿನ ಆಕಾರದಲ್ಲಿದ್ದ ಡಬ್ಬದ ಮುಚ್ಚಳವನ್ನು ಕತ್ತಲಲ್ಲಿ ಕೈಗೆ ಎತ್ತಿಕೊಂಡಿರಬೇಕು.

ಒಂದು ಮದ್ವೇಲಿ ಗಂಡು ಪಾಪ ತಾನು ಕೈ ಹಿಡಿದ ಹೆಣ್ಣಿನ ಕುತ್ತಿಗೆಗೆ ತಾಳಿ ಕಟ್ಟಲು ಬಹಳ ಕಷ್ಟಪಡುತ್ತಿದ್ದ ಸುತ್ತಮುತ್ತಲು ಇದ್ದವರು ''ಡೊಂಟ್ ಬಿ ನರವಸ್ ಐಸೆ ಎಂದು ಛೇಡಿಸುತ್ತಿದ್ದರು. ಇನ್ನೊಬ್ಬರು ''ಅಭ್ಯಾಸವಿಲ್ಲ ಪಾಪ First time ನೋಡಿ ಸ್ವಲ್ಪ ಕಷ್ಟವಾಗುತ್ತೆ'' ಎಂದರು!

ಭೂಮಿಯ ಮೇಲೆ ಬಂದ್ಮೇಲೆ ಒಂದಲ್ಲ ಒಂದು ದಿನ ಭೂಮದ ಊಟವನ್ನು ಎದುರಿಸಲೇಬೇಕು. ಎಲ್ಲಾ ಐಟಂ ಗಳು ಎಲ್ಲಾ ಜನಗಳ ಕಣ್ಣು ಅಲ್ಲೇ ಕೇಂದ್ರೀಕೃತ. ಒಬ್ಬರಿಗೊಬ್ಬರು ತಿನ್ನಿಸುವಂತೆ ಬಲವಂತ ಮಾಡುವ (ಚೆಳ್ಳೆಹಣ್ಣು ತಿನ್ನಿಸುತ್ತಾ) ಪರಿಶ್ರಮ ಇದ್ದೇ ಇರುತ್ತೆ. ಅದರ ಜೊತೆಗೆ ಕೆಲವು ಸಂಪ್ರದಾಯದ ಪ್ರಕಾರ ಅತ್ತೆ ಅಳಿಯನ ಕೈ ಹಿಡಿಯಬೇಕು ಮಾವನ ಹೆಸರು ಹೇಳುವ ತನಕ ಅಳಿಯ ಕೈ ಬಿಡೋಲ್ಲ. ಸ್ಟ್ರಾಂಗ್ ಅಳಿಯ ವೀಕ್ ಅತ್ತೆ ಒಂದು ಸಮಾಗಮದಲ್ಲಿ ಅಳಿಯ ಬಿಗಿಯಾಗಿ ಅತ್ತೆ ಕೈ ಹಿಡಿದಾಗ ಅತ್ತೆ ಬ್ಯಾಲೆನ್ಸ್ ತಪ್ಪಿ ಭೂಮದ ಎಲೆಯ ಮೇಲೆ ಕಾಲಿಟ್ಟುಕೊಂಡು

ಅಳಿಯನ ಕಡೆಗೆ ಬಂದುಬಿಟ್ಟರು!

ಗಂಡು ಹೆಣ್ಣು ಏಕೆ ಹೀಗೆ ಊಟ್ ಬೈಸ್ ಹೊಡೀತಾರೆ ಅಂತ ಒಂದು ಮಗು ಆರತಕ್ಷತೆ ಸಮಯದಲ್ಲಿ ಕೇಳಿತಂತೆ. ಮಾಡಬಾರದು ತಪ್ಪು ಮಾಡದಿದ್ದರೆ ಆಗಬಾರದ ಶಿಕ್ಷೆಯಾಗುತ್ತೆ ಅಂತ ಆ ಮಗೂಗೆ ಏನ್ ಗೊತ್ತು! ಪಾಪ ಆ ನವದಂಪತಿಗಳ ಪಾಡು ಏನ್ ಹೇಳ್ತೀರಾ! ಅವರು ಕೈ ಮುಗಿದರೆ ಬಂದ ಜನ ಕೈ ಮುಂದೆ ನೀಡ್ತಾರೆ. ಷೇಕ್‌ಹ್ಯಾಂಡ್ ಮಾಡಲು ಮುಂದಾದರೆ ಕೈ ಮುಗಿಯುತ್ತಾರೆ. ಅವರನ್ನ ಜನ ಅರ್ಥ ಮಾಡಿಕೊಳ್ಳಲ್ವೋ ಅಥವಾ ಅವರು ಜನಾನ ಅರ್ಥ ಮಾಡಿಕೊಳ್ಳಲ್ವೋ ತಿಳಿಯೊಲ್ಲ. ಕಂಡಕ್ಟರ್ ಬಂದ್ಮೇಲೆ ಜೋಬಿಗೆ ಕೈ ಹಾಕುವ ನಮ್ಮ ಜನ ಅನೇಕರು ತಾವು ಕೊಡಬೇಕಾದ ಕವರ್‌ಗಾಗಿ ನವದಂಪತಿಗಳ ಮುಂದೆ ತಡಕಾಡುತ್ತಾರೆ. ಎಡಿಯೋದವನು ಈ ಕಡೆ ಆ ಕಡೆ ಹೋಗಿ ಅಂತಿರ್‍ತಾನೆ. ಕ್ಯೂನಲ್ಲಿ ಬರುವವರು ಕೆಟ್ಟ ಮುಖ ಮಾಡಿ ''ಈ ಶನಿ ತೊಲಗಬಾರದೆ'' ಎಂದು ಶಪಿಸುತ್ತಿರುತ್ತಾರೆ ಈ ಗಲಾಟೆಲಿ ಕೆಲವರು ತಾವು ಜೋಬಿನಲ್ಲಿಟ್ಟುಕೊಂಡಿದ್ದ Extra Cover (ಖಾಲಿ) ಕೊಟ್ಟು ಬಂದಿರುತ್ತಾರೆ.

ಮದುವೆ ಮನೆಗಳಲ್ಲಿ ಕೆಲವು ಜನ ಕಾಣಿಸಿಕೊಳ್ಳುವುದಿಲ್ಲ ಅವರನ್ನು ಊಟಕ್ಕೆ ಬಲವಂತಮಾಡಿ ಕೂಡಿಸಬೇಕು ಅವರು ಯಾವಾಗಲೂ ಬಿಸಿಯಾಗುತ್ತಾರೆ. ಗೊತ್ತಾಯಿತಲ್ಲ ಅವರ್‍ಯಾರು ಅಂತ. ಅವರು ಎಲೆ ಹಾಕುವ ಜನ ಅಂದ್ರೆ ಇಸ್ಪೀಟ್ ಜನ. ಒಂದು ಕೋಣೆ ಸೇರಿರುತ್ತಾರೆ. ಆ ರೂಮಿಗೆ ಕಾಫಿ ತಿಂಡಿಗಳು ಹೋಗುತ್ತಲೆ ಇರುತ್ತದೆ. ರಾತ್ರಿ ಪಾಳಿಯಲ್ಲಿ ಅಡುಗೆಯವರು ಆಟಕ್ಕೆ ಇಳಿಯುತ್ತಾರೆ. ಆದ್ದರಿಂದ ಮಧ್ಯರಾತ್ರಿಯಲ್ಲೂ ಕಾಫಿ ಡೋಸ್ ಗ್ಯಾರಂಟಿ. ಮದುವೆ ಮನೆ ಆಗುಹೋಗುಗಳ ಪರಿವೆಯೆ ಇರೋದಿಲ್ಲ ಅವರ ಲಾಭ-ನಷ್ಟದ ಚಿಂತೆಯೇ ಅವರಿಗೆ.

ಮದ್ವೆಯಲ್ಲಿ ಮಕ್ಕಳು ಬಹಳ ಜೀವಂತ ಪಾತ್ರಗಳು ಅವರ ಗಲಾಟೆ, ಬಲೂನ್ ಪೀಪಿ, ಚಾಕಲೇಟ್ ಮೇಳಗಳು ನಡೆಯುತ್ತಿರುತ್ತವೆ. ಅದರ ಖರ್ಚನ್ನು ನಿಭಾಯಿಸಲು ಯಾರಾದರೂ ಒಳ್ಳೆ ಅಂಕಲ್‌ಗಳು ಇದ್ದೇ ಇರುತ್ತಾರೆ. ಕೆಲವು ಮಕ್ಕಳ ಬುದ್ಧಿವಂತಿಕೆಯ ಪರೀಕ್ಷೆಗಳು ನಡೆಯುತ್ತಲೆ ಇರುತ್ತವೆ. ಒಂದು ಮದುವೆಯಲ್ಲಿ ದೊಡ್ಡ ಬಾಳೆಲೆ ಬೇಕೆಂದು ಹಠ ಹಿಡಿದ ಮಗು ಊಟ ಮಾಡಲು ಹೋದಾಗ ಅದರ ಪುಟ್ಟ ಕೈಗೆ ಎಲೆಯ ತುದಿಯಲ್ಲಿದ್ದ ಕೋಸಂಬರಿ ಸಿಗಲಿಲ್ಲ ಎದುರಿಗೆ ಕುಳಿತ ನಾನು ಆ ಮಗು ಏನು ಮಾಡುತ್ತದೆ ಎಂದು ನೋಡುತ್ತಿದ್ದೆ. ಆ ಮಗು ಎದ್ದಿತು. ಸರಿ ಊಟ ಬಿಟ್ಟು ಹೊರಟು ಹೋಯಿತಲ್ಲ ಎಂದುಕೊಂಡೆ ಅಷ್ಟರಲ್ಲಿ ಆ ಮಗು ಸಾಲನ್ನು ಸುತ್ತಿಕೊಂಡು ಎದುರಿಗೆ ಬಂದು ತನ್ನ ಎಲೆಯ ಇನ್ನೊಂದು ತುದಿಯಲ್ಲಿದ್ದ ಪಲ್ಯ ಕೋಸಂಬರಿ ಖಾಲಿಮಾಡತೊಡಗಿತು. ಅದನ್ನು ನೋಡಿ ಸುತ್ತಲಿನವರೆಲ್ಲಾ ಜೋರಾಗಿ ನಕ್ಕರು. ಆ ಮಗು ತಬ್ಬಿಬ್ಬಾಯಿತು. ಮಗುವಿನ ಬುದ್ಧಿವಂತಿಕೆ ಹಾಗೂ ಸ್ವತಂತ್ರ ಪ್ರವೃತ್ತಿಗಾಗಿ ಚಪ್ಪಾಳೆ ಹೊಡೆಯೋಣವೆಂದರೆ ಅದು ಅಸಾಧ್ಯ. ಒಂದು ಕೈ

ಎಂಜಲು!

ಮದ್ವೆಮನೇಲಿ ಎಷ್ಟೇ ಬೂಟಾಟಿಕೆ, ಸುಳ್ಳು ಹೇಳಿ ಕಾಲಕಳೆದರೂ ಕೆಲವು ಅಚಾತುರ್ಯದಿಂದ ಸತ್ಯಗಳು ತಾವಾಗೇ ಹೊರಬೀಳುತ್ತಿರುತ್ತವೆ. ಬಂದವರಿಗೆಲ್ಲಾ ಉಡುಗೊರೆ ಕೊಡುವಾಗ (ಎಲ್ಲರೂ ಕೂಡ ಅವರವರ ಶಿಸ್ತಿಗೆ ಅನುಸಾರವಾಗಿ (ಜಯ) ಲಲಿತವಾಗೇ ಇರುತ್ತಾರೆ) ಸಾಂಪ್ರದಾಯಕವಾಗಿ ''ಇದೆಲ್ಲಾ ನಮಗೆಲ್ಲಾ ಏಕೆ?'' ಎಂದರಂತೆ ಅದಕ್ಕೆ ಹುಡುಗಿ ಚಿಕ್ಕಮ್ಮ ''ನಮಗೆ ಇದೇ ಹೆಚ್ಚು'' ಎನ್ನಬೇಕೆ? ಅವರು ಅನ್ನಬೇಕಾಗಿದ್ದು ''ಇವೆಲ್ಲಾ ಏನ್ ಮಹಾ?'' ಅದಕ್ಕೆ ಬದಲಾಗಿ ಅಪ್ಪಿತಪ್ಪಿ ನಮಗಿದೆ ಹೆಚ್ಚು ಅಂದಿದ್ದರೆ 'ನಮಗೆ' ಅನ್ನೋ ಪದಕ್ಕೆ 'ನಿಮಗೆ' ಎಂದಿದ್ದರೆ ಇನ್ನಷ್ಟು ಅಪಾಯಕಾರಿ ಆಗುತ್ತಿತ್ತು. ಹೀಗೆ ಪ್ರತಿಯೊಂದು ಸ್ಥರದಲ್ಲೂ ಅವಾಂತರಗಳು ಇದ್ದೇ ಇರುತ್ತೆ.

ಎಡವಟ್ಟುಗಳ ಸರಮಾಲೆಯೆ ಮದುವೆ ಮನೆ. ಮೋಜಿನ ಆಧಾರಸ್ತಂಭ. ಆಶೀರ್ವಾದಕ್ಕೆ ಮಂತ್ರಾಕ್ಷತೆ ಅರ್ಜೆಂಟಾಗಿ ಬೇಕಾಗಿರುವಾಗ ಅದನ್ನು ಹಿಡಿದ ವ್ಯಕ್ತಿ ಎಲ್ಲೋ ಮಾಯ ಹುಡುಗಿ ಕರೆದುಕೊಂಡು ಬರುವ ಸೋದರಮಾವ ಲಗ್ನದ ಮುಹೂರ್ತಕ್ಕೆ ಸರಿಯಾಗಿ ಜೀರಿಗೆ ಬೆಲ್ಲದೊಡನೆ ಗಾಯಬ್, ಕ್ರಿಕೆಟ್ ಸೀಸನ್ ಆಗಿದ್ದರಂತೂ ಅದರ ರಂಪವೇ ಬೇರೆ. ಸ್ಕೋರ್ ಕೇಳಕ್ಕೆ ಎಲ್ಲೋ ಹೋಗಿರುತ್ತಾರೆ. ಆಗ ಮಂತ್ರಾಕ್ಷತೆ ತರಲು ಇನ್ಯಾರಿಗಾದರೂ ಹೇಳಿದರೆ ಅವರು ಅವಸರದಿಂದ ಅಕ್ಕಿಕಾಳು ತರುತ್ತಾರೆ. ಕೆಲವು ವೇಳೆ ಊರಿಗೆ ಮುಂಚೆ ಮಂತ್ರಾಕ್ಷತೆ ಕೈಗೆ ಕೊಟ್ಟಿರುತ್ತಾರೆ. ಆಶೀರ್ವಾದ ಮಾಡುವ ಸಮಯದಲ್ಲಿ ಕೈಯಲ್ಲಿ ಒಂದು ಕಾಳು ಉಳಿದಿರುವುದಿಲ್ಲ ಅದೆಲ್ಲಾ ಒಂದೊಂದಾಗಿ ಭೂಮಿತಾಯಿಯ ಮೇಲೆ ಬಿದ್ದಿರುತ್ತದೆ. ಬರಿ ಕೈಯಿಂದ ಆಶೀರ್ವಾದದ ಆಕ್ಷನ್ ಮಾಡುತ್ತಾರೆ ಜನ.

ಓಲಗದವರು ಮದ್ವೆಮನೆಲಿ ಒಂದು ಹಾಡನ್ನೂ ಪೂರ್ತಿ ಬಾರಿಸಿದಂತೆ ಅನೇಕರು ಜವಾಬ್ದಾರಿ ಹೊರುತ್ತಾರೆ. ಅಪೂರ್ಣತೆಯ ಸಂಕೇತವೇ ಮದುವೆ. ಈ ಕೋಪಾನ ಅವರು 'ಗೃಹಪ್ರವೇಶ'ದ ಆಟದಲ್ಲಿ ತೀರಿಸಿಕೊಳ್ಳುತ್ತಾರೆ. ತಮಗೆ ಸಾಕಷ್ಟು ಸಂಭಾವನೆ ಗಿಟ್ಟುವವರಿಗೂ ಗಟ್ಟಿಯಾಗಿ ಬಾರಿಸುತ್ತಲೇ ಇರುತ್ತಾರೆ. ಕಡೆಗೆ ಪೂಜಾರರ ಮಾತಿಗೆ ಬೆಲೆಕೊಟ್ಟು ನಿಶಬ್ದ ಮನೆ ಮಾಡುತ್ತೆ.

ಮದುವೆ ಛತ್ರದಲ್ಲಾಗಲಿ ಮಠದಲ್ಲಾಗಲಿ, ಹೋಟೆಲ್‌ನಲ್ಲಾಗಲಿ ಅದು ಮದುವೆಮನೆಯೆಂದೇ ಕರೆಯಲ್ಪಡುತ್ತದೆ ಕಾರಣ 'ಮದುವೆಮನೆ' ಎನ್ನುವುದು ಒಂದೇ ಪದ ಅನೇಕ ದಿಕ್ಕುಗಳಿಂದ ಬಂದು ಕರೆಯುವ, ಎಲ್ಲವನ್ನು ಮರೆಯುವ, ಜೀವನದ ರಸಗಳಿಗೆಗಳನ್ನು ಪಡೆಯುವ ಒಂದು ತಂಗುದಾಣ ಅದು. ಖಾಲಿ ಜಾಗಕ್ಕೆ ಜೀವ ತುಂಬಿ ಸಮಯವಾದ ಮೇಲೆ ಖಾಲಿ ಮಾಡಿ ನಿರ್ಜೀವ ಗೋಡೆಗಳನ್ನು ಬಿಟ್ಟು ಬಿಡುತ್ತೇವೆ ನಾವೆಲ್ಲ.

(ಆಕಾಶವಾಣಿ ಕೃಪೆ)

ಮತ್ತೆ (ಮತ್ತ) ಚುನಾವಣೆ

- ಶ್ರೀಮತಿ ಅರುಣಾ ಆರ್. ಕಾರಂತ

ದಿನದಿನ ಚುನಾವಣೆ ಬರುತಿರಬೇಕು
ಊರಲಿ ಗದ್ದಲ ತುಂಬಿರಬೇಕು
ಜನನಾಯಕರು ಬರುತಿರಬೇಕು
ಆಶ್ವಾಸನೆಗಳ ಸುರಿಸಲುಬೇಕು

ಬಗೆ ಬಗೆಯ ಬ್ಯಾನರು ಕಟ್ಟಿರಬೇಕು
ಜಾತ್ರೆಯ ಸಡಗರ ಇರುತಿರಬೇಕು
ಮೈಕುಗಳಾರ್ಭಟ ದಿನವಿರಬೇಕು
ಭರಭರ ಕಾರುಗಳೋಡ್ತಿರಬೇಕು

ಹಳ್ಳಿಗೆ ಹೆಂಡದ ಹೊಳೆ ಬರಬೇಕು
ಜತೆಯಲಿ ಹಣವೂ ಹರಿತಿರಬೇಕು
ಬಡವನ ಗೋಳು ಮರೆಯಲುಬೇಕು
ಕುಡಿತದ ಸುಖವು ಸ್ಥಿರವಿರಬೇಕು

ರೇಡಿಯೋ ಸುದ್ದಿಯ ಕಿರುಚಲು ಬೇಕು
ಕದನ ಕುತೂಹಲ ಕೇಳಲು ಬೇಕು
ಗೆದ್ದವರರಳಿದ ಕೊಬ್ಬಿನ ನಗೆಯೊಡೆ
ಸೋತವನ ಹುಳ್ಳನೆ ಮುಖ ಕಾಣಬೇಕು

ದಿಲ್ಲಿಯ ರಣ-ಕಣ ನೋಡಲು ಬೇಕು
ಕುರ್ಚಿ, ಮೈಕುಗಳು ಹಾರಲು ಬೇಕು
ಜನತೆಯ ಸರಕಾರ ಬಂದಿರಬೇಕು
ಮರುದಿನವದುವೆ ಉರುಳಲುಬೇಕು

ಮತ್ತೆ ಚುನಾವಣೆ ಬರುತಿರಬೇಕು
ಟೋಪಿಯಾಟವು ನಡೆಯಲು ಬೇಕು
ದೊಂಬರ ಕುಣಿತವು ನಡೆದಿರಬೇಕು
ಜನರಾ ನಾಲಿಗೆ ದಣಿದಿರಬೇಕು

With Best Compliments From:

Smt & Sri. K.R. Kshetrapalaiah
Bangalore

With Best Compliments From:

FINE CRAFTS


C- 349, First stage
Peenya Industrial Estate
Bangalore - 560 058
Phone - 8395235

With Best Compliments from

Ravi Graphics

Quality Offset Printers

62, 4th Cross, SSI Area
Rajajinagar, Bangalore 560 010
✆ 335 5536, 338 7163



ಉತ್ಸವ್ ವಾಚುಗಳು... ತುಂಬಾ ವಿಶೇಷ ಸಂದರ್ಭಗಳಿಗಾಗಿ ಪೂರ್ತಿಯಾಗಿ ಅಲಂಕೃತವಾಗಿವೆ. ಸ್ತ್ರೀ ಲಾವಣ್ಯಕ್ಕೆ ಒಪ್ಪುವಂತಹ ವಿನ್ಯಾಸಗಳಿಂದ ಕಂಗೊಳಿಸುವ ಡಯಲ್‌ಗಳೊಂದಿಗೆ. ಇವು ನೋಡಲು ನಿಜವಾಗಿಯೂ ಅತಿ ಸುಂದರ.

ಈ ಕಲಾಕೃತಿಗಳು 5 ಮೈಕ್ರಾನ್ ಚಿನ್ನದ ಮುಲಾಮಿನ ಬ್ರೇಸ್‌ಲೆಟ್‌ಗಳನ್ನು ಹೊಂದಿವೆ. ಅತಿ ವಿಶೇಷ ಸಂದರ್ಭಗಳಿಗೆ ಶೋಭೆಯನ್ನು ನೀಡುತ್ತವೆ.

ಅತ್ಯುತ್ತಮವಾಗಿ ಸಿಂಗರಿಸಿಕೊಳ್ಳುವ ಸ್ತ್ರೀಯ ವಾಚ್ ಸಹ ಅಲಂಕಾರಪ್ರಾಯವಾಗಿರಬೇಕಲ್ಲವೇ?

hmt

utsav

ಎಚ್‌ಎಮ್‌ಟಿ, ಟೈಂ ಆರ್ಟ್, ಎಚ್‌ಎಮ್‌ಟಿ ಕಂಪೆನಿ ಷೋರೂಮ್ ಮತ್ತು ಎಚ್‌ಎಮ್‌ಟಿ ವಿಶಿಷ್ಟ ಷೋರೂಮ್‌ಗಳು ಹಾಗೂ ಅನುಮೋದಿತ ರೀಟೇಲ್ ಅಂಗಡಿಗಳಲ್ಲಿ ಲಭ್ಯ

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 00˝ Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.